

ರಂಜನೆ ಬೋಧನೆ ಪ್ರಚೋದನೆ


ಲಂಕೇಶ್ ಪತ್ರಿಕೆ

ಅಕ್ಟೋಬರ್ 8, 2008 ರೂ. 12/-



ದಂಡಪಿಂಡ ದೇಶಪಾಂಡೆ






ಮೈತ್ರಿ ಸಾಧ್ಯವೆ?



ಸಿಕ್ಕಿತು ಬಿಜೆಪಿ ಚಿಪ್ಪು



ಪುಟ್ಟರಾಜು ಫ್ಯಾಮಿಲಿಯ ಗೂಂಡಾಗಿರಿ

ತ್ತೂರು ಸರ್ಕಾರಿ ಕಾಲೇಜಿನಲ್ಲಿ RSS ಬೈಠಕ್



ಗ್ಗೇಶ್ ಪುಂಡಾಟಿಕೆ

Quote - Unquote


1985 ರಲ್ಲಿ ಅಸ್ಸಾಮ್ ಒಪ್ಪಂದ ಜಾರಿಗೆ ಬಂದನಂತರ ಭಾರತವನ್ನು ಅಕ್ರಮವಾಗಿ ಪ್ರವೇಶಿಸಿದ್ದ 2,200 ಬಾಂಗ್ಲಾ ದೇಶಿಗಳನ್ನು ವಾಪಸ್ಸು ಕಳುಹಿಸಲು ಇವತ್ತಿನವರೆಗೂ ವೆಚ್ಚವಾಗಿರುವ ಹಣ 400 ಕೋಟಿ ರೂಪಾಯಿಗಳು.

-ತೆಹಲ್ಕಾ ವರದಿ




ಮೂಲಭೂತವಾದವನ್ನು ವಿರೋಧಿಸುವ ಎಲ್ಲಾ ರಾಜಕೀಯ ಪಕ್ಷಗಳು ಒಂದುಗೂಡಬೇಕಿದೆ. ಚುನಾವಣಾ ಒಪ್ಪಂದ ಮಾಡಿಕೊಂಡು ಬಜೆಪಿಯನ್ನು ಸೋಲಿಸಬೇಕಿದೆ. ಹಿಂದೆ ಜಯಪ್ರಕಾಶ್ ನಾರಾಯಣ್ ಮತ್ತು ರಾಮ್ ಮನೋಹರ್ ಲೋಹಿಯಾರವರು ಮಾಡಿದ್ದನ್ನು ನಾವು ತೊಡೆದುಹಾಕಬೇಕಿದೆ.

-ಸಾಹಿತಿ ಯು.ಆರ್.ಅನಂತಮೂರ್ತಿ



ನಾನು ಬಜೆಪಿಯನ್ನು ಸೇರುವ ಮುನ್ನ ಮಾಜಿ ಕೇಂದ್ರ ಸಚಿವ ಅನಂತ್ ಕುಮಾರ್‌ನನ್ನು ಭೇಟಿಯಾಗಿ ಯಾಕೆ ಅವರ ಪಕ್ಷ ಕ್ರಿಶ್ಚಿಯನ್ ವಿರೋಧಿ ಎಂಬ ಕಲ್ಪನೆ ಇದೆ ಎಂದು ಕೇಳಿದೆ. ಅದಕ್ಕವರು ಕ್ರಿಶ್ಚಿಯನ್ನರ ಬಗ್ಗೆ ತಮ್ಮ ಪಕ್ಷಕ್ಕೆ ಯಾವುದೇ ಹಗೆತನವಿಲ್ಲ ಎಂದೂ, ಸ್ವತಃ ತಾವೇ ಕ್ರಿಶ್ಚಿಯನ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾಗಿಯೂ ಹೇಳಿದ್ದರು. ಆದರೆ ಆ ಪಕ್ಷದಲ್ಲಿ ನನಗಾದ ಅನುಭವ ತುಂಬಾ ನಿರಾಶೆಯನ್ನು ಮೂಡಿಸಿತು.

-ಮಾಜಿ ಬಿಜೆಪಿ ಸಂಸದ ಮತ್ತು ಮಾಜಿ ಪೊಲೀಸ್ ಅಧಿಕಾರಿ ಸಾಂಗ್ಲಿಯಾನ



ಭಾರತ ಭಯೋತ್ಪಾದನೆ ವಿರುದ್ಧ ಯುದ್ಧ ಮಾಡುತ್ತಿಲ್ಲ, ಬದಲಾಗಿ ಭಯೋತ್ಪಾದಕರು ಭಾರತದ ವಿರುದ್ಧ ಯುದ್ಧ ಮಾಡುತ್ತಿದ್ದಾರೆ. ರಾಜಕಾರಣಿಗಳು ಭಯೋತ್ಪಾದಕರೊಂದಿಗೆ ಜಗಳ ಮಾಡುತ್ತಿಲ್ಲ, ಬದಲಾಗಿ ಪರಸ್ಪರ ಜಗಳವಾಡುತ್ತಿದ್ದಾರೆ.

ಜನರ ಸುರಕ್ಷತೆ ಬಗ್ಗೆ ಕಾಳಜಿ ಹೊಂದಿರದ ರಾಜಕಾರಣಿಗಳಿಗೆ ಜನರ ಮತಗಳ ಬಗ್ಗೆ ಮಾತ್ರ ತುಂಬಾ ಕಾಳಜಿ ಇದೆ. ಆದ್ದರಿಂದ ಭಯೋತ್ಪಾದನೆ ವಿರುದ್ಧ ಮಾತಾಡುವ ಮೂಲಕ ಜನರ ಮತಗಳನ್ನು ಸೆಳೆಯಲು ಪ್ರಯತ್ನಿಸುತ್ತಾರೆ.

-ಅಂಕಣಕಾರ ರಾಜೆಂದರ್ ಪೂರಿ

ಪಾಕಿಸ್ತಾನವೇ ಸೃಷ್ಟಿಸಿದ ತಾಲಿಬಾನ್ ಮತ್ತು ಜಿಹಾದಿಗಳು ಇವತ್ತು ಪಾಕಿಸ್ತಾನದ ವಿರುದ್ಧ ಯುದ್ಧ ಸಾರುತ್ತಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರು 10,267 ಪಾಕಿಸ್ತಾನಿಯರನ್ನು ಕೊಂದಿದ್ದಾರೆ. ಈ ಸಂಖ್ಯೆ 1965 ರಲ್ಲಿ ನಡೆದ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಮಡಿದವರಿಗಿಂತ 6,000 ಹೆಚ್ಚು.

-ಫಾರೂಕ್ ಸಲೀಮ್, ಪಾಕಿಸ್ತಾನಿ ಅಂಕಣಕಾರ



ಇಪ್ಪತ್ತು ವರ್ಷಗಳ ಹಿಂದೆ ಜಾತ್ಯತೀತರು ಬಲವಾಗಿ ನಂಬಿದ್ದು ಏನೆಂದರೆ ಈ ದೇಶದಲ್ಲಿ ಕೋಮುವಾದಿ ಶಕ್ತಿಗಳು ಸಮಾಜದ ಅಂಚಿನಲ್ಲಿರುತ್ತವೆ ಎಂದು. ಅವರು ಇದನ್ನು ಎಷ್ಟು ಬಲವಾಗಿ ನಂಬಿದ್ದರೆಂದರೆ ಮುಂದೊಂದು ದಿನ ಇದೇ ಕೋಮುವಾದಿ ಶಕ್ತಿಗಳು ದೇಶದ ರಾಜಕೀಯ ರಂಗದಲ್ಲಿ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಳ್ಳಲಿವೆ ಎಂದು ಹೇಳಿದ್ದರೆ ನಗುತ್ತಿದ್ದರು. ಆದರೆ ಪರಿಸ್ಥಿತಿ ಇವತ್ತು ಹಿಂದು ಮುಂದಾಗಿದೆ. ಕೋಮುವಾದಿ ಶಕ್ತಿಗಳು ಇವತ್ತು ರಾಜಕೀಯ ರಂಗದಲ್ಲಿ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರಲ್ಲದೆ, ಜಾತ್ಯತೀತ ರಾಜಕಾರಣಿಗಳ ಮೆದುಳು ಸೇರಿದಂತೆ ಎಲ್ಲಾ ಕ್ಷೇತ್ರ ಮತ್ತು ವಲಯಗಳನ್ನು ಪ್ರವೇಶಿಸಿದ್ದಾರೆ.

-ಶ್ಯಾಮ್ ಹನ್ನಿ



ಭವಿಷ್ಯದಲ್ಲಿ ಎಂತಹ ಗುಟ್ಟು ಅಡಗಿದೆ?

ಮೊಬೈಲ್ ಫೋನ್ ರಿಂಗಾಯಿತು. ಅದನ್ನು ಎತ್ತಿದಾಗ ಆ ಕಡೆಯಿಂದ ಕಬೀರ್ "ಹಾಯ್, ಏನು ಮಾಡುತ್ತಿದ್ದೀಯಾ?" ಎಂದು ಕೇಳಿದ.

"ಏನೂ ಇಲ್ಲ, ಸ್ವರ್ಗದಲ್ಲಿದ್ದೇನೆ. ನೀನು ಏನು ಮಾಡುತ್ತಿದ್ದೀಯಾ?" ಎಂದು ಅವನನ್ನು ಕೇಳಿದೆ.

"ಇನ್ನೇನು ಮಾಡುತ್ತಿರುತ್ತೇನೆ. ಕೆಲಸ ಮಾಡ್ತಿದ್ದೇನೆ. ಒಂದು ಕಡೆ ಚರ್ಚ್ ಮೇಲೆ ದಾಳಿ, ಇನ್ನೊಂದು ಕಡೆ ಬಾಂಬ್ ಬ್ಲಾಸ್ಟ್, ಇನ್ನೆಲ್ಲೋ ಪ್ರವಾಹ. ಈ ದುರಂತಗಳ ಮಧ್ಯ ರಾಜಕಾರಣಿಗಳ ಹೇಳಿಕೆಗಳು. ನನ್ನ ಲೇಖನ ಬರೆದು ಮುಗಿಸಿದರೆ ಸಾಕು ಅನ್ನಿಸುತ್ತಿದೆ. ಕಿಟಕಿಯಿಂದ ಹೊರಗೆ ನೋಡಿದರೆ ಸಣ್ಣದಾಗಿ ಮಳೆ ಸುರಿಯುತ್ತಿದೆ. ಮರ, ಗಿಡ, ಗಾಳಿ ಎಲ್ಲ ಸ್ವಚ್ಛವಾಗಿ ಕಾಣಿಸುತ್ತಿವೆ...." ಎಂದು ಹೇಳುತ್ತಿದ್ದ ಕಬೀರ್‌ನನ್ನು ತಡೆದ ನಾನು,

"ಇಂತಹ ಸಂದರ್ಭದಲ್ಲಿ ನಿನಗೆ ಮನೆಯಲ್ಲಿರಬೇಕಿತ್ತು ಅನ್ನಿಸುತ್ತಿದೆ, ಅಲ್ವಾ? ನಾನು ಸ್ವರ್ಗದಲ್ಲಿದ್ದೇನೆ ಎಂದಿದ್ದು ಅದಕ್ಕೆ! ಅಪ್ಪನ ರಾಕಿಂಗ್ ಚೇರ್‌ನಲ್ಲಿ ಕೂತು, ಮೇಲೊಂದು ಬೆಚ್ಚಗಿನ ಶಾಲ್ ಹೊದ್ದು ಗಾರ್ಡನ್‌ನಲ್ಲಿ ಮಳೆಯ ಹನಿಗಳೊಂದಿಗೆ ಆಟವಾಡುತ್ತಿರುವ ಬಣ್ಣಬಣ್ಣದ ಹೂಗಳನ್ನು ನೋಡುತ್ತಾ ಮಧ್ಯೆ ಮಧ್ಯೆ ಪುಸ್ತಕವೊಂದನ್ನು ಓದುತ್ತಾ, ಅಮ್ಮ ಕೊಟ್ಟ ಖಾರ ಮಂಡಕ್ಕಿ ತಿನ್ನುತ್ತಾ, ಕಾಫಿ ಹೀರುತ್ತಾ ಇದ್ದೇನೆ. ಹೊಟ್ಟೆಕಿಚ್ಚು ಆಗ್ತಿದೆಯಾ?" ಎಂದು ಕೇಳಿದೆ.

"ಆಗದೇ ಇರುತ್ತಾ? ನೀನಂತೂ ನಿರುದ್ಯೋಗಿ, ಇನ್ನೇನು ಮಾಡ್ತಿಯಾ ಹೇಳು" ಎಂದು ಕಬೀರ್ ನನ್ನನ್ನು ರೇಗಿಸಲು ನೋಡಿದ.

"ನಿರುದ್ಯೋಗಿ ಅಂತೆಲ್ಲಾ ಅನ್ನಬೇಡ. ಬರುವ ಒಂದನೇ ತಾರೀಖಿನಿಂದ ಕೆಲಸಕ್ಕೆ ಹೋಗುತ್ತಿದ್ದೇನೆ ಗೊತ್ತಾ? ಹೆಗ್ಡೆ ಅಂಡ್ ಪಾಟೀಲ್ ಅಸೋಸಿಯೇಟ್ಸ್ ಸಂಸ್ಥೆ ನನಗೆ ತಿಂಗಳಿಗೆ ಹತ್ತು ಸಾವಿರ ಸಂಬಳ ನೀಡಲಿದೆ ಗೊತ್ತಾ?" ಎಂದೆ.

"ಹೌದಾ? ಕಂಗ್ರಾಟ್ಸ್. ಹಾಗಾದರೆ ಟ್ರೀಟ್ ಕೊಡಿಸು ಬಾ."

"ಇವತ್ತು ನಾನು ನನ್ನ ಗುಬ್ಬಚ್ಚಿ ಗೂಡಿನಲ್ಲಿ ಬೆಚ್ಚಗೆ ಕೂತಿದ್ದೇನೆ. ಟ್ರೀಟ್ ಎಲ್ಲಾ ಮೊದಲನೆ ಸಂಬಳ ಬಂದ ಮೇಲೇನೆ."

"ಅದೆಲ್ಲ ನಡೆಯಲ್ಲ, ಸಂಜೆ ಆರು ಗಂಟೆಗೆ ಸರಿಯಾಗಿ ಕಬ್ಬನ್ ಪಾರ್ಕ್‌ನ ವಿಕ್ಟೋರಿಯಾ ಸ್ಟಾಚ್ಯೂ ಹತ್ತಿರ ಸಿಗ್ತೇನೆ. ಈ ಎಲ್ಲಾ ಕೆಲಸದ ನಡುವೆ ನಾವಿಬ್ಬರೂ ಭೇಟಿಯಾಗಿ ನಾಲ್ಕು ದಿನಗಳಾಗಿದೆ. I will not take no for an answer. ಆರು ಗಂಟೆಗೆ ಭೇಟಿ, okay?" ಎಂದು ಕಬೀರ್ ಫೋನಿಟ್ಟ.


ಎರಡು ದಿನಗಳಿಂದ ಅಪ್ಪಟ ಸೋಂಭೇರಿಯಂತೆ ಮನೆಯಿಂದ ಹೊರಗೆ ಕದಲದೇ ಕೂತಿದ್ದ ನನಗೂ ಕಬೀರ್‌ನನ್ನು ಭೇಟಿ ಆಗಬೇಕೆನ್ನಿಸಿತು. ಬೆಚ್ಚಗಿನ ಶಾಲ್ ಬದಲಿಗೆ ಆತನ ಬೆಚ್ಚನೆ ನೋಟ ಬೇಕೆನ್ನಿಸಿತು. ಗಡಿಯಾರ ನೋಡಿದೆ. ಆಗಲೇ ಸಂಜೆ ಐದಾಗಿತ್ತು, ಎದ್ದು ಮುಖ ತೊಳೆದು, ರೆಡಿ ಆಗಿ, ರೈನ್‌ಕೋಟ್ ತೊಟ್ಟು ತನ್ನ ಸ್ಕೂಟರ್ ಏರಿದೆ. ಜಿನುಗುತ್ತಿದ್ದ ಮಳೆ, ನೀರು ತುಂಬಿದ್ದ ರಸ್ತೆ ಗುಂಡಿಗಳು, ಟ್ರಾಫಿಕ್ ಜಾಮ್, ಎಲ್ಲವನ್ನು ಮೀರಿ ಕಬ್ಬನ್ ಪಾರ್ಕಿಗೆ ಬಂದಾಗ ಸರಿಯಾಗಿ ಆರು ಗಂಟೆ ಆಗಿತ್ತು. ಪಾಪ್‌ಕಾರ್ನ್, ಪಾನಿಪುರಿಗಳ ಮಸಾಲೆಬೆರೆತ ಪರಿಮಳ, ಕಾಟನ್ ಕ್ಯಾಂಡಿಯ ಸುವಾಸನೆ ಎಲ್ಲವೂ ಬೇರೆಬೇರೆ ದಿಕ್ಕುಗಳಿಂದ ತೇಲಿಬರುತ್ತಿದ್ದವು. ಅವುಗಳನ್ನು ಆನಂದಿಸುತ್ತಿರುವಾಗ ಕಬೀರ್ ಕಾಣಿಸಿಕೊಂಡ.

"ಹಾಯ್" ಎಂದು ಹೇಳುತ್ತಲೇ ಆತ ಕಡಲೇಕಾಯಿಯನ್ನು ಉಪ್ಪಿನ ನೀರಿನಲ್ಲಿ ಬೇಯಿಸಿ ಮಾರುತ್ತಿದ್ದವನ ಗಾಡಿಯ ಹತ್ತಿರ ಹೋಗಿ ನಿಂತ. ನಾನು ಹುಬ್ಬೇರಿಸಿದಾಗ "ಇದೇ ನನಗೆ ಬೇಕಿರುವ ಟ್ರೀಟ್" ಎಂದ. ಎರಡು ಪೊಟ್ಟಣಗಳಿಗೆ ಆರ್ಡರ್ ಮಾಡಿ ಕಡಲೇ ಬೇಯುತ್ತಿದ್ದ ಪಾತ್ರೆಯಿಂದ ಹೊರಬರುತ್ತಿದ್ದ ಹಬೆಯ ಸುಗಂಧವನ್ನು ಆಘ್ರಾಣಿಸುತ್ತಾ ನಿಂತ.

ಅದೂಇದೂ ಮಾತನಾಡುತ್ತಾ, ಕಡಲೆ ತಿನ್ನುತ್ತಾ ಒಂದು ಬೆಂಚ್ ಮೇಲೆ ಕೂತೆವು. ಆಗ ನಮ್ಮ ಮುಂದೆ ಪ್ರತ್ಯಕ್ಷಳಾದ ಕೊರವಂಜಿಯೊಬ್ಬಳು "ಭವಿಷ್ಯ ಕೇಳ್ತೀರಾ? ನಿಮ್ಮ ಜೀವನದಾಗೆ ಏನೇನು ಕಾದೈತೆ ಅಂತ ಹೇಳಲಾ? ಬ್ಯಾಡ ಅನ್ನ ಬೇಡಿ. ಸಮಸ್ಯೆ ಬಾಳಾ ಐತೆ ಕಣಿ ಕೇಳಿ..." ಎಂದೆಲ್ಲಾ ಹೇಳಲಾರಂಭಿಸಿದಳು.

ನನಗೋ ಇಂಥದರಲ್ಲಿ ನಂಬಿಕೆ ಇಲ್ಲ. "ಬೇಡಮ್ಮ ಹೋಗು" ಅಂದೆ. ಆದರೆ ಕಬೀರ್ "Let us have some fun, ಸುಮ್ಮನಿರು ಶಾರು" ಎಂದು ನನಗೆ ಹೇಳಿ ಕಣಿ ಹೇಳುವವಳಿಗೆ "ಇಪ್ಪತ್ತು ರೂಪಾಯಿ ಕೊಡ್ತಿನಿ ಅಷ್ಟೆ, ನಮ್ಮ ಭವಿಷ್ಯ ಹೇಳು" ಅಂದ.

ಅಷ್ಟಕ್ಕೆ ಅವಳಿಗೆ ಸಂತೋಷ. ಬಡತನವನ್ನೇ ತನ್ನ ದೇಹದ ಮೇಲೆ ಹೊತ್ತಿದ್ದ ಅವಳು ಕಬೀರನ ಅಂಗೈ ಹಿಡಿದು, ಅದನ್ನು ಓದುವಂತೆ ನಟಿಸುತ್ತಾ, ನಮ್ಮಿಬ್ಬರ ಸಂಬಂಧ ಎಂತಹದ್ದಿರಬಹುದೆಂದು ಗ್ರಹಿಸಲು ಪ್ರಯತ್ನಿಸುತ್ತಾ ಕಣಿ ಹೇಳಲು ಪ್ರಾರಂಭಿಸಿದಳು. ಹತ್ತು ನಿಮಿಷಗಳಲ್ಲಿ ಕಬೀರನ ಭವಿಷ್ಯದಲ್ಲಿ ಅಪಾರ ಯಶಸ್ಸು, ಐಶ್ವರ್ಯ ಇದೆ ಎಂದೂ, ಮುಂದೊಂದು ದಿನ ಸ್ವಲ್ಪಮಟ್ಟಿಗಿನ ಆರೋಗ್ಯ ಸಮಸ್ಯೆ ಎದುರಾಗುತ್ತದೆಂದೂ ನನ್ನತ್ತ ನೋಡುತ್ತಾ ಕಬೀರ್ ಸುಖ ಸಂಸಾರಿಯಾಗಿರುತ್ತಾನೆಂದೂ.....ಹೀಗೆ ಒಂದಿಷ್ಟು ಭರವಸೆ, ಆತಂಕ, ನೆಮ್ಮದಿ ಮೂಡಿಸುವ ವಿಷಯಗಳನ್ನು ಹೇಳಿ ತನ್ನ ಭವಿಷ್ಯವಾಣಿಯನ್ನು ಅಂತ್ಯಗೊಳಿಸಿದಳು. ಮಧ್ಯೆಮಧ್ಯೆ ಅವಳನ್ನು ಕಿಚಾಯಿಸಲು ಕಬೀರ್ ಎಂತೆಂಥದ್ದೊ ಪ್ರಶ್ನೆಗಳನ್ನ ಕೇಳುತ್ತಿದ್ದ. "ನನ್ನ ಜೊತೆ ಇರೋ ಈ ಹುಡುಗಿ ನನ್ನ ಹೆಂಡತಿ ಆಗ್ತಾಳಾ?" ಎಂದು ಕೇಳಿದ. ಆದರೆ ನಾನು ಕೈಕಟ್ಟಿ ಕೊಂಡು, ಮುಖ ಗಂಟಿಕ್ಕಿಕೊಂಡು ಕೂತಿರುವುದನ್ನು ಗಮನಿಸಿದ ಆಕೆ ಅವನ ಮಾತಿಗೆ ಸಿಕ್ಕಿಹಾಕಿಕೊಳ್ಳಲಿಲ್ಲ, ಆಕೆ ನಿಜವಾಗಲು ಕಣಿ ಕಲಾವಿದೆ!



ಇದನ್ನೆಲ್ಲ ಒಂದು ಹಾಸ್ಯ ನಾಟಕವೆಂಬಂತೆ ನೋಡುತ್ತಿದ್ದ ನನ್ನ ಕೈ ಹಿಡಿದು ಭವಿಷ್ಯ ಹೇಳಲು ಆಕೆ ಮುಂದಾದಳು. ಆದರೆ ಅದಕ್ಕೆ ಸುತಾರಾಮ್ ಒಪ್ಪದ ನಾನು "ಬೇಕಿದ್ದರೆ ಐದು ರೂಪಾಯಿ ಕೊಡ್ತೇನೆ, ಸುಮ್ಮನೆ ಹೋಗು" ಎಂದೆ. "ನಾನೇನು ಭಿಕ್ಷೆ ಬೇಡ್ತಿದೀನಾ? ನಿಂಗೆ ಒಳ್ಳೆದಾಗಲಿ ಅಂತ ಅಂದೆ. ಐದು ರೂಪಾಯಿ ಕೊಡು ಹೊಗ್ತೀನಿ" ಅಂದಳು. ನಮ್ಮಿಬ್ಬರಿಂದ ಇಪ್ಪತ್ತೈದು ರೂಪಾಯಿ ಪಡೆದು ಅವತ್ತಿನ ರಾತ್ರಿಯ ಊಟಕ್ಕೆ ಸಾಕಾಗುವಷ್ಟು ಗಳಿಸಿರುವ ನೆಮ್ಮದಿಯಿಂದ ಹೊರಟಳು.

"ಇದೇನಿದು ಕಬೀರ್. ಕಣಿ ಕೇಳೋದು, ಹಸ್ತ ತೋರಿಸಿ ಭವಿಷ್ಯ ಕೇಳೋದು. ಇದೆ[ಲ್ಲಾ] ಸ್ಟುಪಿಡ್. ನಿನಗೂ ಇಂಥದ್ದರಲ್ಲಿ ನಂಬಿಕೆನಾ?" ಎಂದೆ.

"ನಿಂಗೊಂದು ನಿಜ ಕತೆ ಹೇಳ್ತೀನೆ ಕೇಳು. ಇತ್ತೀಚೆಗೆ ಸುಮಾ ಎಂಬುವವರು ನಮ್ಮ ಆಫೀಸಿಗೆ ಬಂದಿದ್ದರು. ಅವರ ತಂದೆ ಹಿಂದೊಮ್ಮೆ ಭಾರತದಲ್ಲೇ ಬಹಳ ಪ್ರಖ್ಯಾತ ಜ್ಯೋತಿಷಿಯಾಗಿದ್ದರು. ರಾಜಕಾರಣಿಗಳು, ಸಿನಿಮಾ ತಾರೆಯರು, ಜನಸಾಮಾನ್ಯರು ಎಲ್ಲರೂ ಅವರಿಂದ ತಮ್ಮ ಭವಿಷ್ಯ ಹೇಳಿಸಿಕೊಳ್ಳುತ್ತಿದ್ದರು. ಸುಮಾ ಅವರಿಗೆ ಈಗ ಸುಮಾರು 50 ವರ್ಷ ವಯಸ್ಸಾಗಿರಬೇಕು. ಮೈಸೂರಿನ ಅದ್ಯಾವುದೋ ಸಂಘದ ಬಗ್ಗೆ ಹೇಳಲು ಬಂದಿದ್ದರು. ಆಗ ನನಗೆ ಕುತೂಹಲವಾಗಿ 'ನಿಮಗೆ ಈ ಜ್ಯೋತಿಷ್ಯದಲ್ಲಿ ನಂಬಿಕೆ ಇದೆಯಾ?' ಅಂತ ಕೇಳಿದೆ. ಅದಕ್ಕವರು ಏನಂದರು ಗೊತ್ತಾ? 'ನೋಡಿ, ನನ್ನ ತಂದೆ ಜ್ಯೋತಿಷ್ಯ ಹೇಳುವ ಮೂಲಕವೇ ಹಣ ಸಂಪಾದಿಸಿ ನಮ್ಮನ್ನೆಲ್ಲ ಸಾಕಿದರು, ಓದಿಸಿದರು. ಅಷ್ಟರಮಟ್ಟಿಗೆ ಜ್ಯೋತಿಷ್ಯದ ಬಗ್ಗೆ ನನಗೆ ಗೌರವವಿದೆ. ಆದರೆ ಅದನ್ನ ನಾನು ನಂಬುವುದಿಲ್ಲ' ಅಂದರು. ನನಗೆ ಅಚ್ಚರಿಯಾಯಿತು. 'ಏಕೆ?' ಅಂತ ಕೇಳಿದೆ. 'ಏಕೆಂದರೆ ಜ್ಯೋತಿಷ್ಯ ನನ್ನ ಜೀವನದಲ್ಲೇ ಸುಳ್ಳಾಗಿದೆ. ಎಲ್ಲರ ಭವಿಷ್ಯ ಹೇಳುತ್ತಿದ್ದ ನನ್ನಪ್ಪ ಜಾತಕ, ಇತ್ಯಾದಿಗಳನ್ನ ನೋಡಿಯೇ ನನಗೆ ಮದುವೆ ಮಾಡಿಸಿದರು. ಆದರೆ ಮದುವೆಯಾದ ಹಲವು ವರ್ಷಗಳಲ್ಲೇ ನನ್ನ ಗಂಡ ಹೃದಯಾಘಾತದಿಂದ ತೀರಿಕೊಂಡರು. ನಮಗೆ ಆಗ ಒಬ್ಬ ಮಗನಿದ್ದ. ಆತನಿಗಾಗಿ ನಾನು ಬದುಕಿದ್ದೆ. ಆದರೆ ಅವನು ಹತ್ತು ವರ್ಷದವನಾಗಿದ್ದಾಗ ರಸ್ತೆ ಅಪಘಾತದಲ್ಲಿ ಸತ್ತು ಹೋದ. ಅವತ್ತಿನಿಂದ ನಾನು ಒಬ್ಬಂಟಿಯಾಗಿ ಜೀವಿಸುತ್ತಿದ್ದೇನೆ. ಜ್ಯೋತಿಷ್ಯ ಎಂಬುದು ಒಂದು ವಿಜ್ಞಾನವಾಗಿದ್ದರೆ ನನ್ನ ಬದುಕು ಹೀಗಾಗುತ್ತೆ ಎಂದು ಮೊದಲೇ ಗೊತ್ತಾಗಬೇಕಿತ್ತಲ್ಲವೇ?' ಎಂದು ಸುಮಾರವರು ನಿಟ್ಟುಸಿರು ಬಿಟ್ಟರು" ಎಂದು ಕಬೀರ್ ಸುಮಾರ ವೃತ್ತಾಂತವನ್ನು ಹೇಳಿದ.

"ಇತ್ತೀಚೆಗಂತೂ ಭವಿಷ್ಯ ಹೇಳೋದು ಒಂದು ದೊಡ್ಡ ದಂಧೆಯಾಗಿದೆ. ಅವರ ಜೊತೆ ವಾಸ್ತು ಅಂತೆ, ನ್ಯೂಮರಾಲಜಿ ಅಂತೆ, ಹೋಮ ಹವನಗಳಂತೆ ಎಲ್ಲವೂ ಹೆಚ್ಚಾಗಿ ಜನ ಮೂಢನಂಬಿಕೆಗಳಲ್ಲಿ ಮುಳುಗಿದ್ದಾರೆ. ಅಪ್ಪ ಹೇಳ್ತಾರೆ, ಅವರ ಕಾಲದಲ್ಲಿ ಇಂಥದ್ದನ್ನೆಲ್ಲ ನಂಬುವವರು ಕಡಿಮೆ ಇದ್ದು ಅವರೆಲ್ಲ ಆಗ ವಿಚಿತ್ರ ಜನರಂತೆ ಕಾಣಿಸುತ್ತಿದ್ದರಂತೆ. ಆದರೀಗ ಪರಿಸ್ಥಿತಿ ಸಂಪೂರ್ಣವಾಗಿ ಉಲ್ಟಾಪಲ್ಟಾ ಆಗಿದೆ. ಇವತ್ತು ಇಂಥದ್ದನ್ನೆಲ್ಲಾ ನಂಬುವವರೇ ಹೆಚ್ಚಾಗಿ ಇವತ್ತು ಜ್ಯೋತಿಷ ನಂಬದಿರುವವರೇ ವಿಚಿತ್ರವಾಗಿ ಕಾಣಿಸಲಾರಂಭಿಸಿದ್ದಾರೆ" ಎಂದೆ.

"ಅದೆಲ್ಲ ಸರಿ, ಆದರೆ ನನ್ನನ್ನು ಮದುವೆ ಆಗ್ತಿಯಾ ಅಂತ ಪ್ರಸ್ತಾಪ ಮಾಡಿದಾಗಲೆಲ್ಲಾ ನೀನು ಅದು ಹೇಗೋ ಉತ್ತರಿಸದೆ ತಪ್ಪಿಸಿಕೊಳ್ಳುತ್ತೀಯಾ. ಅದಕ್ಕೆ ಏನು ಅಂದುಕೊಂಡಿದ್ದೀನಿ ಗೊತ್ತಾ? ಯಾವುದಾದರೂ ಜ್ಯೋತಿಷಿ ನಾನು ನನ್ನ ಹೆಸರನ್ನು ಬದಲಾಯಿಸಿಕೊಂಡರೆ, ಅಥವಾ ವಾಸ್ತು ಸರಿ ಇರೋ ಮನೆಯನ್ನು ಬಾಡಿಗೆ ಹಿಡಿದರೆ ನೀನು ಖಂಡಿತವಾಗಿ ನನ್ನನ್ನು ಮದುವೆ ಆಗ್ತಿಯಾ ಅಂತ ಅಂದರೆ ಅದನ್ನು ಮಾಡಲು ನಾನು ರೆಡಿ" ಎಂದು ನಕ್ಕ.

"ಹೌದಾ, ಕೋತಿ? ಹಾಗಾದರೆ ನಿನ್ನ ಹೆಸರನ್ನು ಮಿಸ್ಟರ್ ಮಂಕಿ ಅಂತ ಬದಲಾಯಿಸಿಕೊ, ಆಗ ನಿನ್ನನ್ನ ಮದುವೆ ಆಗ್ತೇನೆ" ಅಂದೆ.

"ಹಾಗೆ ಮಾಡುತ್ತೇನೆ ಮಿಸೆಸ್ ಮಂಕಿ" ಎಂದು ಕಬೀರ್ ಹೇಳಿದಾಗ ಇಬ್ಬರೂ ನಕ್ಕೆವು.

"ಸಾಕು ಈ ಕಾಡು ಹರಟೆ. ಕತ್ತಲಾಯಿತು, ನಡಿ ಮನೆಗೆ ಹೋಗೋಣ" ಎಂದೆ.

"ನೋಡು, ಮತ್ತೆ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ ನೀನು" ಎಂದು ಕಬೀರ್ ಗೊಣಗಿದ.

"ಇಪ್ಪತ್ತು ರೂಪಾಯಿ ಕೊಟ್ಟರೂ ಕಣಿ ಹೇಳುವವಳು ನಿನ್ನ ಈ ಪ್ರಶ್ನೆಗೆ ಉತ್ತರ ಕೊಡಲಿಲ್ಲ, ಇನ್ನು ನಾನು ಬಿಟ್ಟಿಯಾಗಿ ಉತ್ತರ ನೀಡುತ್ತೇನಾ?" ಎಂದು ಹೇಳುತ್ತಲೇ ಕಬೀರನ ಕೈಹಿಡಿದು ನನ್ನ ಸ್ಕೂಟರ್ ನಿಲ್ಲಿಸಿದ್ದ ಕಡೆ ನಡೆಯಲಾರಂಭಿಸಿದೆ.

■ ಶಾರದೆ

ಲಂಕೇಶ್

ಯಡಿಯೂರಪ್ಪ ಲಿಂಗಾಯತನೇ?



ಕಂಡಹಾಗೆ

■ ಗೌರಿ ಲಂಕೇಶ್

ಚರ್ಚ್ ಮೇಲಿನ ದಾಳಿಗಳ ವಿರುದ್ಧ ಮೊನ್ನೆ (ಸೆ. 3) ದಾವಣಗೆರೆಯಲ್ಲಿ ನಮ್ಮ ಕರ್ನಾಟಕ ಕೋಮು ...ಹಾರ್ದ ವೇದಿಕೆ ಮತ್ತು ಇತರೆ ಪ್ರಗತಿಪರ ಸಂಘಟನೆ ...ಳು ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ನಾನು ...ಮಾಡಿದ ಭಾಷಣದ ಬಗ್ಗೆ ಕೆಲವರು ತಕರಾರೆತ್ತಿದ್ದಾರೆ. ...ದರಲ್ಲೂ ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಘಟಕದ ಅಧ್ಯಕ್ಷ ಜೆ. ಶಿವಯೋಗಪ್ಪ ಮತ್ತು ಕಾರ್ಯದರ್ಶಿ ನಾಗಭೂಷಣ ತೌಡೂರು ...ಂಬುವವರು ತಮ್ಮ ಮೈಕೈ ಪರಚಿಕೊಂಡು "ಗೌರಿ ...ಂಕೇಶ್‌ಗೆ ಲಿಂಗಾಯತರ ಬಗ್ಗೆ ಮಾತನಾಡುವ ಹಕ್ಕಿಲ್ಲ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ...ಂಗಾಯತರಾಗಿ ಉಳಿದಿಲ್ಲ, ಅವರಿಗೆ ಬಸವತತ್ವ ...ೊತ್ತಿಲ್ಲ ಎಂದು ಹೇಳುವ ಹಕ್ಕು ಗೌರಿ ಲಂಕೇಶ್‌ಗಿಲ್ಲ, ...ೌರಿ ಲಂಕೇಶ್ ಲಿಂಗ ಧರಿಸಿಲ್ಲ, ಆಕೆಯ ವಿರುದ್ಧ ...ನೂನುಕ್ರಮ ತೆಗೆದುಕೊಳ್ಳಬೇಕು" ಎಂದು ಪತ್ರಿಕಾ ...ೇಳಿಕೆ ಕೊಟ್ಟು ಅರಚಾಡಿದ್ದಾರೆ.

ಅವರಿಗೆ ಮತ್ತು ಇತರೆ ಲಿಂಗಾಯತರಿಗೆ ಹಾಗೂ ...ಈ ರಾಜ್ಯದ ಪ್ರಜ್ಞಾವಂತರೊಂದಿಗೆ ನನ್ನ ಪ್ರಕಾರ ಯಾವ ...ಾರಣಗಳಿಗೆ ಯಡಿಯೂರಪ್ಪ ಲಿಂಗಾಯತನಾಗಿ ...ಉಳಿದಿಲ್ಲ, ಅವರಿಗೆ ಬಸವತತ್ವ ಗೊತ್ತಿಲ್ಲ ಎಂಬುದನ್ನು ...ಲ್ಲಿ ಹಂಚಿಕೊಳ್ಳಬೇಕು ಅನ್ನಿಸುತ್ತಿದೆ.

ತೀರಾ ಆಳಕ್ಕೆ ಹೋಗುವ ಮುನ್ನ ಮೇಲುನೋಟಕ್ಕೆ ...ಾಣಿಸುವ ಹಲವು ವಿಚಾರಗಳನ್ನು ಗಮನಿಸಿ. ...ಉದಾಹರಣೆಗೆ ತಾನೋರ್ವ ಲಿಂಗಾಯತ ಎಂದು ...ೇಳಿಕೊಂಡೇ ಲಿಂಗಾಯತರ ಮತಗಳನ್ನು ಪಡೆದು ಮುಖ್ಯಮಂತ್ರಿ ಆಗಿರುವ ಯಡಿಯೂರಪ್ಪನ ಮುಖ ...ಮನಿಸಿ. ಅಲ್ಲಿ ನಿಮಗೆ ಕಾಣಿಸುವುದು ವಿಭೂತಿ ...ಾರಣೆ ಅಲ್ಲ, ಬದಲಾಗಿ ಮುರಳಿ ಮನೋಹರ ...ೋಷಿ ಎಂಬ ಬ್ರಾಹ್ಮಣ್ಯಶಾಹಿ ಧರಿಸುವ, RSS ...ಂಕೇತವಾಗಿರುವ ಕುಂಕುಮ! ನಿಜವಾದ ಲಿಂಗಾಯತ ...ುರುಷರು ಕುಂಕುಮ ಧರಿಸುತ್ತಾರೆಯೇ?

ಇನ್ನೊಂದು ವಿಚಾರ. ಯಡಿಯೂರಪ್ಪನವರು ತಮ್ಮ ...ಬ್ಬರು ಪುತ್ರರತ್ನರಿಗೆ ಇಟ್ಟಿರುವ ಹೆಸರುಗಳಾದರೂ ...ಂತಹವು. ವಿಜಯೇಂದ್ರ ಮತ್ತು ರಾಘವೇಂದ್ರ. ಈ ...ರಡೂ ಹೆಸರುಗಳು ಲಿಂಗಾಯತ ಪರಂಪರೆಯ ...ೆಸರುಗಳಲ್ಲ, ಬದಲಾಗಿ ಪುರೋಹಿತಶಾಹಿ ಮಾಧ್ವ ...ರಂಪರೆಯಲ್ಲಿ ಬರುವ ಹೆಸರುಗಳು. ಇನ್ನು ತಮ್ಮ ...ೂರು ಹೆಣ್ಣುಮಕ್ಕಳಿಗೆ ಯಡಿಯೂರಪ್ಪ ಇಟ್ಟಿರುವ ...ೆಸರುಗಳಲ್ಲಿ ಒಬ್ಬಾಕೆಯದ್ದು ಮಾತ್ರ ಶೈವಪರಂಪರೆ ...ಯದ್ದಾದರೆ, ಇನ್ನಿಬ್ಬರದ್ದು ಬ್ರಾಹ್ಮಣಶಾಹಿ ಪರಂಪರೆ ...ಯದ್ದು.

ಮೇಲ್ನೋಟಕ್ಕೆ ಕಾಣಿಸುವ ಇಂತಹ ವಿಚಾರಗಳು ...ೀರಾ ಕ್ಷುಲ್ಲಕ ಎನಿಸುತ್ತವೆ ಬಿಡಿ. ಆದರೆ ತಮ್ಮ ...ರ್ಥನೆಯಲ್ಲಿ, ಕಾರ್ಯದಲ್ಲಿ, ನಿಲುವುಗಳಲ್ಲಿ ಯಡಿ ...ಯೂರಪ್ಪ ಎಷ್ಟು ಲಿಂಗಾಯತರಾಗಿದ್ದಾರೆ, ಎಷ್ಟರಮಟ್ಟಿಗೆ ...ಬಸವತತ್ವವನ್ನು ಪಾಲಿಸುತ್ತಾರೆ?

ಚಿಕ್ಕಮಕ್ಕಳಿಗೂ ಗೊತ್ತಿರುವಂತೆ ಬಸವಣ್ಣ ದೇವಸ್ಥಾನ ...ಸಂಸ್ಕೃತಿಯನ್ನು ವಿರೋಧಿಸಿದ್ದರು. ದೇಹವೇ ದೇಗುಲ ...ವೆನ್ನು ಎಂದಿದ್ದರು. ಎಲ್ಲಿ ಬ್ರಾಹ್ಮಣರೇತರಿಗೆ ಪ್ರವೇಶ, ...ಮಾನತೆ ಇಲ್ಲವೋ ಅಂತಹ ಜಾಗಗಳು ತಮಗೆ ...ಡವೆಂದು ದೇವಸ್ಥಾನಗಳನ್ನು ತಿರಸ್ಕರಿಸಿದ್ದರು. ಆ ...ಮೂಲಕ ಶೂದ್ರರಲ್ಲಿ, ದೀನದಲಿತರಲ್ಲಿ ಆಧ್ಯಾತ್ಮಿಕ ಸ್ವಾತಂತ್ರ್ಯ ...ಮತ್ತು ಸ್ವಾಭಿಮಾನವನ್ನು ಮೂಡಿಸಿದ್ದರು. ಆದರೆ ಯಡಿ ...ಯೂರಪ್ಪ ಪ್ರತಿ ದಿನ, ಪ್ರತಿ ಜಾಗದಲ್ಲಿ ಮಾಡುವುದೇನು? ...ದ ಕಂಡ ದೇವಸ್ಥಾನಗಳಿಗೆ ಭೇಟಿ ನೀಡಿ ಪ್ರಾರ್ಥಿ ...ಸುವುದು!

ಮೂಲತಃ ಮಂಡ್ಯ ಜಿಲ್ಲೆಯವರಾದ ಯಡಿಯೂರಪ್ಪ ...ಲಿಂಗಾಯತ ಜಾತಿಯಲ್ಲಿ ಹುಟ್ಟಿದ್ದರಿಂದ ಅವರ ತಂದೆ ...ಯವರು ತಮ್ಮ ಮನೆ ದೇವರಾಗಿದ್ದ ಪುಣ್ಯ ಕ್ಷೇತ್ರವಾದ ಯಡಿಯೂರು ಸಿದ್ಧಲಿಂಗೇಶ್ವರ ಮಠದ ...ಯಡಿಯೂರು ಹೆಸರನ್ನೇ ತಮ್ಮ ಮಗನಿಗೆ ಇಟ್ಟಿದ್ದಾರೆ. ...ಕಳೆ ಇವತ್ತು ಈತ ಯಡಿಯೂರು ಮಠಕ್ಕೆ ...ಮಾಡುತ್ತಿರುವ ಅನ್ಯಾಯ, ಅದೇ ಹೊತ್ತಿಗೆ ಪುರೋಹಿತ ...ರಾಮಚಂದ್ರಾಪುರದ ರಾಘವೇಶ್ವರ ಸ್ವಾಮಿಗೆ ...ಮಾಡುತ್ತಿರುವ ಸೇವೆ- ಇವೆರಡನ್ನೂ ಇಟ್ಟು ಹೋಲಿಕೆ ...ಮಾಡಿದರೆ ಬಸವ ತತ್ವಕ್ಕೂ, ಲಿಂಗಾಯತ ಧರ್ಮಕ್ಕೂ, ...ಯಡಿಯೂರಪ್ಪ ನಿಷ್ಠರಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಈಗಾಗಲೇ ಎಲ್ಲರಿಗೆ ಗೊತ್ತಿರುವಂತೆ ಯಡಿ ...ಯೂರು ಸಿದ್ಧಲಿಂಗೇಶ್ವರ ಕ್ಷೇತ್ರವು ಒಂದು ದೇವಸ್ಥಾನವೇ ಅಲ್ಲ, ಬದಲಾಗಿ ಅದು ತೋಂಟದಾರ್ಯ ಪರಂಪರೆಯ ಮಠ. ಇದರ ಬಗ್ಗೆ ದಾಖಲೆಗಳಿವೆ ಶಾಸನಗಳಿವೆ. ಆದ್ದರಿಂದ ಅದನ್ನು ತಮ್ಮ ಮಠಕ್ಕೆ ನೀಡಬೇಕೆಂದು ಗದುಗಿನ ತೋಂಟದಾರ್ಯ ಶ್ರೀಗಳು ಕೇಳಿದ್ದಾರೆ. ಆದರೆ ಅವರ ಪತ್ರವನ್ನು ಲಿಂಗಾಯತರಾದ ಯಡಿಯೂರಪ್ಪ ಕಸದಬುಟ್ಟಿಗೆ ಎಸೆದಿದ್ದಾರಲ್ಲದೆ, ಅದರ ಬಗ್ಗೆ ಇಲ್ಲಿಯವರೆಗೂ ತುಟಿಪಿಟಿಕ್ ಅಂದಿಲ್ಲ. ಅದಕ್ಕಿಂತ ಹೇಯವಾದ ಇನ್ನೊಂದು ಪ್ರಕರಣ ಸೆ. 23 ರಂದೇ ಯಡಿಯೂರಿನಲ್ಲಿ ನಡೆಯಿತು. ಅತ್ತ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು ದಾವಣಗೆರೆಯಲ್ಲಿನ ನಮ್ಮ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸುತ್ತಿರುವಾಗಲೇ, ಇತ್ತ ಯಡಿಯೂರಿನ ಸಿದ್ಧಲಿಂಗೇಶ್ವರ ಮಠದ ಆವರಣದಲ್ಲಿ ಹಾಕಲಾಗಿರುವ ತೋಂಟ ಸಿದ್ಧಲಿಂಗ ಸ್ವಾಮಿ ಶಿಷ್ಯ ಪರಂಪರೆಯ ಸ್ವಾಮಿಗಳ ಹೆಸರುಗಳನ್ನುಳ್ಳ ನಾಮಫಲಕವನ್ನು ಕಿತ್ತು ಹಾಕಿದ್ದರ ಬಗ್ಗೆ ದೊಡ್ಡ ಜಗಳವೇ ನಡೆಯಿತು.

ಏನಾಗಿತ್ತೆಂದರೆ ರಾತ್ರಿ ವೇಳೆ ಅದನ್ನು ಯಾರೋ ಕಿತ್ತು ಹಾಕಿದ್ದರು. ಬೆಳಗ್ಗೆ ಅದು ನಾಪತ್ತೆಯಾಗಿರುವುದನ್ನು ಗಮನಿಸಿದ ಹಲವರು ಆಡಳಿತ ಮಂಡಳಿಯನ್ನು ಪ್ರಶ್ನಿಸಿದರು. ಆದರೆ ಅವರೊಂದಿಗೆ ಆಡಳಿತ ಮಂಡಳಿಯವರು ಜಗಳಕ್ಕೆ ಬಿದ್ದರು. ಕೊನೆಗೆ ಪೊಲೀಸರು ಮಧ್ಯ ಪ್ರವೇಶಿಸಿ ನಾಮಫಲಕವನ್ನು ಯಥಾಸ್ಥಿತಿಯಲ್ಲಿ ಇಡಲಾಗುತ್ತದೆಂದು ಭರವಸೆ ನೀಡಿದ ನಂತರವೇ ಶಾಂತಿ ಸ್ಥಾಪನೆಯಾಯಿತು.

ರಾತ್ರಿ ವೇಳೆ ತೋಂಟದಾರ್ಯ ಶಿಷ್ಯರ ನಾಮಫಲಕವನ್ನು ಕಿತ್ತು ಹಾಕಿದ್ದರ ಹಿಂದೆ 'ಲಿಂಗಾಯತ' ಯಡಿಯೂರಪ್ಪನ ತಂತ್ರ ಮತ್ತು ಆಡಳಿತ ಮಂಡಳಿಯಲ್ಲಿರುವ ಪುರೋಹಿತಶಾಹಿಗಳ ಕುತಂತ್ರ ಅಡಗಿದೆ ಎಂಬುದೂ ಮೇಲುನೋಟಕ್ಕೆ ಗೋಚರಿಸುತ್ತದೆ. ಈಗಾಗಲೇ ಯಡಿಯೂರು ಸಿದ್ಧಲಿಂಗೇಶ್ವರ ಎಂಬ ವಿರಕ್ತ ಮಠದಲ್ಲಿ ಅದರ ತತ್ವ ಸಿದ್ಧಾಂತಕ್ಕೆ ವಿರುದ್ಧವಾದ ವೈದಿಕಶಾಹಿ, ಬ್ರಾಹ್ಮಣಶಾಹಿ ಕಂದಾಚಾರಗಳು ನಡೆಯುತ್ತಿವೆಯಲ್ಲದೆ, ಅದನ್ನೂ ತಮ್ಮ ವಶಕ್ಕೆ ಪಡೆಯಲು ಹಲವು ಬ್ರಾಹ್ಮಣರು ಸಂಚು ಹಾಕಿ ಕೂತಿದ್ದಾರೆ. ಅವರೆಲ್ಲರಿಗೆ ಮತ್ತು ಯಡಿಯೂರಪ್ಪನಿಗೆ ತೊಡರುಗಾಲಾಗಿರುವುದು ಆ ಕ್ಷೇತ್ರವು ದೇವಸ್ಥಾನವಲ್ಲ, ಬದಲಾಗಿ ತೋಂಟದಾರ್ಯ ಮಠಕ್ಕೆ ಸೇರಿರುವ ಮಠ ಎಂಬ ಸಾಕ್ಷ್ಯಗಳು.

ಲಿಂಗಾಯತನಾಗಿದ್ದು ಒಂದು ಲಿಂಗಾಯತ ಮಠಕ್ಕೆ ಇಂತಹ ದ್ರೋಹ ಬಗೆದ ಯಡಿಯೂರಪ್ಪ ಅದೇ ವೇಳೆ ಬ್ರಾಹ್ಮಣಶಾಹಿ ರಾಮಚಂದ್ರಾಪುರ ಮಠದ ಸ್ವಾಮಿ ರಾಘವೇಶ್ವರನ ಗುಲಾಮನಂತೆ ವರ್ತಿಸಿದ್ದಾರೆ. ಗೋಕರ್ಣಕ್ಕೂ, ರಾಮಚಂದ್ರಾಪುರ ಮಠಕ್ಕೂ ಯಾವ ಸಂಬಂಧ ಇಲ್ಲದಿದ್ದರೂ ಯಡಿಯೂರಪ್ಪ ಅಧಿಕಾರಿಗಳ ಸಲಹೆಗಳನ್ನು ತಿರಸ್ಕರಿಸಿ, ಕಾನೂನುಗಳನ್ನು ಬದಿಗೊತ್ತಿ ಜನಾಭಿಪ್ರಾಯವನ್ನೂ ಧಿಕ್ಕರಿಸಿ ಆ ದೇವಸ್ಥಾನವನ್ನು ರಾಘವೇಶ್ವರ ಸ್ವಾಮಿಗೆ ನೀಡಿದ್ದಾರೆ. ಈಗ ಗೋಕರ್ಣ ದೇವಸ್ಥಾನವನ್ನು ರಾಘವೇಶ್ವರ ತನ್ನ ಸ್ವಂತ ಹೆಸರಿಗೆ ಮಾಡಿಸಿಕೊಂಡಿದ್ದರೂ ಯಡ್ಡಿ ತೆಪ್ಪಗಿದ್ದಾರೆ. ಇದು ಲಿಂಗಾಯತನೋರ್ವನ ಲಕ್ಷಣವೇ?

ಇನ್ನು ಯಾವ ಲಿಂಗಾಯತರೂ ತಮ್ಮ ಪೂಜಾ ಸಮಾರಂಭಗಳಲ್ಲಿ ಅಗ್ನಿಪೂಜೆ ಮಾಡುವುದಿಲ್ಲ, ಯಾಕೆಂದರೆ ಬಸವತತ್ವ ಹುಟ್ಟಿದ್ದೇ ಬ್ರಾಹ್ಮಣಶಾಹಿಗಳ ಇಂಥ ಮೂಢನಂಬಿಕೆ ಮತ್ತು ದುಂದುವೆಚ್ಚದ ಸಂಪ್ರದಾಯಗಳನ್ನು ವಿರೋಧಿಸಿ. ಅಂದಹಾಗೆ ಅಗ್ನಿಗೆ ಪವಿತ್ರಗೊಳಿಸುವ ಶಕ್ತಿ ಇದೆ ಎಂಬುದನ್ನು ಲಿಂಗಾಯತರು ನಂಬುವುದಿಲ್ಲ, ಆದ್ದರಿಂದ ಅವರು ತಮ್ಮ ಮೃತರನ್ನು ಮಣ್ಣು ಮಾಡುತ್ತಾರೆ, ಬ್ರಾಹ್ಮಣರಂತೆ ಸುಡುವುದಿಲ್ಲ.

ಆದರೆ ಯಡಿಯೂರಪ್ಪ ಎಂಬ ಲಿಂಗವಂತ ಮಾಡುವುದೇನು? ಕೆಲವರ್ಷಗಳ ಹಿಂದೆ ಅವರ ಪತ್ನಿ ಮೈತ್ರಾದೇವಿಯವರು ತೀರಿಕೊಂಡಾಗ ಆಕೆಯ ಮೃತ ದೇಹವನ್ನು ಲಿಂಗಾಯತ ಸಂಪ್ರದಾಯದಂತೆ ಮಣ್ಣು ಮಾಡಲಿಲ್ಲ, ಬದಲಾಗಿ ಸುಟ್ಟರು. ಅದಕ್ಕೆ ಕಾರಣ ಮೈತ್ರಾದೇವಿಯವರು ಅನುಮಾನಸ್ಪದವಾಗಿ ತೀರಿಕೊಂಡಿದ್ದು, ನಾಳೆ ಯಾರಾದರೂ ಶವಪರೀಕ್ಷೆ ನಡೆಸಿರಿ ಎಂದರೆ ತೊಂದರೆ ಎದುರಿಸಬೇಕಾಗುತ್ತದೆ ಎಂಬ ಭೀತಿ ಇರಬಹುದು ಬಿಡಿ.

ಆದರೆ ಕಳೆದ ನಾಲ್ಕು ತಿಂಗಳುಗಳಿಂದ ಯಡಿಯೂರಪ್ಪ ಲೆಕ್ಕವಿಲ್ಲದಷ್ಟು ಹೋಮ, ಹವನಗಳಲ್ಲಿ ಭಾಗವಹಿಸಿದ್ದಾರೆ. ಅಧಿಕಾರ ಸಿಕ್ಕಿದ್ದಕ್ಕೆ ಹೋಮ, ಮುಖ್ಯಮಂತ್ರಿ ಕುರ್ಚಿಗೆ ಹೋಮ, ಕೆಮ್ಮಿದ್ದಕ್ಕೆ ಹೋಮ, ಸೀನಿದಕ್ಕೆ ಹೋಮ, ...ಸಿದಕ್ಕೆ ಹೋಮ, ಕೊನೆಗೆ ಸೂರ್ಯಗ್ರಹಣ ಸಂಭವಿಸಿದ್ದಕ್ಕೂ ಹೋಮ!

ಬಸವತತ್ವವು ಈ ಹೋಮ, ಯಜ್ಞ ಸಂಸ್ಕೃತಿಗಳ ಕಟು ವಿರೋಧಿ. ಯಾಕೆಂದರೆ ಈ ಸಂಸ್ಕೃತಿಯು ಲಿಂಗಾಯತರ ಕಾಯಕವೇ ಕೈಲಾಸ ಎಂಬ ಸಿದ್ಧಾಂತಕ್ಕೆ ತದ್ವಿರುದ್ಧವಾದದ್ದು. ತಮ್ಮ ಕಾಯಕದಿಂದಲೇ ಜನ ಬೆಳೆದ ಆಹಾರವನ್ನು, ನೇಯ್ದ ವಸ್ತ್ರಗಳನ್ನು ಬೆಂಕಿಗೆ ಆಹುತಿ ಕೊಡುವ ಹೋಮ ಸಂಸ್ಕೃತಿಗೆ ಲಿಂಗಾಯತ ಧರ್ಮದಲ್ಲಿ ಯಾವ ಜಾಗವೂ ಇಲ್ಲ. ಒಂದು ಹೋಮ ಸಂದರ್ಭದಲ್ಲಿ ಯಡಿಯೂರಪ್ಪ ಒಂದು ರೇಷ್ಮೆ ಸೀರೆಯನ್ನು ಅಗ್ನಿಗೆ ಹಾಕುತ್ತಿರುವುದನ್ನು ಟಿವಿ ಚಾನೆಲ್‌ಗಳು ಬಿತ್ತರಿಸಿದ್ದವು. ಆ ಸೀರೆಯ ಹಿಂದೆ ಅದೆಷ್ಟು ಜನರ ಕಾಯಕವಿತ್ತು ನೆನಪಿಸಿಕೊಳ್ಳಿ. ಹಿಪ್ಪನೇರಳೆ ಬೆಳೆದ ರೈತ, ರೇಷ್ಮೆಹುಳು ಸಾಕುವ ಮಹಿಳೆ, ಫಿಲೇಚರ್ ಮೂಲಕ ರೇಷ್ಮೆ ನೂಲು ತೆಗೆಯುವ ಕಾರ್ಮಿಕ, ನೂಲಿಗೆ ಬಣ್ಣ ಕೊಡುವವರು, ಅದನ್ನು ಸೀರೆಯಾಗಿ ಪರಿವರ್ತಿಸಿದ ನೇಕಾರ ಇವರೆಲ್ಲರ ಶ್ರಮ ಆ ಸೀರೆಯಲ್ಲಿತ್ತು. ಆದರೆ ಅದನ್ನು ಭಸ್ಮ ಮಾಡುವ ಮೂಲಕ ಈ ಎಲ್ಲ ಕಾಯಕ ಜೀವಿಗಳಿಗೆ ಮತ್ತು ಬಸವತತ್ವಕ್ಕೆ ಯಡಿಯೂರಪ್ಪ ಅವಮಾನ ಮಾಡಿದ್ದಾರೆ.

ಇನ್ನು ಲಿಂಗಾಯತರಿಗೆ ಪವಿತ್ರವಾಗಿರುವ ವಚನಗಳನ್ನೇ ಆಧರಿಸಿ ಹೇಳುವುದಾದರೆ ಹೋಮಗಳನ್ನು ಕುರಿತು ಬಸವಣ್ಣನವರು "ಹೋಮದ ನೆಪದಲ್ಲಿ ಹೋತನು ಕೊಂದು ತಿಂಬ/ಅನಾಮಿಕರೊಡನಾಡಿ ಗೆಲಿವುದೇನು ಕೂಡಲ ಸಂಗಮದೇವಾ" ಎಂದು ಹೇಳಿದ್ದಾರೆ. ಆದರೆ ಈ ಯಡಿಯೂರಪ್ಪ 2004 ರಲ್ಲಿ ರಾಮಚಂದ್ರಾಪುರದ ಸ್ವಾಮಿ ರಾಘವೇಶ್ವರ ನಡೆಸಿದ ಹೋತನ್ನು ಕೊಲ್ಲುವ ಅಜಹೋಮದಲ್ಲಿ ಭಾಗವಹಿಸುವ ಮೂಲಕ ಬಸವಣ್ಣನಿಗೇ ಅವಮಾನ ಮಾಡಿದ್ದಾರೆ.

ಇನ್ನೊಂದು ವಚನದಲ್ಲಿ 'ಆದಿಪುರಾಣ ಅಸುರರಿಗೆ ಮಾರಿ/ವೇದಪುರಾಣ ಹೋತಿಂಗೆ ಮಾರಿ/ ರಾಮಪುರಾಣ ರಕ್ಕಸರಿಗೆ ಮಾರಿ/ ಎಲ್ಲ ಪುರಾಣ ಕರ್ಮಕ್ಕೆ ಮೊದಲು/ ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವಾ" ಎಂದಿದ್ದಾರೆ ಬಸವಣ್ಣನವರು.

ರಾಮಾಯಣ ಮತ್ತು ಮಹಾಭಾರತಗಳು ಸೋದರರನ್ನು ಕೊಲ್ಲಿಸುವ ನಾಯಕರಿಂದ ಕೂಡಿರುವುದರಿಂದ ಅವುಗಳನ್ನು ತಿರಸ್ಕರಿಸಬೇಕು ಎಂಬುದು ಬಸವಣ್ಣನವರ ನಿಲುವು. ಆದರೆ ಯಡಿಯೂರಪ್ಪ ಎಂಬ ಶರಣ, ರಾಮನ ಹೆಸರಲ್ಲಿ ಮಂದಿರ ಕಟ್ಟಬೇಕು, ಅದಕ್ಕೆ ಇತರೆ ಕೋಮಿನವರ ರಕ್ತ ಹರಿಸಿದರೂ 'ಸೈ' ಎನ್ನುವ ಬಿಜೆಪಿ ಪಕ್ಷದ; ರಾಮಸೇತುವನ್ನು ಒಡೆದರೆ ಜನರ ಮನಸ್ಸಿಗೆ ನೋವಾಗುತ್ತದೆ ಎಂದೇ ವಾದಿಸುವ ಸಂಘಪರಿವಾರದ ಸೇವಕ. ಎಲ್ಲಿಯ ಬಸವತತ್ವ, ಎಲ್ಲಿ ಯಡ್ಡಿಯ ರಾಮಾಯಣ ನಿಷ್ಠೆ!

ಹಾಗೆಯೇ ಬಸವಣ್ಣನವರು ಇನ್ನೊಂದು ವಚನದಲ್ಲಿ 'ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ' ಎನ್ನುತ್ತಾರೆ. ಅಂದರೆ ಇಷ್ಟ ಲಿಂಗದ ಹೊರತಾಗಿ ಪರ ದೈವಗಳನ್ನು ಪೂಜಿಸಬಾರದು ಎಂದು ಅರ್ಥ. ಆದರೆ ಯಡಿಯೂರಪ್ಪ ಎಲ್ಲಾ ದೇವರುಗಳಿಗೆ ಮಣಿಯುತ್ತಾ ಬಸವತತ್ವಕ್ಕೆ ದ್ರೋಹ ಬಗೆಯುತ್ತಾರೆ.

ಒಂದು ವಚನದಲ್ಲಿ "ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರಾದವರನ್ನೆಲ್ಲ ಒಂದೇ ಎಂಬೆ" ಎನ್ನುವ ಬಸವಣ್ಣ ಇನ್ನೊಂದು ವಚನದಲ್ಲಿ "ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಬಲಿಗೆ ಬಂಧನವಾಯ್ತು, ಕರ್ಣನ ಕವಚ ಹೋಯಿತು, ದಕ್ಷಂಗೆ ಕುರಿದಲೆಯಾಯಿತು" ಎನ್ನುತ್ತಾರೆ. ಆದರೆ ಜಾತಿಭೇದವನ್ನು ಮಾಡುವ ಬ್ರಾಹ್ಮಣ ಮಠಗಳ, ಅವುಗಳ ಸ್ವಾಮಿಗಳ ಕಾಲಿಗೆರಗುತ್ತಾರೆ ಯಡ್ಡಿ, ಆ ಮೂಲಕ ಜಾತಿಪದ್ಧತಿಯನ್ನು ಬೆಂಬಲಿಸುತ್ತಾರೆ, ಲಿಂಗಾಯತ ಧರ್ಮಕ್ಕೆ ವಂಚನೆ ಮಾಡುತ್ತಾರೆ.

ಜಾತಿಭೇದವನ್ನು ಮೀರಿ ನಿಲ್ಲಲು ಲಿಂಗಾಯತ ಧರ್ಮ ಪ್ರಾರಂಭಿಸಿದ ಸಾಮಾಜಿಕ ಕ್ರಾಂತಿ ಅನ್ನ ದಾಸೋಹ ಎಂಬ ಸಹಭೋಜನ ವ್ಯವಸ್ಥೆ. ಆದರೆ ಯಡಿಯೂರಪ್ಪ "ವಿಪ್ರರ ಭೋಜನ ಕೂಟ ನಡೆಯುತ್ತಿದೆ" ಎಂದು ಬೋರ್ಡ್ ತಗಲಿಸಿಕೊಂಡು ಜಾತಿ ಭೇದವನ್ನು ಮೆರೆಯುವ ಬ್ರಾಹ್ಮಣ ಮಠಗಳಿಗೆ, ಅವುಗಳ ಶೂದ್ರದ್ರೋಹಿ ಸ್ವಾಮಿಗಳಿಗೆ 'ಶರಣಾಗಿದ್ದಾರೆ.' ಇದು ಲಿಂಗಾಯತನ ಲಕ್ಷಣವೇ?

ಕೊನೆಯದಾಗಿ ಮತಾಂತರದ ವಿಚಾರ. ಚರ್ಚ್‌ಗಳ ಮೇಲೆ ಭಜರಂಗದಳ ಎಂಬ ಕಪಿಸೈನ್ಯದ ಪುಂಡರು ದಾಳಿ ನಡೆಸಿದ್ದನ್ನು ಯಡಿಯೂರಪ್ಪ "ಮತಾಂತರ ಮಾಡಕೂಡದು" ಎಂದು ಹೇಳುವ ಮೂಲಕ ಸಮರ್ಥಿಸಿಕೊಂಡರು. ಈ ಯಡಿಯೂರಪ್ಪ ಮತ್ತು ಅವರನ್ನು ಬೆಂಬಲಿಸುತ್ತಿರುವ ಲಿಂಗಾಯತರು ಎಂತಹ ಅಜ್ಞಾನಿಗಳೆಂದರೆ ಮತಾಂತರದ ಮೂಲಕವೇ ವೈದಿಕ ವಿರೋಧಿಯಾಗಿ ಲಿಂಗಾಯತ ಧರ್ಮ ಬೆಳೆಯಿತು ಎಂಬುದೂ ಅವರೆಲ್ಲರಿಗೆ ಗೊತ್ತಿರುವಂತಿಲ್ಲ. ವೈದಿಕರ ವೇದ, ಶಾಸ್ತ್ರ ಪುರಾಣ, ಯಜ್ಞ, ಯಾಗ, ಬ್ರಾಹ್ಮಣರು ಶ್ರೇಷ್ಠರು ಎಂಬ ಪರಿಕಲ್ಪನೆ, ಅವರು ಸ್ಥಾಪಿಸಿದ ಜಾತಿವ್ಯವಸ್ಥೆ ಅದನ್ನು ಕರ್ಮಸಿದ್ಧಾಂತದ ಮೂಲಕ ಸಮರ್ಥಿಸಿಕೊಂಡಿದ್ದು, ಇವೆಲ್ಲವನ್ನು ಬಸವತತ್ವ ಮತ್ತು ಲಿಂಗಾಯತ ಧರ್ಮ ನಿರಾಕರಿಸುತ್ತದೆ. ಆದರೆ ಇವೆಲ್ಲವನ್ನು ಗೌರವಿಸುವ ಸಂಘಪರಿವಾರವನ್ನು 'ಲಿಂಗಾಯತ' ಯಡಿಯೂರಪ್ಪ ಆರಾಧಿಸುತ್ತಾರೆ. ಹಾಗೆ ಮಾಡುವ ಮೂಲಕ ಯಡಿಯೂರಪ್ಪ ಲಿಂಗಾಯತ ಧರ್ಮದ ಶತ್ರುವಾಗಿದ್ದಾರೆ.

ಈಗ ಹೇಳಿ ಯಡಿಯೂರಪ್ಪ ಯಾವ ರೀತಿಯಲ್ಲಿ ಲಿಂಗಾಯತ ಎಂದು? ■



ನಟಿ ಶೃತಿಗೆ ಬಿಜೆಪಿ ದೋಖಾ

ದಸರಾ ಚಿತ್ರೋತ್ಸವವೂ ಮದನ್ ಮಲ್ಲು ಎಂಬ ಕಮಂಗಿಯೂ

ದಸರಾ ಚಲನಚಿತ್ರೋತ್ಸವ ಸಮಿತಿಗೆ ನಟನಲ್ಲದ, ನಿರ್ದೇಶಕನಲ್ಲದ, ಅಭಿರುಚಿಯಿಲ್ಲದ ಅವಿವೇಕಿಯೊಬ್ಬನನ್ನು ಅಧ್ಯಕ್ಷನನ್ನಾಗಿ ಮಾಡುವುದುಂಟೆ?

ಅದೂ ಶೃತಿಯಂಥ ಗೌರವಾನ್ವಿತ ಕಲಾವಿದೆಯೊಬ್ಬಳನ್ನು ಅವಮಾನಿಸಿ ಆ ಜಾಗಕ್ಕೆ ಮದನ್ ಮಲ್ಲು ಎಂಬ ಎಡಬಿಡಂಗಿಯನ್ನು ತಂದದ್ದು ಯಾವ ಪುರುಷಾರ್ಥಕ್ಕೆ?

ಮೈಸೂರಿನಲ್ಲಿ ಬುದ್ಧಿವಂತರು, ಪ್ರಜ್ಞಾವಂತರು ಸಿಗದಿದ್ದರೆ ಸಿನಿಮಾ ಬಗ್ಗೆ ಪಾಂಡಿತ್ಯವಿದ್ದ ಬೆಂಗಳೂರಿನ ಯಾರೊಬ್ಬರೂ ಕರಂದ್ಲಾಜೆ ಎಂಬ ಮಂತ್ರಿಣಿಯ ಕಣ್ಣಿಗೆ ಕಾಣಿಸಲಿಲ್ಲವೆ? ಅಷ್ಟಕ್ಕೂ ಮೈಸೂರು ದಸರಾದ ಚಲನ ಚಿತ್ರೋತ್ಸವವೆಂದರೆ ಏನೆಂದುಕೊಂಡಿದ್ದಾರೆ ಶೋಭಾ ಕರಂದ್ಲಾಜೆ? ನಟಿ ಶೃತಿಯಿಂದ ದಸರಾ ಚಿತ್ರೋತ್ಸವದ ಅಧ್ಯಕ್ಷಗಿರಿ ಕಿತ್ತುಕೊಂಡಿದ್ದು ಯಾವ ಕಾರಣಕ್ಕೆ? ಅವರ ಪತಿ ಮಹೇಂದರ್‌ರಂಥ ಸೂಕ್ಷ್ಮ ಸಂವೇದನೆಯ ನಿರ್ದೇಶಕನಿಗಿಂತಲೂ ಮದನ್ ಮಲ್ಲು ಯಾವುದರಲ್ಲಿ ಶ್ರೇಷ್ಠ?


ಯಾರಿಗೂ ಅರ್ಥವಾಗುತ್ತಿಲ್ಲ, ನಟಿ ಶೃತಿಯವರನ್ನು ದಸರಾ ಚಿತ್ರೋತ್ಸವದ ಅಧ್ಯಕ್ಷಗಾದಿಯಿಂದ ಕಿತ್ತು ಹಾಕಿ ಮದನ್ ಪಟೇಲ್ ಅಲಿಯಾಸ್ ಮದನ್ ಮಲ್ಲು ಎಂಬ ಅರೇಬೆಡ್ಡಿ, ಅರೇಬರೇ ನಟ ಕಂ ಆರೆ ಪುಢಾರಿಯನ್ನು ನೇಮಿಸಿದ ಯಡ್ಡಿ ಸರ್ಕಾರದ ಉದ್ದೇಶಕ್ಕೆ ಅರ್ಥವೂ ಇದ್ದಂತಿಲ್ಲ.

ಹೇಳಿಕೇಳಿ ದಸರಾ ಚಲನಚಿತ್ರೋತ್ಸವಕ್ಕೆ ಅದರದೇ ಇತಿಮಿತಿಗಳಿವೆ. ಒಂದಷ್ಟು ಹಳೇ ಕನ್ನಡ ಸಿನಿಮಾಗಳ ಜೊತೆ ಗಿರೀಶ್ ಕಾಸರವಳ್ಳಿ, ಸತ್ಯು, ಶೇಷಾದ್ರಿ, ನಂಜುಂಡೇಗೌಡ, ನಾಗಾಭರಣರಂಥ ಕಲಾತ್ಮಕ ನಿರ್ದೇಶಕರ ಸಿನಿಮಾನಗಳನ್ನು ಬೆರಕೆ ಮಾಡಿ ಮೈಸೂರಿನ ಕೆಲ ಚಿತ್ರಮಂದಿರಗಳಲ್ಲಿ ಮಾರ್ನಿಂಗ್ ಷೋ ತೋರಿಸುತ್ತಾರೆ. ಉಳಿದಂತೆ ಮೈಸೂರು ಫಿಲ್ಮ್ ಸೊಸೈಟಿಯ ಉಗ್ರಾಣದಲ್ಲಿರುವ ಒಂದಷ್ಟು ಹಳೇ ಇಂಗ್ಲಿಷ್ ಚಿತ್ರಗಳ ಸೀಡಿ ಹಾಕಿ ಕಲಾಮಂದಿರದಲ್ಲಿ 'ಷೋ' ಕೊಡುತ್ತಾರೆ.

ದೇಶದ ಬಹುತೇಕ ರಾಜ್ಯಗಳು ತಂತಮ್ಮದೇ ಚಲನ ಚಿತ್ರೋತ್ಸವಗಳನ್ನು ನಡೆಸಿ ಅದನ್ನೊಂದು ಹಬ್ಬದಂತೆ ಸಂಭ್ರಮಿಸುತ್ತಿರುವ ಈ ಕಾಲದಲ್ಲಿ ಹೆಸರಾಂತ ದಸರಾ ಚಲನಚಿತ್ರೋತ್ಸವ ಇನ್ನು ಯಾವ ಮಟ್ಟಕ್ಕಿರಬೇಕು? ನಾಡಹಬ್ಬ ದಸರೆಯನ್ನು ವಿಶ್ವಕ್ಕೆ ಮುಟ್ಟಿಸಬೇಕೆಂದರೆ ಅದಕ್ಕೆ ಅಂತರರಾಷ್ಟ್ರೀಯ ಮಟ್ಟದ ಫಿಲ್ಮ್ ಫೆಸ್ಟಿವಲ್‌ಗಿಂತ ಅವಕಾಶ ಬೇಕೆ? ಕನಿಷ್ಠ ದೇಶದ ವಿವಿಧ ಭಾಷೆಗಳ ಸಿನಿಮಾಗಳಾದರೂ ಸ್ಪರ್ಧೆಗೆ ಬಂದರೆ 'ಮೈಸೂರು ದಸರಾ' ಎಂಬ ಬ್ರಾಂಡ್ ಸಹಜವಾಗೇ ಸಾರ್ಥಕಗೊಳ್ಳುತ್ತದೆ.

ಸಮೃದ್ಧ ಕರ್ನಾಟಕದ ಭೋಂಗು ಬಿಡುವ ಮುಖ್ಯಮಂತ್ರಿಯೇ ದಸರಾ ಸಮಿತಿಯ ಅಧ್ಯಕ್ಷರಾಗಿರುವಾಗ ಇನ್ನು ಅವರ ಪರಮಾಪ್ತೆ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿಣಿ ಶೋಭಾ ಕರಂದ್ಲಾಜೆಗೆ ಏನು ತಾನೇ ಕಮ್ಮಿ? ಹಾಗಂತ ವಿವೇಕ ಮತ್ತು ಛಲವಿರಬೇಕಲ್ಲ?

ವಿಪರ್ಯಾಸವೆಂದರೆ ಇಲ್ಲಿಗೆ ತಿಂಗಳ ಹಿಂದೆ ನಟಿ ಶೃತಿಯೇ ದಸರಾ ಚಲನ ಚಿತ್ರೋತ್ಸವದ ಅಧ್ಯಕ್ಷೆಯೆಂದು ಸ್ವತಃ ಕರಂದ್ಲಾಜೆಯೇ ಘೋಷಿಸಿದ್ದರು.



ಶೃತಿ ಬಿಜೆಪಿಯ ಪಕ್ಕಾ ಕಾರ್ಯಕರ್ತೆ ಕೂಡ. ಅವರ ಪತಿ ಮಹೇಂದರ್ ಕಳೆದ ಚುನಾವಣೆಯಲ್ಲಿ ಕೊಳ್ಳೇಗಾಲಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದಾಗಲೂ ಶೃತಿ ಅದೆಲ್ಲವನ್ನೂ ಬದಿಗೊತ್ತಿ ರಾಜ್ಯಾದ್ಯಂತ ಬಿಜೆಪಿಯ ಪರ ಪ್ರಚಾರಕ್ಕಿಳಿದವರು. ನಟ ಶ್ರೀನಾಥ್‌ಗಿಂತಲೂ ಜನಪ್ರಿಯತೆಯಲ್ಲಿ ಮುಂದಿರುವ ಶೃತಿಯವರನ್ನು ದಸರಾ ಚಿತ್ರೋತ್ಸವದ ಅಧ್ಯಕ್ಷೆಯನ್ನಾಗಿ ಮಾಡಿದ್ದು ಸುಮ್ಮನೇನಲ್ಲ.

ಅದು ಕೂಡ ಕೇವಲ ಬಿಜೆಪಿಯ ಋಣಕ್ಕಷ್ಟೇ ವಹಿಸಿದ ಜವಾಬ್ದಾರಿಯಾಗಿರಲಿಲ್ಲ. ಪ್ರತಿ ವರ್ಷ ಗೋವಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಪತಿ ಮಹೇಂದರ್ ಜೊತೆಯಲ್ಲೇ ಭಾಗವಹಿಸುವ ಶೃತಿಗೆ ಚಲನ ಚಿತ್ರೋತ್ಸವಗಳ ಬಗ್ಗೆ ವಿಶೇಷ ಅಕ್ಕರೆಯಿದೆ. ನೆರವಿಗೆ ಸ್ವತಃ ಪತಿ ಮಹೇಂದರ್ ಬೇರೆ. ಆದರೆ ಶೋಭಾ ಕರಂದ್ಲಾಜೆಯ ಅಧಿಕಪ್ರಸಂಗಿ ಬುದ್ಧಿಯಿತ್ತಲ್ಲ; ಅದನ್ನು ತನ್ನ ಕಮಂಗಿತನಕ್ಕೆ ತಕ್ಕಂತೆ ಬಳಸಿಕೊಂಡವನು ಮದನ್ ಮಲ್ಲು.

ವಿಶೇಷವೇನೆಂದರೆ ತನ್ನನ್ನು ದಸರಾ ಚಿತ್ರೋತ್ಸವದ ಅಧ್ಯಕ್ಷೆಯನ್ನಾಗಿ ಮಾಡಿ ಅಂತ ಶೃತಿಯಾಗಲಿ ಮಹೇಂದರ್ ಆಗಲಿ ಯಾವ ಬಿಜೆಪಿ ನಾಯಕರಿಗೂ ಬಾಯಿಬಿಟ್ಟು ಕೇಳಿದವರಲ್ಲ. ನೀವೆ ಆಗಿ ಅಂತಲೂ ಯಾರೂ ಕೇಳಲಿಲ್ಲ. ತನ್ನನ್ನು ದಸರಾ ಚಿತ್ರೋತ್ಸವ ಸಮಿತಿಯ ಅಧ್ಯಕ್ಷೆಯನ್ನಾಗಿ ಮಾಡಿದ್ದಾರೆಂಬ ಸುದ್ದಿ ಶೃತಿಗೆ ಗೊತ್ತಾಗಿದ್ದೇ ಪತ್ರಿಕೆ ನೋಡಿದ ಮೇಲೆ!

ಸರಿ, ಅಧ್ಯಕ್ಷೆಯನ್ನಾಗಿ ಮಾಡಿದ ಮೇಲಾದರೂ ಉಸ್ತುವಾರಿ ಮಂತ್ರಿ ಶೋಭಕ್ಕ ಕರೆದು ಚರ್ಚಿಸಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಆದರೆ 'ಮೀಟಿಂಗ್ ಇದೆ ಬನ್ನಿ' ಅಂತ ಯಾರೋ ಕ್ಲರ್ಕ್ ಒಬ್ಬಳು ಅಪರೂಪಕ್ಕೊಮ್ಮೆಯಷ್ಟೇ ಫೋನ್ ಮಾಡಿದ್ದು ಬಿಟ್ಟರೆ ಬೇರೆ ಯಾರೂ ಯಾವತ್ತೂ ಈ ಬಗ್ಗೆ ಶೃತಿಯವರನ್ನು ಸಂಪರ್ಕಿಸಿಲ್ಲ. ಅದು ಕೂಡ ಎಂಥಾ ಉಡಾಫೆಯೆಂದರೆ ಬೆಳಗ್ಗೆ 10 ಗಂಟೆಗೆ ಮೈಸೂರಿನಲ್ಲಿ ಮೀಟಿಂಗ್ ಇದೆ ಎಂದು ಅದೇ ದಿನ ಬೆಳಗ್ಗೆ ಎಂಟೂವರೆಗೆ ಶೃತಿಯವರ ಬೆಂಗಳೂರಿನ ಮನೆಗೆ ಫೋನ್ ಬಂದಿದೆ!

ಉಳಿದ ಒಂದೂವರೆ ಗಂಟೆಯಲ್ಲಿ ಸಿದ್ಧಗೊಳ್ಳುವುದು ಯಾವಾಗ? ಅದೂ ಒಂದೂವರೆ ಗಂಟೆಯೊಳಗೆ ಬೆಂಗಳೂರಿನಿಂದ ಮೈಸೂರಿಗೆ ಹೋಗಲು ಸಾಧ್ಯವಾ? ಶೃತಿಯಂಥ ಅಪರೂಪದ ಕಲಾವಿದೆಯೊಬ್ಬಳಿಗೆ ಬೇರೆ ಕೆಲಸವೇ ಇಲ್ಲವಾ?


ಇದು ಶೋಭಾ ಕರಂದ್ಲಾಜೆಯ ಮೈಸೂರು ದಸರಾ ಸಂಘಟಿಸಿದ ರೀತಿ. ಶೃತಿಯಾಗಲಿ ಅವರ ಪತಿ ಮಹೇಂದರ್ ಆಗಲಿ ಯಾರೂ ಅಬ್ಬೇಪಾರಿಗಳಲ್ಲ. ಅಂಥವರನ್ನು ಹೇಗೆ ನಡೆಸಿಕೊಳ್ಳಬೇಕೆಂಬುದು ಬಹುಶಃ ಕರಂದ್ಲಾಜೆಯಂಥ ದುರಹಂಕಾರಿಗಷ್ಟೇ ಇದು ಗೊತ್ತಿರಲಿಕ್ಕಿಲ್ಲ. ಅಷ್ಟಕ್ಕೂ ಇಷ್ಟೊಂದು ಹೀನಾಯವಾಗಿ ನಡೆಸಿಕೊಂಡರೆ ಶೃತಿಯಷ್ಟೇ ಅಲ್ಲ, ಕರಂದ್ಲಾಜೆಯ ಮನೆ ಕೆಲಸದಾಳು ಕೂಡ ಸೊಪ್ಪು ಹಾಕುವುದಿಲ್ಲ.

ಯಾವತ್ತು ಶೃತಿ ಮತ್ತು ಮಹೇಂದರ್ ತನ್ನ ಮುಂದೆ ನಿಂತು ಕೈಕಟ್ಟುತ್ತಾರೆಂಬ ಕರಂದ್ಲಾಜೆಯ ನಿರೀಕ್ಷೆ ಹುಸಿಯಾಯಿತೋ ಆಗ ಸಿಕ್ಕವನೇ ಕಮಂಗಿ ಮದನ್ ಮಲ್ಲು ಉರ್ಫ್ ಮದನ್ ಪಟೇಲ್.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪುಲಿಕೇಶಿ ನಗರಕ್ಕೆ ತಾನೇ ಬಿಜೆಪಿಯ ಅಭ್ಯರ್ಥಿಯೆಂದು ಓಡಾಡಿದ ಮಲ್ಲುಗೆ ಕೊನೇಗಳಿಗೆಯಲ್ಲಿ ಟಿಕೆಟ್ ಕೂಡ ಗಿಟ್ಟಲಿಲ್ಲ. ಯಾವತ್ತು ಯಾವ ಕಾರಣಕ್ಕೆ ಯಾವ ಪಕ್ಷದಲ್ಲಿರುತ್ತಾನೆಂದು ಆತನಿಗೇ ಗೊತ್ತಿಲ್ಲ. ಹೋಗಲಿ ಒಳ್ಳೇ ನಟನಾ?



ಶೋಭ




ಮಹೇಂದರ್

ಯಾವುದೋ ದಿಕ್ಕಿನಿಂದ ರವಿಚಂದ್ರನ್ ಥರ ಕಾಣಿಸುತ್ತಾನೆ ಅನ್ನೋ ಏಕೈಕ ಅರ್ಹತೆ ಬಿಟ್ಟರೆ ಮದನ್ ಮಲ್ಲು ಕುಖ್ಯಾತಿಗಳಿಸಿದ್ದು ಆತನ ವಿಕೃತಿ ಯಿಂದಲೇ. ಗಲ್ಲಿ ಆರ್ಕೆಸ್ಟ್ರಾ ಮಾಡಿ ಕೊಂಡೇ ಸಿನಿಮಾ ಖಯಾಲಿಗೆ ಬಿದ್ದವನು ತಾನೇ ದುಡ್ಡು ಹಾಕಿ ತಾನೇ ಹೀರೋ ಆಗಿ ತೆಗೆದದ್ದು 'ಮಹಾಚತುರ' ಎಂಬ ಥರ್ಡ್‌ರೇಟ್ ಚಿತ್ರವನ್ನು. ನಂತರ ಹೇಗೋ ರಮ್ಯಕೃಷ್ಣಳ ಕಾಲ್‌ಶೀಟ್ ಗಿಟ್ಟಿಸಿ 'ಆಂಧ್ರಾ ಹೆಂಡ್ತಿ'ಗೆ ಹೀರೋ ಆದ. ಈತ ಅಸಲೀ ರವಿಚಂದ್ರನ್ ಅಲ್ಲ ಎಂದು ಗೊತ್ತಾಗಿದ್ದೇ ಅಸಹ್ಯಪಟ್ಟುಕೊಂಡ ರಮ್ಯಕೃಷ್ಣ ಕಾಟಾಚಾರಕ್ಕೂ ಈತನನ್ನು ಮುಟ್ಟಿಸಿಕೊಳ್ಳಲಿಲ್ಲ. ತದನಂತರ 'ಓಕೆ ಸಾರ್ ಓಕೆ' ಎಂಬ ಡಬ್ಬಾ ಚಿತ್ರಕ್ಕೆ ಕೈಯಿಟ್ಟು ಮಲ್ಲು ಪರಿಚಯಿಸಿದ್ದು ಸದ್ಯ ಪ್ರಿಯಕರನನ್ನು ಕೊಂದು ಮುಂಬಯಿ ಜೈಲಲ್ಲಿರುವ ಮೋನಿಕಾಳನ್ನು.

ಈಗ 'ಹೀಗೂ ಉಂಟೆ' ಎಂಬ ಚಿತ್ರ ನಿರ್ಮಿಸುತ್ತಿರುವ ಮಲ್ಲು ತನ್ನ ನಟನೆಯಿಂದಾಗಲಿ, ನಿರ್ಮಿಸಿದ ಸಿನಿಮಾಗಳ ಗುಣಮಟ್ಟದ ಕಾರಣಕ್ಕಾಗಲಿ ಯಾವತ್ತೂ ಹೆಸರು ಮಾಡಲಿಲ್ಲ. ಮಗನನ್ನು ಹೀರೋ ಮಾಡಿದ ನಂತರವೂ ಆತನ ಹೀರೋಯಿನ್‌ಗಳ ಜೊತೆಗೇ ಕುಣಿದಾಡಿದ್ದ. ಐದಾರು ಸಿನಿಮಾಗಳಲ್ಲಿ ನಟಿಸಿದ್ದಾನಾದರೂ ಈತನಕ ನಟನೆಯ ಗಂಧ ಗೊತ್ತಿಲ್ಲ. ಗೋವರ್ಧನಮೂರ್ತಿಯಂಥ ರಿಯಲ್ ಎಸ್ಟೇಟ್ ಕುಳನನ್ನು ಬುಟ್ಟಿಗೆ ಹಾಕಿಕೊಂಡು ನಿರ್ಮಿಸಿದ 'ಸ್ಟೂಡೆಂಟ್' ಚಿತ್ರ ಒಂದೇ ವಾರಕ್ಕೆ ಸುಸ್ತುಬಿತ್ತು. ಮಗ ಹೀರೋ ಆದ ಎಂಬುದನ್ನು ಬಿಟ್ಟರೆ ನಂಬಿದ ಗೋವರ್ಧನ ಮೂರ್ತಿಗೆ ಮೂರು ಕೋಟಿಯ ಟೋಪಿ ಹಾಕಿದ್ದೇ ಈತನ ಸಾಧನೆ.

ಹಾಗೊಮ್ಮೆ ಶೃತಿಯವರನ್ನೇ ಅವಮಾನಿಸಬೇಕೆಂದಿದ್ದರೆ ಸತ್ಯು, ನಾಗಾಭರಣ, ಬರಗೂರು, ನಂಜುಂಡೇಗೌಡ, ಲಿಂಗದೇವರು ಇತ್ಯಾದಿ ಯಾರನ್ನು ಬೇಕಾದರೂ ದಸರಾ ಚಿತ್ರೋತ್ಸವದ ಅಧ್ಯಕ್ಷರನ್ನಾಗಿಸಬಹುದಿತ್ತು. ಮದನ್ ಮಲ್ಲು ಒಳ್ಳೆಯ ನಟನಲ್ಲ ನಿರ್ದೇಶಕನಲ್ಲ. ಅಭಿರುಚಿ ಆ ದೇವರಿಗೇ ಪ್ರೀತಿ. ಸಿನಿಮಾ ಎಂದರೇನೇ 'ಆಂಧ್ರಾ ಹೆಂಡ್ತಿ' ಥರ ಎಂದು ನಂಬಿಕೊಂಡ ಕಮಂಗಿಯೊಬ್ಬನನ್ನು ತಂದು ದಸರಾ ಚಿತ್ರೋತ್ಸವಕ್ಕೆ ತುರುಕಿದ ಕರಂದ್ಲಾಜೆಗೆ ಬುದ್ಧಿ ಹೇಳುವವರ್ಯಾರು?

■ ರಾ. ಸೋಮನಾಥ್



ನಾನೇನೂ ಬಿಟ್ಟಿಗೆ ಬಿದ್ದಿಲ್ಲ

ನಟಿ ಶೃತಿಯ ನೊಂದ ಮಾತು

ನನ್ನನ್ನು ದಸರಾ ಚಿತ್ರೋತ್ಸವದ ಅಧ್ಯಕ್ಷತೆಯಿಂದ ಕಿತ್ತು ಹಾಕಿದ್ದಕ್ಕೆ ನೋವೂ ಇಲ್ಲ ಸಂತೋಷವೂ ಇಲ್ಲ ಏಕೆ ಗೊತ್ತೆ? ನನ್ನನ್ನೇ ಅಧ್ಯಕ್ಷಳನ್ನಾಗಿ ಮಾಡಿ ಅಂತ ನಾನೆಂದೂ ಯಾರಿಗೂ ಕೇಳಿರಲೇ ಇಲ್ಲ. ನನ್ನನ್ನು ಅಧ್ಯಕ್ಷಳನ್ನಾಗಿ ಯಾರು, ಏಕೆ ಆಯ್ಕೆ ಮಾಡಿದರೆಂಬುದು ಕೂಡ ಗೊತ್ತಿಲ್ಲ. ಯಾರೂ ಈ ಬಗ್ಗೆ ನನ್ನನ್ನು ಕೇಳೇ ಇರಲಿಲ್ಲ. ಪತ್ರಿಕೆಗಳಲ್ಲಿ ಓದಿದ ನಂತರವೇ ನನಗಿದು ಗೊತ್ತಾಗಿತ್ತು.

ಇರಲಿ ನನ್ನನ್ನು ಕೇಳದೇ ಅಧ್ಯಕ್ಷಳನ್ನಾಗಿ ಮಾಡಿದ್ದಕ್ಕಾದರೂ ಜವಾಬ್ದಾರಿ ವಹಿಸಿಕೊಳ್ಳೋಣ ಅಂದ್ರೆ ಈ ಬಗ್ಗೆ ಯಾರನ್ನು ಕೇಳಬೇಕು? ಅದಕ್ಕೇ ನಾನು ಸುಮ್ಮನಿದ್ದೆ. ಎಷ್ಟೋ ದಿನಗಳಾದ ಮೇಲೆ ಯಾರೋ ಕ್ಲರ್ಕ್ ಒಬ್ಬಳು ಹತ್ತು ಗಂಟೆಗೆ ಮೈಸೂರಲ್ಲಿ ಮೀಟಿಂಗ್ ಇದೆ ಬನ್ನಿ ಅಂತ ಬೆಳಗ್ಗೆ ಎಂಟೂವರೆಗೆ ಫೋನ್ ಮಾಡಿ ಹೇಳಿದರೆ ಹೇಗೆ ತಾನೇ ಹೋಗಲು ಸಾಧ್ಯ?

ನನಗೂ ಸ್ವಾಭಿಮಾನವಿದೆ. ನಾನಾಗಲಿ ನನ್ನ ಪತಿಯವರಾಗಲಿ ಯಾವುದೇ ಸ್ಥಾನಮಾನ ಬಯಸಿ ಬಿಜೆಪಿ ಸೇರಿದವರಲ್ಲ. ಆ ಪಕ್ಷಕ್ಕೊಂದು ಉದ್ದೇಶ, ನೀತಿ ನಿಯತ್ತಿದೆ ಅಂತಲೇ ಸೇವಾ ಮನೋಭಾವನೆಯಿಂದ ಸೇರಿದ್ದೇವೆ. ಅದು ಕಳೆದ ಚುನಾವಣೆಯಲ್ಲಿ ನನ್ನ ಪತಿಯವರ ಪರವಾಗಿ ಕೊಳ್ಳೇಗಾಲದಲ್ಲಿ ಪ್ರಚಾರ ಮಾಡುವುದನ್ನೂ ಕೈಬಿಟ್ಟು, ನನ್ನ ಐದು ವರ್ಷದ ಮಗುವನ್ನೂ ಲೆಕ್ಕಿಸದೇ ಹಗಲಿರುಳೆನ್ನದೇ ರಾಜ್ಯ ಸುತ್ತಿ ಬಂದೆ. ಬಿಜೆಪಿಗಾಗಿ ಸರಿಸುಮಾರು ಅರವತ್ತು ಸಭೆಗಳಲ್ಲಿ ಪ್ರಚಾರ ಭಾಷಣ ಮಾಡಿದೆ. ಆಗ ಶೃತಿ ಬೇಕಿತ್ತು, ಸಣ್ಣಪುಟ್ಟದ್ದಕ್ಕೂ ಅದರ ನಾಯಕರೇ ಬಂದು ವಿನಂತಿ ಮಾಡಿಕೊಳ್ಳುತ್ತಿದ್ದರು. ಈಗ ಅಧಿಕಾರ ಬಂದ ಮೇಲೆ ನಾವ್ಯಾರೂ ಲೆಕ್ಕಕ್ಕಿಲ್ವಾ? ಕನಿಷ್ಠ ಕಾಟಾಚಾರಕ್ಕೂ ಒಂದು ಮಾತು ಕೇಳದೆ ನನ್ನ ಹೆಸರು ಬಳಸಿಕೊಂಡವರಿಗೆ ಸೌಜನ್ಯಕ್ಕಾದರೂ ನನ್ನ ಜೊತೆ ಮಾತಾಡಬೇಕೆಂಬ ಮನಸ್ಸಿಲ್ಲದಿದ್ದರೆ ಹೇಗೆ?

ನಾನೇನೂ ಬಿಟ್ಟಿಗೆ ಬಿದ್ದಿಲ್ಲ. ಯಾವತ್ತೂ ಯಾರ ಮುಂದೂ ಕೈಚಾಚಿದವಳಲ್ಲ. ಕನಿಷ್ಠ ಗೌರವವೂ ಸಿಗದ ಮೇಲೆ ಅದೆಂಥಾ ಪದವಿಯಾದರೂ ನನಗೆ ಬೇಕಿಲ್ಲ.


ಇದು ನಟಿ ಶೃತಿ ನೋವಿನಿಂದ ಹೇಳಿದ ಮಾತುಗಳು. ಮಂತ್ರಿಣಿ ಕರಂದ್ಲಾಜೆಗಿದು ಅರ್ಥವಾಗಬೇಕಲ್ಲ? ■

ನಟಿ ಹರಿಪ್ರಿಯಾಳ ನಖರಾಗಳು!

ಚಿತ್ರರಂಗದಲ್ಲಿ ಬದುಕಿ, ಬೆಳೆದು, ಬಾಳಬೇಕಿದ್ದ ಹರಿಪ್ರಿಯಾ ಎಂಬ ಸ್ನಿಗ್ಧ ಸುಂದರಿ ತನ್ನ ನಟನೆಗಿಂತ ರಾದ್ಧಾಂತಗಳಿಂದಾಗಿಯೇ ಫೇಮಸ್ ಆಗುತ್ತಿದ್ದಾಳೆ, ಹರಿಪ್ರಿಯಾ ಕಲಹಪ್ರಿಯಳಾಗಿ ಖ್ಯಾತಿಗೊಳ್ಳುತ್ತಿದ್ದಾಳೆ.

ಕನ್ನಡದ ಹುಡುಗಿಯರಿಗೆ ಅವಕಾಶವೇ ಸಿಗುತ್ತಿಲ್ಲ. ಗಾಂಧಿನಗರದವರು ಬರೀ ಮುಂಬೈ ಮತ್ತು ಪರಭಾಷೆ ನಾಯಕಿಯರನ್ನೇ ಕರೆತರುತ್ತಾರೆ... ಎಂಬಿತ್ಯಾದಿ ಆರೋಪಗಳು ಕನ್ನಡ ಸಿನಿಮಾ ಮಂದಿಯ ವಿರುದ್ಧ ಇದ್ದದ್ದೇ. ಆದರೆ ಅದನ್ನು ಸುಳ್ಳಾಗಿಸುವುದಕ್ಕೆ, ಅಚ್ಚ ಕನ್ನಡತಿ ಹುಡುಗಿಯೊಬ್ಬಳಿಗೆ ಅವಕಾಶ ಕೊಟ್ಟ ಕಾರಣಕ್ಕೆ ಕನ್ನಡ ಸಿನಿಮಾ ತಂಡವೊಂದು ಇಂದು ಇನ್ನಿಲ್ಲದ ಘಾಸಿಗೆ ಒಳಗಾಗಿರುವುದು ಹೊಸ ಕತೆ!

ಚಿತ್ರರಂಗದಲ್ಲಿ ನಿನ್ನೆ ಮೊನ್ನೆಯಷ್ಟೇ ಕಾಣಿಸಿಕೊಂಡು ಅತ್ಯಲ್ಪ ಸಮಯದಲ್ಲೇ ಎಲ್ಲರಲ್ಲೂ ಭಾರೀ ನಿರೀಕ್ಷೆ ಹುಟ್ಟಿಸಿದವಳು ನಟಿ ಹರಿಪ್ರಿಯಾ. ಒಂದು ಕಡೆಯಿಂದ ರಾಧಿಕಾಳಂತೆ ಕಾಣಿಸುವ, ಇನ್ನೊಂದು ಕಡೆಯಿಂದ ಭಾರತಿಯಂತೆ ಕಂಡುಬರುವ ಈ ಬೆಳ್ಳಗಿನ ತೆಳ್ಳಗಿನ ಹುಡುಗಿ ಸಾಂಪ್ರದಾಯಿಕ ಪಾತ್ರಗಳಿಗೂ ಸೈ, ಮಾಡರ್ನ್ ಹುಡುಗಿಯ ರೋಲಿಗೂ ಸೈ ಎಂದೇ ಎಲ್ಲರೂ ಅಂದುಕೊಂಡಿದ್ದರು. ಅದರಲ್ಲೂ ರಾಧಿಕಾ, ರಕ್ಷಿತಾ ಮತ್ತು ರಮ್ಯ ಎಂಬ 'ರಾ'ಗಳು ಬೆಳ್ಳಿತೆರೆಯಿಂದ ಮಾಯವಾಗಲಾರಂಭಿಸಿದ್ದ ಕಾಲದಲ್ಲಿ ಚಿತ್ರರಂಗಕ್ಕೆ ಎಂಟ್ರಿ ಪಡೆದ ಹರಿಪ್ರಿಯಾ ಅವರೆಲ್ಲರ ಜಾಗವನ್ನು ತುಂಬಬಲ್ಲಳು ಎಂದೂ ಎಲ್ಲರು ಭಾವಿಸಿದ್ದರು.



ಸಂದೇಶ್

ಆದರೇನು ಮಾಡುತ್ತೀರಿ, ಈ ಹುಡುಗಿಗೆ ಒಂದು ಕಡೆ ಮಿತಿಮೀರಿದ ಕೊಬ್ಬು, ಇನ್ನೊಂದು ಕಡೆ ಮಿತಿಯಿಲ್ಲದ ಆಕಾಂಕ್ಷೆ ಹೊಂದಿರುವ ತಾಯಿ. ಇವೆರಡು ಜೊತೆಗೂಡಿ ಇವತ್ತು ಹರಿಪ್ರಿಯಾಳ ವಿರುದ್ಧ 'ಈ ಸಂಭಾಷಣೆ' ಎಂಬ ಚಿತ್ರದ ನಿರ್ದೇಶಕ ಮತ್ತು ನಿರ್ಮಾಪಕ ಕಿಡಿಕಾರುವುದಕ್ಕೆ ಕಾರಣವಾಗಿದೆ.

'ಈ ಸಂಭಾಷಣೆ' ಚಿತ್ರತಂಡದ ಪ್ರತಿಯೊಬ್ಬ ಸದಸ್ಯನೂ ಥರಥರಾ ನಡುಗುವಷ್ಟು ಭಯೋತ್ಪಾದನೆ ಮಾಡಿರುವ ಹರಿಪ್ರಿಯಾಳ ಬಗ್ಗೆ 'ಲಂಕೇಶ್' ವಾರ ಪತ್ರಿಕೆಯ ಜೊತೆ ಮಾತನಾಡಿದ ನಿರ್ದೇಶಕ ರಾಜಶೇಖರ್ ಕಣ್ಣೀರಿಟ್ಟರು. ಆ ಚಿತ್ರದ ನಿರ್ಮಾಪಕರೂ 'ಸಾಕಪ್ಪಾ ಈ ನಟಿಯ ಸಹವಾಸ' ಎಂದು ಗೋಳಾಡಿದರು.

ಹರಿಪ್ರಿಯಾ ಈಗಷ್ಟೇ ಚಿಗುರೊಡೆಯುತ್ತಿರುವ ನಟಿ. ಮೊದಲಿಗೆ ತುಳು ಚಿತ್ರವೊಂದರಲ್ಲಿ ಕಾಣಿಸಿಕೊಂಡ ಈಕೆ ಆ ಚಿತ್ರದ ಪ್ರೊಡಕ್ಷನ್ ಮ್ಯಾನೇಜರ್ ಮೂಲಕ ಕನ್ನಡದ 'ಮನಸುಗಳ ಮಾತು ಮಧುರ' ಎಂಬ ಚಿತ್ರದಲ್ಲಿ ಅವಕಾಶ ಗಿಟ್ಟಿಸಿಕೊಂಡವಳು. ಇಲ್ಲಿಯ ತನಕ ಈಕೆ ನಟಿಸಿರುವುದು ಬರೀ ಮೂರ್‍ನಾಲ್ಕು ಚಿತ್ರಗಳಲ್ಲಿ. ಅವುಗಳಲ್ಲಿ ಈಕೆ ವಿಶ್ವಾಸ ಮೂಡಿಸಿದ್ದರೂ ಆ ಎಲ್ಲಾ ಸಿನಿಮಾಗಳು ಬಾಕ್ಸ್ ಆಫೀಸಿನಲ್ಲಿ ತೋಪಾದವು. ಆದರೂ ತನ್ನ ಮನೆ ಮುಂದೆ ನಿರ್ಮಾಪಕರು ಸಾಲುಗಟ್ಟಿ ನಿಲ್ಲುತ್ತಿರುವುದನ್ನು ನೋಡಿಯೇ ಕೊಬ್ಬಲಾರಂಭಿಸಿದ ಹರಿಪ್ರಿಯಾ ಮತ್ತು ಆಕೆಯ ತಾಯಿ ಲಲಿತಾ ತಮ್ಮ 'ಆಟ'ವನ್ನು ಶುರುಹಚ್ಚಿಕೊಂಡರು.


ಹರಿಪ್ರಿಯಾಳ ಕಿರಿಕಿರಿಗಳು, ರಾದ್ಧಾಂತಗಳು ಇದೇ ಮೊದಲಲ್ಲ. ಆಕೆಯ ಮೊದಲ ಚಿತ್ರ 'ಮನಸುಗಳ ಮಾತು ಮಧುರ'ದಲ್ಲೇ ಅವೆಲ್ಲ ಪ್ರಾರಂಭವಾಗಿದ್ದವು. ಆ ಚಿತ್ರದ ನಾಯಕ ಓತಿಕ್ಯಾತನಂತಿರುವ 'ಯು2' ಆನಂದ್‌ನೊಂದಿಗೇ ಕಣ್ಣಾಮುಚ್ಚಾಲೆ ಪ್ರಾರಂಭಿಸಿದಳು. ಅದೇ ಹೊತ್ತಿಗೆ ಆ ಚಿತ್ರದ ನಿರ್ದೇಶಕ ಮಂಜು ಮಸ್ಕಲ್‌ಮಟ್ಟಿ ಮತ್ತು ಇವಳ ನಡುವೆ ರಂಪಾರಂಪ ಜಗಳಗಳಾದವು.

ಆದರೆ ಈಕೆಯ ಆಟ, ಕಾಟಗಳೇನೇ ಇದ್ದರೂ ನೋಡಲು ಆಕರ್ಷಕಳಾಗಿದ್ದರಿಂದ ಕನ್ನಡದ ಈ ಹುಡುಗಿ ಎತ್ತರಕ್ಕೆ ಬೆಳೆದು ನಿಲ್ಲಲಿ ಎಂಬ ಕಾರಣಕ್ಕೆ ಮಾಧ್ಯಮದವರೂ ಈಕೆಯನ್ನು ಹೊಗಳಿ ಅಟ್ಟಕ್ಕೇರಿಸಿದರು. ಅಷ್ಟೊತ್ತಿಗೆ ಪತ್ರಕರ್ತ ರವಿ ಬೆಳಗೆರೆಯವರ 'ಮುಖ್ಯಮಂತ್ರಿ ಐ ಲವ್ ಯೂ' ಚಿತ್ರ ಕೂಡ ಆರಂಭವಾಯಿತು. 'ಮುಖ್ಯಮಂತ್ರಿ' ಆರಂಭವಾಗಿದ್ದೇ ತಡ ಹರಿಪ್ರಿಯಾಳ ದುರಹಂಕಾರ ಮಿತಿಮೀರಿತು.




ಇದೇ ಹೊತ್ತಿಗೆ ಮಂಗಳೂರು ಮೂಲದ ಹೊಸ ನಿರ್ಮಾಪಕ ಮೇಜರ್ ಶ್ರೀನಿವಾಸ ಪೂಜಾರ್ ತಮ್ಮ ಮಗ ಸಂದೇಶ್‌ಗೋಸ್ಕರ 'ಈ ಸಂಭಾಷಣೆ' ಎಂಬ ಚಿತ್ರವನ್ನು ಆರಂಭಿಸಿ ಹರಿಪ್ರಿಯಾಳನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡರು. ಇದಕ್ಕೆಂದು ಈಕೆಯಿಂದ ಅರವತ್ತು ದಿನಗಳ ಕಾಲ್‌ಶೀಟನ್ನೂ ಪಡೆದದ್ದಾಯಿತು. ಮೊದಲ ಮೂವತ್ತು ದಿನ ಚೆನ್ನಾಗೇ ಇದ್ದ ಹರಿಪ್ರಿಯಾ ಇನ್ನುಳಿದ ದಿನಗಳಲ್ಲಿ ಚಿತ್ರೀಕರಣ ತಾಣವನ್ನು ಅಕ್ಷರಶಃ ನರಕಮಯಗೊಳಿಸಿದಳು. ಆ ಪರಿಯ ಕಿರಿಕ್ಕು, ತಕರಾರು, ಜಗಳಗಳನ್ನು ಶುರುವಿಟ್ಟುಕೊಂಡಳು.

ತಾಯಿಯೇ ವಿಲನ್



ರಾಜಶೇಖರ್


ಹರಿಪ್ರಿಯಾಳ ದುರ್ವರ್ತನೆಗೆ, ಆಕೆಯ ಬಾಯಿಂದ ಬರುವ ಹೊಲಸು ಮಾತುಗಳಿಗೆ ಆಕೆಯ ತಾಯಿ ಲಲಿತಳೇ ಪರಮಗುರು. ಸಾಮಾನ್ಯವಾಗಿ ಚಿತ್ರೀಕರಣಕ್ಕೆ ಬರುವ ಮುನ್ನ ಸ್ನಾನ, ಪೂಜೆ ಇತ್ಯಾದಿಗಳನ್ನು ಮುಗಿಸಿಕೊಂಡು, ಸಾಧ್ಯವಾದರೆ ಮೇಕಪ್ ಅನ್ನೂ ಮಾಡಿಕೊಂಡು ಸ್ಪಾಟಿಗೆ ನಟಿಯರು ಹಾಜರಾಗುತ್ತಾರೆ. ಆದರೆ ಸ್ವತಃ ಹರಿಪ್ರಿಯಾಳೇ ಎದ್ದು ರೆಡಿಯಾಗಿದ್ದರೂ ಆಕೆಯ ತಾಯಿ ಎದ್ದು ಮೇಕಪ್ ಮುಗಿಸಿಕೊಳ್ಳುವವರೆಗೂ ಈ ಹುಡುಗಿ ರೂಮಿನಿಂದ ಹೊರಬರುವುದಿಲ್ಲ. ಯಾಕೆ ಲೇಟ್ ಆಗುತ್ತಿದೆ ಎಂದು ಪ್ರಶ್ನಿಸಲು ಹೋದರೆ ಇವರಿಬ್ಬರ ಬಾಯಿಂದ ಬರೀ ಸಂಸ್ಕೃತದ ಬೈಗುಳಗಳು ಹೊರಬರುತ್ತವೆ! ಚಿತ್ರದ ಪ್ರೊಡಕ್ಷನ್ ಮ್ಯಾನೇಜರ್ ಭಾಸ್ಕರ್ ಅಂತೂ ಇವತ್ತಿಗೂ ಅವುಗಳನ್ನು ನೆನಪಿಸಿಕೊಂಡು ಬೆಚ್ಚಿಬೀಳುತ್ತಾರೆಂದರೆ ಅವರ ಮಾತು ಎಷ್ಟು ಹರಿತವಾಗಿದ್ದಿರಬಹುದು, ನೀವೇ ಊಹಿಸಿ!



ಶ್ರೀನಿವಾಸ ಪೂಜಾರ್

ಶೂಟಿಂಗ್ ಪ್ಯಾಕಪ್

ಕರ್ನಾಟಕದಿಂದ ಸುಮಾರು ಮೂರುಸಾವಿರ ಕಿಲೋಮೀಟರ್ ದೂರವಿರುವ ಉತ್ತರಾಂಚಲದ ನೈನಿತಾಲ್‌ನಲ್ಲಿ ಹಾಡೊಂದರ ಚಿತ್ರೀಕರಣಕ್ಕಾಗಿ ಇಡೀ ಚಿತ್ರತಂಡ ಬೀಡು ಬಿಟ್ಟಿತ್ತು. ಅಲ್ಲಿಯೂ ತಾಯಿ ಮಗಳು ಎಲ್ಲರನ್ನು ಶನಿಗಳಂತೆ ಕಾಡಿದರು. ಪ್ರೊಡಕ್ಷನ್ ಮ್ಯಾನೇಜರ್ ಭಾಸ್ಕರ್ ಬೆಳಿಗ್ಗೆ ಆರುಗಂಟೆಗೇ ರೆಡಿಯಾಗಿರಲು ಹಿಂದಿನ ದಿನವೇ ಸೂಚಿಸಿದ್ದರು. ಆದರೆ ಈ ತಾಯಿ ಮಗಳಿಬ್ಬರೂ ಬೆಳಿಗ್ಗೆ ಎಂಟು ಗಂಟೆಯಾದರೂ ಹಾಸಿಗೆಯಿಂದ ಮೇಲೆದ್ದಿಲ್ಲ. ಕಾರಣ ಕೇಳಿದ್ದಕ್ಕೆ ಭಾಸ್ಕರ್ ಮೇಲೆ ತಾಯಿ, ಮಗಳಿಬ್ಬರೂ ಮುರಕೊಂಡು ಬಿದ್ದಿದ್ದಾರೆ. 'ಮೊದಲ ಚಿತ್ರದ ನಿರ್ಮಾಪಕ ಮಸ್ಕಲ್ ಮಟ್ಟಿಯೇ ಮೂಲೆಗೆ ಕೂರುವಂತೆ ಮಾಡಿದ್ದೇವೆ. ಈ ಸಿನಿಮಾದ ನಿರ್ದೇಶಕನನ್ನೂ ಹಾಗೇ ಮಾಡುತ್ತೇವೆ... ನಮ್ಮದೇನೂ ಕಿತ್ತುಕೊಳ್ಳಲು ಆಗಲ್ಲ' ಎಂದು ಹೊಲಸು ಮಾತುಗಳನ್ನಾಡಿ ಎಗರಾಡಿದ್ದಾರೆ. 'ಇವತ್ತು ಶೂಟಿಂಗ್‌ನಲ್ಲಿ ಎಕ್ಸ್‌ಪ್ರೆಷನ್ನೇ ಕೊಡಲ್ಲ ಹೋಗು, ಏನ್ ಮಾಡ್ಕೋತೀರೋ ನೋಡ್ತೀವಿ' ಎಂದು ಹರಿಪ್ರಿಯಾ ಅರಚಿದ್ದಾಳೆ.



ಜೋ ಸೈಮನ್

ಚಿತ್ರೀಕರಣ ನಡೆಯುತ್ತಿರುವಾಗಲೇ ಹರಿಪ್ರಿಯಾ ತನ್ನ ಕಿರಿಕಿರಿಯನ್ನು ಮುಂದುವರೆಸಿದ್ದಾಳೆ. ಇದ್ದಕ್ಕಿದ್ದಂತೆ ಬೆಂಗಳೂರಿಗೆ ಬುಕ್ ಮಾಡಿದ್ದ ಫ್ಲೈಟ್ ಟಿಕೇಟನ್ನು ಕ್ಯಾನ್ಸಲ್ ಮಾಡಲು ಹೇಳಿ "ತಕ್ಷಣ ನಾನು ಚೆನ್ನೈಗೆ ಹೋಗಬೇಕು. ಅಲ್ಲಿ ನಮ್ಮ ತಮಿಳು ಸಿನಿಮಾದ ಕೆಲಸ ಇದೆ. ನನಗೋಸ್ಕರ ಗ್ರೇಟ್ ಕಮೆಡಿಯನ್ ವಡಿವೇಲು ಕಾಯುತ್ತಿದ್ದಾರೆ. ಒಂದು ದಿನಕ್ಕೆ ಅವರಿಗೆ ಎಂಟು ಲಕ್ಷ ಸಂಭಾವನೆ... ನಿಮ್ಮಂಥ ಕಾಂಜಿಪಿಂಜಿಗಳ ಸಹವಾಸವೇ ನನಗೆ ಬೇಡ" ಎಂದೆಲ್ಲ ಖ್ಯಾತೆ ತೆಗೆದಿದ್ದಾಳೆ.

ಈಕೆಯ ವರಸೆಗಳನ್ನು ಗಮನಿಸಿದ ನೃತ್ಯ ನಿರ್ದೇಶಕರಾದ ಮದನ್ ಹರಿಣಿ ದಂಪತಿಗಳು ಈಕೆಯನ್ನ ಪಕ್ಕಕ್ಕೆ ಕರೆದು "ನೀನು ಹೀಗೆಲ್ಲಾ ಧಿಮಾಕು ಮಾಡಿದರೆ ಈ ಚಿತ್ರರಂಗದಲ್ಲಿ ಉದ್ಧಾರವಾಗಲು ಸಾಧ್ಯವಿಲ್ಲ" ಎಂದು ಸೂಚಿಸಿದ್ದಾರೆ. ಮದನ್ ಹರಿಣಿ ಜೋಡಿಯಾದರೂ ಚಿತ್ರರಂಗದ ಆಳ ಅಗಲವನ್ನು ತಿಳಿದಿರುವ ಅನುಭವಿಗಳು. ಕನ್ನಡ ಚಿತ್ರರಂಗದ ಅತಿರಥ ಮಹಾರಥರ ಜೊತೆ ಕೆಲಸ ಮಾಡಿರುವ ಯಶಸ್ವೀ ಡಾನ್ಸ್ ಮಾಸ್ಟರ್‌ಗಳು. ಆದರೆ ಅವರ ಮಾತಿಗೂ ಕಿಂಚಿತ್ತು ಬೆಲೆಕೊಡದ ಹರಿಪ್ರಿಯಾ ತನ್ನ ನಖರಾವನ್ನು ಇನ್ನೂ ಹೆಚ್ಚಿಸಿದ್ದಾಳೆ. ಕಡೆಗೆ ಈಕೆಯ ಕಾಟ ತಡೆಯಲಾರದೆ ಅರ್ಧಂಬರ್ಧವಾಗಿದ್ದ ಚಿತ್ರೀಕರಣಕ್ಕೆ ಪ್ಯಾಕಪ್ ಹೇಳಿ ಬೆಂಗಳೂರಿನ ಕಡೆ ಚಿತ್ರತಂಡ ಮುಖ ಮಾಡಿದೆ.

ಜೋಸೈಮನ್ ವಕಾಲತ್ತು

ಇಷ್ಟೆಲ್ಲಾ ತಕರಾರುಗಳನ್ನು ನಡೆಸಿದ ಹರಿಪ್ರಿಯಾ ಮತ್ತು ಆಕೆಯ ತಾಯಿ ಮಾತೆತ್ತಿದರೆ 'ಏನಿದ್ದರೂ ಜೋಸೈಮನ್ ಅವರ ಬಳಿ ಮಾತಾಡಿಕೊಳ್ಳಿ. ನಾವು ಮಾತ್ರ ಏನೂ ಮಾತನಾಡಲು ಸಾಧ್ಯವಿಲ್ಲ' ಎನ್ನುತ್ತಿದ್ದರಂತೆ. ಜೋಸೈಮನ್ ಕೂಡ ಈ ತಾಯಿ ಮಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರಂತೆ. ಇವತ್ತಿಗೆ ಬೋರ್ಡಿಗಿಲ್ಲದ ಚಿತ್ರಗಳನ್ನು ನಿರ್ದೇಶಿಸುತ್ತಿರುವ ಅಂದಕಾಲತ್ತಿಲ್ ನಿರ್ದೇಶಕ ಜೋಸೈಮನ್‌ಗೆ ಯಾಕೆ ಬೇಕು ಇಂತಹ ಉಸಾಬರಿ ಎಂಬುದು ನಿಗೂಢವಾಗಿದೆ.

ತನ್ನ ಮಾತಿನಲ್ಲೇ ಒಂದು ತೂಕ, ಗಾಂಭೀರ್ಯವನ್ನು ಹೊಂದಿರುವ ನಿರ್ದೇಶಕ ರಾಜಶೇಖರ್ ಅವರನ್ನು ಹರಿಪ್ರಿಯಾ ಎಂಬ ಹಠಮಾರಿ ಹುಡುಗಿ ಮತ್ತಾಕೆಯ ತಾಯಿ ಇಬ್ಬರೂ ಸೇರಿ ಹಣ್ಣುಗಾಯಿ ನೀರುಗಾಯಿ ಮಾಡಿದ್ದಾರೆ. ಆದರೆ ತನ್ನ ಚೊಚ್ಚಲ ಚಿತ್ರಕ್ಕೆ ಪೆಟ್ಟಾಗ ಬಾರದು ಎಂಬ ಕಾರಣಕ್ಕೆ, ಸಿನಿಮಾದ ಎಲ್ಲ ಕೆಲಸಗಳೂ ಮುಗಿಯುವ ತನಕ ತಾಳ್ಮೆಯಿಂದಿದ್ದ ರಾಜಶೇಖರ್ ಈಗ ಈ ಹುಡುಗಿ ನೀಡಿದ ತೊಂದರೆಗಳ ಬಗ್ಗೆ ಬಾಯಿಬಿಟ್ಟಿದ್ದಾರೆ.

"ಹರಿಪ್ರಿಯಾಳ ವಿರುದ್ಧ ಮಾತನಾಡಿ ನಾವು ಸಾಧಿಸುವುದೇನೂ ಇಲ್ಲ. ಆದರೆ ಮುಂದೆ ಕನ್ನಡ ಚಿತ್ರರಂಗದ ಯಾರಿಗೂ ಈ ಕಷ್ಟ ಎದುರಾಗಬಾರದು ಎಂಬ ಒಂದೇ ಕಾರಣಕ್ಕೆ ಈ ವಿಚಾರವನ್ನು ಬಹಿರಂಗಗೊಳಿಸುತ್ತಿದ್ದೇನೆ" ಎಂದು ರಾಜಶೇಖರ್ ಹೇಳುತ್ತಾರೆ.

ಒಟ್ಟನಲ್ಲಿ ಚಿತ್ರರಂಗದಲ್ಲಿ ಬದುಕಿ, ಬೆಳೆದು, ಬಾಳಬೇಕಿದ್ದ ಹರಿಪ್ರಿಯಾ ಎಂಬ ಸ್ನಿಗ್ಧ ಸುಂದರಿ ತನ್ನ ನಟನೆಗಿಂತ ರಾದ್ಧಾಂತಗಳಿಂದಾಗಿಯೇ ಫೇಮಸ್ ಆಗುತ್ತಿದ್ದಾಳೆ, ಹರಿಪ್ರಿಯಾ ಕಲಹಪ್ರಿಯಳಾಗಿ ಖ್ಯಾತಿಗೊಳ್ಳುತ್ತಿದ್ದಾಳೆ.

■ ಅರುಣ್‌ಕುಮಾರ್ . ಜಿ

ಮೀಸಲಾತಿ ನ್ಯಾಯಸಮ್ಮತವೇ?

ಮೀಸಲಾತಿ ಇದ್ದರೆ ಅಪ್ರತಿಭಾವಂತರು ಆಯ್ಕೆಯಾಗುತ್ತಾರೆ ಎಂಬ ತರ್ಕಹೀನ ವಾದವೊಂದಿದೆ. ವಾಸ್ತವವಾಗಿ ಈ ಪ್ರತಿಭೆಯೆಂಬ ಕಲ್ಪನೆಯೇ ಅತ್ಯಂತ ಮೋಸಪೂರಿತವಾದದ್ದು, ಅನ್ಯಾಯಯುತವಾದದ್ದು ಮತ್ತು ಅವೈಜ್ಞಾನಿಕವಾದದ್ದು. ಈವರೆಗೆ ಪ್ರತಿಭೆ ಎಂದರೇನು ಎಂಬುದಕ್ಕೆ ಒಂದು ಸಾರ್ವತ್ರಿಕ ಮಾನದಂಡವಿಲ್ಲ. ಪ್ರತಿಭೆ ಎಂದರೆ ಪರೀಕ್ಷೆಯಲ್ಲಿ ಪಡೆದುಕೊಳ್ಳುವ ಅಂಕಗಳೆಂಬುದು ಈವರೆಗೆ ನಾವು ಅಂದುಕೊಂಡಿರುವ ಮಾನದಂಡ. ಆದರೆ ಇದು ಅತ್ಯಂತ ಅವೈಜ್ಞಾನಿಕವಾದದ್ದು. ಆದ್ದರಿಂದಲೇ ಹಲವು ಖಾಸಗಿ ಕಂಪನಿಗಳು ಮತ್ತು ಹಲವು ಮುಂದುವರೆದ ದೇಶಗಳು ನಿಜವಾದ ಪ್ರತಿಭೆಯನ್ನು ಅಳೆಯಲು ಬೇರೆಬೇರೆ ಮಾರ್ಗಗಳನ್ನು ಅನುಸರಿಸುತ್ತವೆ.

ನಮ್ಮಲ್ಲೂ ಪ್ರತಿಭೆಯನ್ನು ಅಳೆಯಲು ಬಳಸುತ್ತಿರುವ ಮಾನದಂಡಗಳು ದಿನೇದಿನೇ ಬದಲಾಗುತ್ತಾ ಬರುತ್ತಿವೆಯಾದರೂ ಅವೆಲ್ಲಾ ಮೇಲ್ಜಾತಿ ಪ್ರತಿಭೆಗಳನ್ನು ಅಳೆಯಲು ಮಾತ್ರ ಸಹಾಯಕವಾಗುತ್ತಿದೆ. ಜಾತಿ ಶ್ರೇಣೀಕರಣವುಳ್ಳ ಸಮಾಜದಲ್ಲಿ, ಆತ್ಮವಿಶ್ವಾಸವನ್ನು ಹಾಗೂ ಸ್ವಂತಿಕೆಯನ್ನು ಕೊಲ್ಲುವ ಪರಿಸರದಲ್ಲಿ ದಮನಕ್ಕೆ ಒಳಗಾದವರ ಪ್ರತಿಭೆಯನ್ನು ಅಳೆಯುವ ಮಾನದಂಡಗಳೇ ಬೇರೆಯಾಗಿರಬೇಕು. ಪಾರಂಪರಿಕವಾಗಿ ಹುದುಗಿಕೊಂಡೇ ಬಂದಿರುವ ಶ್ರಮ ಆಧಾರಿತ ಹಾಗೂ ಜೀವನಾನುಭವ ಆಧಾರಿತ ಪ್ರತಿಭೆಯನ್ನು ಮತ್ತು ಒಂದು ಬಹುಸಂಸ್ಕೃತಿ ದೇಶಗಳಲ್ಲಿ ವಿವಿಧ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅರಳುವ ಪ್ರತಿಭೆಗಳನ್ನು ಅಳೆಯುವ ಮಾನದಂಡಗಳೆ ನಮ್ಮ ಸಮಾಜದಲ್ಲಿ ಆವಿಷ್ಕಾರಗೊಂಡಿಲ್ಲ. ಹೀಗಾಗಿ, ಪ್ರತಿಭೆಯನ್ನು ತೂಗುವ ತಕ್ಕಡಿಯಲ್ಲೇ ಮೋಸವಿದ್ದಾಗ ತೂಕದಲ್ಲಿ ನ್ಯಾಯ ಹೇಗೆ ಸಿಕ್ಕೀತು?



ಭಾರತದಲ್ಲಿ ಜಾತಿಗಳಿರುವುದು, ಜಾತಿದೌರ್ಜನ್ಯಗಳು ನಡೆಯುತ್ತಿರುವುದು, ಜಾತಿಯಾಧಾರಿತವಾಗಿ ಸಾಮಾಜಿಕ ಸ್ಥಾನಮಾನ ನಿರ್ಧಾರವಾಗುತ್ತಿರುವುದು ವಾಸ್ತವ ಸತ್ಯ. ಎಲ್ಲಿಯತನಕ ಜಾತಿಯಾಧಾರಿತ ಅಸಮಾನತೆಯಿರುತ್ತದೆಯೋ ಅಲ್ಲಿಯತನಕ ಮೀಸಲಾತಿಯ ಅವಶ್ಯಕತೆಯಿರುತ್ತದೆ. ಇದು ನ್ಯಾಯಸಮ್ಮತವೂ, ವೈಜ್ಞಾನಿಕವೂ ಆದದ್ದಾಗಿದೆ.

ಮೀಸಲಾತಿ ಎಂಬುದು ಒಂದು ಶಾಶ್ವತ ವಿದ್ಯಮಾನ ಎಂಬಂತೆ ಬಿಂಬಿಸಿ ಹಲವರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ. ಆದರೆ, ಸಾಮಾಜಿಕ ಸಮಾನತೆಯನ್ನು ಸಾಧಿಸುವ ತನಕ ಮಾತ್ರವೇ ಮೀಸಲಾತಿಯ ಅವಶ್ಯಕತೆಯಿದ್ದು ಸಮಸಮಾಜವೊಂದು ನಿರ್ಮಾಣಗೊಂಡರೆ ಮೀಸಲಾತಿಯ ಅವಶ್ಯಕತೆಯೇ ಇರುವುದಿಲ್ಲ. ಮೀಸಲಾತಿ ಎಂಬ ಸಮಾನತೆ ಸಾಧಿಸುವ ಪ್ರಕ್ರಿಯೆಯನ್ನು ಮತ್ತಷ್ಟು ವೇಗಗೊಳಿಸುವುದಕ್ಕಾಗಿ ಒಂದು ಸಾಧನವೇ ಹೊರತು ಮೀಸಲಾತಿ ಶಾಶ್ವತ ವಿದ್ಯಮಾನವೇನಲ್ಲ. ಹಾಗಾಗಿ ಹಿಂದುಳಿದ ವರ್ಗಗಳಿಗೆ, ಜಾತಿಗಳಿಗೆ ನೀಡುವ ಮೀಸಲಾತಿಯು ನ್ಯಾಯಸಮ್ಮತವೂ, ವೈಜ್ಞಾನಿಕವೂ ಮತ್ತು ಸಮರ್ಥನೀಯವೂ ಆಗಿದೆ.




■ ಮೇಲ್ಜಾತಿಯ ಹಿತಕಾಯುವುದಕ್ಕೇ ಟೊಂಕಕಟ್ಟಿ ನಿಂತಿರುವ ಬಿಜೆಪಿ ಸರ್ಕಾರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಲು ಉದ್ದೇಶಿಸಿರುವ ರಾಜ್ಯ ಜಾತಿವಾರು ಸಮೀಕ್ಷೆಯನ್ನು ಹೇಗಾದರೂ ಮಾಡಿ ತಡೆಯುವುದಕ್ಕಾಗಿ ತೆರೆಮರೆಯಲ್ಲೇ ನಿಂತು ಎಲ್ಲ ಪ್ರಯತ್ನವನ್ನೂ ನಡೆಸುತ್ತಿದೆ. ■

ಜಾತಿವಾರು ಜನಗಣತಿಗೆ ಯಡ್ಡಿ ಅಡ್ಡಗಾಲು

ಯಡ್ಡಿ ನೇತೃತ್ವದ ಬೆಡ್ಡಿ ಸರ್ಕಾರದ ನಿಜಬಣ್ಣ ನಿಧಾನಕ್ಕೆ ಹೊರಬರುತ್ತಿದೆ. ಬಿಜೆಪಿ ಕೇವಲ ಮುಸ್ಲಿಮ್-ಕ್ರಿಶ್ಚಿಯನ್ನರ ವಿರೋಧಿ ಮಾತ್ರವಲ್ಲ, ದಲಿತ-ಹಿಂದುಳಿದ ಜಾತಿಗಳ ವಿರೋಧಿ ಕೂಡ ಎಂಬುದನ್ನು ತೋರಿಸಿಕೊಳ್ಳುತ್ತಿದೆ. ಅದಕ್ಕೆ ಇತ್ತೀಚಿನ ಉದಾಹರಣೆ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ಜಾತಿವಾರು ಸಮೀಕ್ಷೆ ನಡೆಸುವುದಕ್ಕೆ ತಯಾರಿ ನಡೆಸಿದ್ದು ಅದಕ್ಕೆ ಬಿಜೆಪಿ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅಡ್ಡಗಾಲು ಹಾಕುತ್ತಿರುವುದು.

ಈ ಸಮೀಕ್ಷೆಯೇನಾದರೂ ನಡೆದುಬಿಟ್ಟರೆ ಹಿಂದುಳಿದ ವರ್ಗಗಳ ಹೆಸರಿನಲ್ಲಿ ಮೀಸಲಾತಿಯನ್ನು ಕೆಲವೇ ಪ್ರಭಾವಿ ಜಾತಿಗಳು ಉಣ್ಣುತ್ತಿರುವ ಹಾಗೂ ಅದೇ ಸಮಯದಲ್ಲಿ ನೂರಾರು ಅರ್ಹ ಹಿಂದುಳಿದ ಜಾತಿಗಳು ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿರುವ ಸತ್ಯ ಹೊರಬೀಳುತ್ತದೆ. ಮೇಲ್ಜಾತಿಯ ಹಿತಕಾಯುವುದಕ್ಕೇ ಟೊಂಕಕಟ್ಟಿ ನಿಂತಿರುವ ಬಿಜೆಪಿ ಸರ್ಕಾರ ಹೇಗಾದರೂ ಮಾಡಿ ಇಂತಹದ್ದೊಂದು ಸರ್ವೇ ಕೆಲಸ ಆಗದಂತೆ ತಡೆಯುವುದಕ್ಕಾಗಿ ತೆರೆಮರೆಯಲ್ಲಿ ಪ್ರಯತ್ನ ನಡೆಸಿದೆ.



ಜನಗಣತಿಗೊಂದು ಹಿನ್ನೆಲೆ

ಪ್ರತೀ ಹತ್ತು ವರ್ಷಗಳಿಗೊಮ್ಮೆ ಜಾತಿಯಾಧಾರಿತ ಜನಗಣತಿ ನಡೆಸಬೇಕೆಂದು ಭಾರತದ ಸಂವಿಧಾನ ಹೇಳುತ್ತದೆ. ಆದರೆ, ದುರಂತ ಏನೆಂದರೆ ಸಂವಿಧಾನ ಜಾರಿಯಾದ ಮೇಲೆ ಒಮ್ಮೆಯೂ ಜಾತಿಯಾಧಾರಿತ ಜನಗಣತಿ ನಡೆದೇ ಇಲ್ಲ. 1931ರಲ್ಲಿ ಬ್ರಿಟಿಷ್ ಆಡಳಿತದಲ್ಲಿ ಒಮ್ಮೆ ಜಾತಿಯಾಧಾರಿತ ಜನಗಣತಿ ನಡೆದಿತ್ತು, ಅದಾಗಿ ಈಗ ಏಳು ದಶಕಗಳು ಕಳೆದಿವೆ. ಹೀಗಾಗಿ ಯಾವ ಯಾವ ಜಾತಿಯ ಜನ ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬ ನಿಖರ ಮಾಹಿತಿಯೇ ಲಭ್ಯವಿಲ್ಲದಂತಾಗಿದೆ.

ಜಾತಿವಾರು ಜನಗಣತಿಯೇ ನಡೆಯದಿರುವಾಗ, ಯಾವ್ಯಾವ ಜಾತಿಯ ಜನ ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದೇ ಗೊತ್ತಿರದಿದ್ದಾಗ ಜಾತಿವಾರು ಮೀಸಲಾತಿಯನ್ನು ನಿಗದಿ ಮಾಡುವುದು ಕಷ್ಟಕರ ಕೆಲಸ. ಮೀಸಲಾತಿ ಕುರಿತಂತೆ ಅನೇಕ ಪ್ರಕರಣಗಳು ಸುಪ್ರೀಮ್ ಕೋರ್ಟ್ ಮೆಟ್ಟಿಲು ಹತ್ತಿವೆ. ಆ ಎಲ್ಲಾ ಸಂದರ್ಭಗಳಲ್ಲೂ "ಯಾವ ಆಧಾರದಲ್ಲಿ ಮೀಸಲಾತಿ ಕೊಡುತ್ತೀರಿ? ಯಾವ್ಯಾವ ಜಾತಿಯ ಜನ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದಕ್ಕೆ ಏನು ಆಧಾರವಿದೆ?" ಎಂದು ಸುಪ್ರೀಮ್ ಕೋರ್ಟ್ ಅನೇಕ ಬಾರಿ ಪ್ರಶ್ನೆ ಮಾಡಿದೆ. ಈ ಪ್ರಶ್ನೆಗೆ ಕೇಂದ್ರ ಸರ್ಕಾರದ ಬಳಿಯಾಗಲೀ ಅಥವಾ ಯಾವುದೇ ರಾಜ್ಯ ಸರ್ಕಾರದ ಬಳಿಯಾಗಲೀ ಉತ್ತರವಿಲ್ಲ.

1993ರಲ್ಲಿ ಇಂದಿರಾ ಸಹಾನಿ ಮತ್ತು ಕೇಂದ್ರ ಸರ್ಕಾರದ ನಡುವಿನ ಮಂಡಲ್ ಮೊಕದ್ದಮೆಯ ವಿಚಾರಣೆ ನಡೆಸಿದ ಸುಪ್ರೀಮ್ ಕೋರ್ಟು ಕೇಂದ್ರದಲ್ಲಿ ಹಾಗೂ ಎಲ್ಲಾ ರಾಜ್ಯಗಳಲ್ಲೂ ಒಂದೊಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಬೇಕೆಂದು ನಿರ್ದೇಶನ ಕೊಟ್ಟಿತು. ಅದರ ನಿರ್ದೇಶನದನ್ವಯ ಕೇಂದ್ರದಲ್ಲಿ ಹಿಂದುಳಿದ ವರ್ಗಗಳ ಆಯೋಗದ ರಚನೆಯೂ ಆಯಿತು. ನಂತರದಲ್ಲಿ ಈ ಪ್ರಕ್ರಿಯೆಯ ಭಾಗವಾಗಿ ಕರ್ನಾಟಕದಲ್ಲೂ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ರಚನೆಯಾಗಿದೆ.

ಸಮಾಜದ ದುರ್ಬಲ ವರ್ಗಗಳಿಗೆ, ತುಳಿತಕ್ಕೊಳಗಾದ ಸಮುದಾಯಗಳಿಗೆ ನ್ಯಾಯಸಮ್ಮತ ಮೀಸಲಾತಿ ಒದಗಿಸುವಲ್ಲಿ ಅನುಕೂಲವಾಗಲೆಂಬ ಉದ್ದೇಶದಿಂದ ಈಗ್ಗೆ ಎರಡೂವರೆ ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಜಾತಿವಾರು ಜನಗಣತಿ ನಡೆಸಬೇಕೆಂದು ತೀರ್ಮಾನಿಸಿತು. ಈ ಕಾರ್ಯವನ್ನು ಇದೀ ದೇಶದಾದ್ಯಂತ ಪ್ರಾರಂಭ ಮಾಡುವುದಕ್ಕೆ ಮೊದಲು ಕರ್ನಾಟಕವನ್ನು ಒಂದು ಪೈಲೆಟ್ ರಾಜ್ಯವನ್ನಾಗಿ ಆಯ್ಕೆ ಮಾಡಿಕೊಂಡು, ಇಲ್ಲಿ ಜಾತಿವಾರು ಜನಗಣತಿಯನ್ನು ನಡೆಸಿ ಇದರ ಅನುಭವಗಳ ಆಧಾರದಲ್ಲಿ ಉಳಿದ ರಾಜ್ಯಗಳಲ್ಲೂ ನಡೆಸುವುದೆಂದು ತೀರ್ಮಾನ ಮಾಡಿತು. ಅದಕ್ಕಾಗಿ 21.5 ಕೋಟಿ ರೂಪಾಯಿಗಳನ್ನೂ ಕೊಟ್ಟಿತು.


ಕರ್ನಾಟಕದಲ್ಲಿ ಆಗಿನ್ನೂ ಆಯೋಗವೇ ರಚನೆಯಾಗಿರಲಿಲ್ಲ. ಆದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಅವರ ನೇತೃತ್ವದ ಸಮ್ಮಿಶ್ರ ಸರ್ಕಾರ ಆಯೋಗವನ್ನು ರಚಿಸಿತ್ತಲ್ಲದೆ, ಡಾ.ಸಿ.ಎಸ್.ದ್ವಾರಕಾನಾಥ್ ಅವರನ್ನು ಅದರ ಅಧ್ಯಕ್ಷರಾಗಿ ನೇಮಿಸಿತು: ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಮತ್ತು ದಮನಿತ ಸಮುದಾಯಗಳ ಬಗ್ಗೆ ಅಪಾರ ಕಾಳಜಿ ಹೊಂದಿರುವ ದ್ವಾರಕಾನಾಥ್ ನೇತೃತ್ವದ ಆಯೋಗ ಕಳೆದ ಒಂದು ವರ್ಷದ ಅವಧಿಯಲ್ಲಿ ಗಣನೀಯ ಸಾಧನೆ ಮಾಡಿದೆ. ಹನ್ನೆರಡು ತಿಂಗಳುಗಳಲ್ಲಿ 13 ಜಿಲ್ಲೆಗಳಲ್ಲಿ ಸುತ್ತಾಡಿ ಮೂಲೆಮೂಲೆಯಲ್ಲಿರುವ ಜಂಗಾಲರು, ದೊಂಬಿದಾಸರು, ದೌರ್ರಿ ಜನಾಂಗದವರು, ಕಾಪಾಳರು, ಖಲಂದರರು, ಪಿಂಜಾರರು, ದರ್ವೇಸಿಗಳು, ಕ್ಷೌರಿಕರು, ಅಗಸರು, ಕಾಡುಗೊಲ್ಲರು, ಉಪ್ಪಾರರು, ತಿಗಳರು, ಹೆಳವರು, ಕೋಲೆಬಸವ, ನಧಾಪ ಮುಂತಾದ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿರುವ ಅಜ್ಞಾತ ಜನಸಮುದಾಯಗಳ ಮನೆಬಾಗಿಲಿಗೆ ಹೋಗಿ ಅವರ ಕಷ್ಟ-ಸುಖಗಳನ್ನು ಅರಿಯಲು ಪ್ರಯತ್ನಿಸಿದೆ; ಮೀಸಲಾತಿಯಿಂದ ಹೇಗೆ ಈ ಸಮುದಾಯಗಳು ವಂಚಿತವಾಗಿವೆ ಎಂಬ ಸತ್ಯವನ್ನು ಬಯಲಿಗೆ ತಂದಿದೆ; ಅವರ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಈಗ ಜಾತಿವಾರು ಜನಗಣತಿಗಾಗಿ ಕರ್ನಾಟಕವನ್ನು ಪೈಲೆಟ್ ರಾಜ್ಯವನ್ನಾಗಿ ಕೈಗೆತ್ತಿಕೊಂಡಿದ್ದರಿಂದ ಅದರ ಅನುಷ್ಠಾನಕ್ಕಾಗಿ ಈ ಆಯೋಗ ಭೂಮಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಿದೆ. ಇದೇ ಹೊತ್ತಿನಲ್ಲಿ ನ್ಯಾಯಮೂರ್ತಿ ಸದಾಶಿವ ಆಯೋಗವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಗಣತಿ ನಡೆಸುವ ಕಾರ್ಯ ಪ್ರಾರಂಭಿಸಲು ಯೋಜಿಸುತ್ತಿತ್ತು. ಹಿಂದುಳಿದ ವರ್ಗಗಳ ಆಯೋಗ ಮತ್ತು ಸದಾಶಿವ ಆಯೋಗ ಬೇರೆಬೇರೆಯಾಗಿ ಗಣತಿ ನಡೆಸುವುದರ ಬದಲಾಗಿ ಎರಡನ್ನೂ ಸೇರಿಸಿ ಒಟ್ಟಾರೆ ಜಾತಿಯಾಧಾರಿತ ಜನಗಣತಿ ನಡೆಸುವ ತೀರ್ಮಾನಕ್ಕೆ ಬಂದವು.

ಇದರ ಭಾಗವಾಗಿಯೇ ದ್ವಾರಕಾನಾಥ್ ಅವರು ಸರ್ಕಾರದ ಎಲ್ಲಾ ಇಲಾಖೆಗಳಿಗೆ, ಬ್ಯಾಂಕುಗಳಿಗೆ, ಸರ್ಕಾರಿ-ಖಾಸಗಿ ಕಂಪೆನಿಗಳಿಗೆ, ವಿಶ್ವವಿದ್ಯಾನಿಲಯಗಳಿಗೆ, 176 ಸಾಫ್ಟ್‌ವೇರ್ ಕಂಪೆನಿಗಳಿಗೆ ಪತ್ರ ಬರೆದು ತಮ್ಮ ತಮ್ಮ ಸಂಸ್ಥೆಗಳಲ್ಲಿ ಯಾವ್ಯಾವ ಜಾತಿಯ ಜನರಿಗೆ ಎಷ್ಟೆಷ್ಟು ಉದ್ಯೋಗಗಳನ್ನು ಕೊಡಲಾಗಿದೆ ಎಂಬ ವಿವರಗಳನ್ನು ಕೇಳಿದರು.

ಇಷ್ಟು ಮಾಡಿದ್ದೇ ತಡ ಆಯೋಗ ಯಾವ ದಿಕ್ಕಿನತ್ತ ಹೊರಟಿದೆ ಎಂಬುದು ಸರ್ಕಾರಕ್ಕೆ ಅರ್ಥವಾಗಿ

ದ್ವಾರಕಾನಾಥ್ ಎತ್ತಂಗಡಿಗೆ ಕಸರತ್ತು



ಈಗ ರಾಜ್ಯ ಹಿಂದುಳಿದ ವರ್ಗಗಳ ಅಧ್ಯಕ್ಷರಾಗಿರುವ ದ್ವಾರಕಾನಾಥ್ ಎಂಥವರು ಎಂಬುದು ಬಿಜೆಪಿಗೆ, ಸಂಘಪರಿವಾರಿಗಳಿಗೆ ಚೆನ್ನಾಗಿ ಗೊತ್ತಿದೆ. ಪಕ್ಕಾ ಕೋಮುವಾದಿ ವಿರೋಧಿಯಾಗಿರುವ ಅವರನ್ನು ಮೂಲೆಗುಂಪು ಮಾಡುವುದಕ್ಕೆ ಸಂಘಪರಿವಾರಿಗಳು ಕಸರತ್ತು ನಡೆಸುತ್ತಲೇ ಬಂದಿದ್ದಾರೆ.

ಈ ಹಿಂದೆ ದ್ವಾರಕಾನಾಥ್ ಅವರು ಕೊಡಗಿಗೆ ಕಾರ್ಯನಿಮಿತ್ತ ಹೋಗಿದ್ದಾಗ ಬಿಜೆಪಿಯ ಗೂಂಡಾ ಎಮ್ಮೆಲ್ಲೆ ಬೋಪಣ್ಣ ತನ್ನ ಪುಡಿ ಪುಂಡರನ್ನು ಕಟ್ಟಿಕೊಂಡು ಬಂದು ಬಲವಂತವಾಗಿ ಅವರಿಗೆ ತೀರ್ಥ ಕುಡಿಸಿದ್ದ. ಮಾಧ್ಯಮಗಳಲ್ಲಿ ತಾನೊಬ್ಬ ಹಿಂದೂ ನಾಯಕನಂತೆ ಪೋಜು ಕೊಡುವುದಕ್ಕಾಗಿ ಮಾಧ್ಯಮದವರನ್ನೂ ಜೊತೆಗೆ ಕರೆದುಕೊಂಡು ಹೋಗಿದ್ದ.

ಈಗ ಆಯೋಗದ ಅಧ್ಯಕ್ಷ ಸ್ಥಾನದಿಂದ ಅವರನ್ನು ಕಿತ್ತೆಸೆಯುವುದಕ್ಕೆ ಬಿಜೆಪಿ ಸರ್ಕಾರ ತೆರೆಮರೆಯಲ್ಲಿ ಕಸರತ್ತು ನಡೆಸಿದೆ. ಈ ಹಿಂದೆ ರಾಷ್ಟ್ರಪತಿ ಆಡಳಿತವಿದ್ದಾಗ ದ್ವಾರಕಾನಾಥ್ ಅವರನ್ನು ಆಯೋಗದ ಅಧ್ಯಕ್ಷ ಸ್ಥಾನದಿಂದ ಕಿತ್ತೆಸೆಯುವ ಪ್ರಯತ್ನ ನಡೆದಿತ್ತು. ಆದರೆ, ದ್ವಾರಕಾನಾಥ್ ಅವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿದ್ದರು. ಈಗ ಬಿಜೆಪಿ ಸರ್ಕಾರವೂ ಅದನ್ನೇ ಮಾಡಿದರೆ ತನಗೇ ಮುಖಭಂಗವಾದೀತು ಎಂಬ ಭಯ ಅದಕ್ಕಿದೆ. ಹಾಗಾಗಿ, ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಉಳಿಸಿಕೊಳ್ಳುತ್ತಲೇ ಅವರಿಗೆ ಮುಕ್ತವಾಗಿ ಕೆಲಸ ಮಾಡಲು ಆಗದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಸಾಧ್ಯವಾದರೆ ಇದೀ ಜಾತೀವಾರು ಜನಗಣತಿಯನ್ನು ಖಾಸಗಿಯವರಿಗೆ ನೀಡಲು ನೋಡುತ್ತಿದೆ.

ತೋರಿಗಿತ್ತು. ಇನ್ನೊಂದೆಡೆಯಿಂದ ದೊಡ್ಡ ದೊಡ್ಡ ಸಾಫ್ಟ್‌ವೇರ್ ಕಂಪೆನಿಗಳೂ ಈ ಸಮೀಕ್ಷೆ ನಡೆಯದಂತೆ ಸರ್ಕಾರದ ಮೇಲೆ ಒತ್ತಡ ತರಲಾರಂಭಿಸಿದವು. ಇವೆಲ್ಲವರ ಪರಿಣಾಮವಾಗಿಯೇ ಜಾತಿವಾರು ಜನಗಣತಿಗಾಗಿ ಭೂಮಿಕೆ ಸಿದ್ಧವಾಗುತ್ತಿದ್ದಾಗಲೇ ಬಿಜೆಪಿ ಸರ್ಕಾರ ಅದಕ್ಕೆ ಅಡ್ಡಗಾಲು ಹಾಕಲು ಆರಂಭಿಸಿದೆ.

ಬಿಜೆಪಿಗೆ ಯಾಕೆ ಮನಸ್ಸಿಲ್ಲ?

ವಾಸ್ತವದಲ್ಲಿ ಬಿಜೆಪಿಗೆ ಇಂತಹದ್ದೊಂದು ಸಮೀಕ್ಷೆಯೇ ಬೇಕಾಗಿಲ್ಲ. ಅದಕ್ಕೆ ಕಾರಣ ಇಲ್ಲದಿಲ್ಲ. ಲಿಂಗಾಯತರು, ಒಕ್ಕಲಿಗರು, ಕುರುಬರು, ಪರಿಶಿಷ್ಟ ಜಾತಿಯ ಹಡಪದರು, ಮಡಿವಾಳರು, ಕುಂಬಾರರು, ಗಾಣಿಗರಂಥ ತೀರಾ ಶೋಷಿತಕ್ಕೊಳಗಾದ ಸಮುದಾಯಗಳು ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಒಂದು ಹಂತದಲ್ಲಿ ವೀರಶೈವ ಧರ್ಮವನ್ನು ಅಪ್ಪಿಕೊಂಡಿದ್ದಾರೆ. ಆದರೆ, ಅಲ್ಲಿಯೂ ಅವರಿಗೆ ಲಿಂಗಾಯತರಿಗೆ ಸಿಗುವ ಸಾಮಾಜಿಕ ಸ್ಥಾನಮಾನ ಸಿಗುತ್ತಿಲ್ಲ. ವೀರಶೈವ ಧರ್ಮ ಸೇರಿದರೂ ಅವರನ್ನು ಕೀಳಾಗಿಯೇ ಕಾಣಲಾಗುತ್ತಿದೆ. ಇನ್ನೊಂದೆಡೆಗೆ ಅವರು ತಮ್ಮ ತಮ್ಮ ಜಾತಿ ಬಿಟ್ಟು ಲಿಂಗಾಯತರಾಗಿದ್ದರಿಂದ ಅವರಿಗೆ ಸಿಗಬೇಕಾದ ಮೀಸಲಾತಿಯ ಸೌಲಭ್ಯವೂ ಸಿಗುತ್ತಿಲ್ಲ. ಅತ್ತ ಸಾಮಾಜಿಕ ಸ್ಥಾನಮಾನವೂ ಏರಲಿಲ್ಲ, ಇತ್ತ ಮೀಸಲಾತಿ ಸೌಲಭ್ಯವೂ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿ ಈ ಸಮುದಾಯಗಳಿವೆ.

ಈಗ ಜಾತಿವಾರು ಗಣತಿಯಾದರೆ ಅವರೆಲ್ಲ ತಮ್ಮನ್ನು ತಮ್ಮ ತಮ್ಮ ಜಾತಿಯಿಂದ ಗುರುತಿಸಿಕೊಳ್ಳುತ್ತಾರೆಯೇ ವಿನಃ ಒಟ್ಟಾರೆ 'ಲಿಂಗಾಯತರು' ಎಂದು ಹೇಳಿಕೊಳ್ಳುವುದಿಲ್ಲ. ಇದರಿಂದ ತಮ್ಮ ಸಂಖ್ಯಾಬಲವನ್ನು ಸಿಕ್ಕಾಪಟ್ಟೆ ಹೆಚ್ಚಿಸಿ ಹೇಳಿಕೊಳ್ಳುತ್ತಿರುವ ಲಿಂಗಾಯತರು ವಾಸ್ತವದಲ್ಲಿ ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬ ಅಸಲಿ ಸತ್ಯ ಹೊರಬೀಳುತ್ತದೆ. ಇದನ್ನು ಅರಗಿಸಿಕೊಳ್ಳುವುದಕ್ಕೆ ಆ ಸಮುದಾಯಕ್ಕೆ ತುಸು ಕಷ್ಟವಾಗುತ್ತದೆ. ಇನ್ನೊಂದೆಡೆಗೆ ಈ ದಮನಿತ ಸಮುದಾಯಗಳ ಹೆಸರಿನಲ್ಲಿ ಲಿಂಗಾಯತರೇ ಮೀಸಲಾತಿ ಸೌಲಭ್ಯವನ್ನು ಉಣ್ಣುತ್ತಿರುವ ಸತ್ಯವೂ ಹೊರಬೀಳುತ್ತದೆ. ಇದು ವಾಸ್ತವದಲ್ಲಿ ಲಿಂಗಾಯತ ನಾಯಕರಿಗಾಗಲೀ, ಬಿಜೆಪಿಗಾಗಲೀ ಇಷ್ಟವಿಲ್ಲ.

ಒಕ್ಕಲಿಗರದ್ದೂ ಇದೇ ಸಮಸ್ಯೆ. ಬಂಟರು, ಹೆಗಡೆಗಳಂಥ ದಮನಿತ ಜಾತಿಗಳನ್ನು ಒಕ್ಕಲಿಗರೊಂದಿಗೆ ಸಮೀಕರಿಸಲಾಗಿದೆ. ಇಲ್ಲೂ ಕೂಡ ಮೀಸಲಾತಿ ಸೌಲಭ್ಯವನ್ನು ಮೇಲ್ಜಾತಿ ಒಕ್ಕಲಿಗರು ಅನುಭವಿಸುತ್ತಾರೆಯೇ ಹೊರತು ಈ ಸಮುದಾಯಗಳಿಗೆ ಏನೂ ಸಿಗುವುದಿಲ್ಲ. ಇನ್ನು, ಪರಿಶಿಷ್ಟ ಜಾತಿಗೆ ಸಿಗುವ ಮೀಸಲಾತಿಯು ಕೇವಲ ಬಲಗೈ ಗುಂಪಿನ ಪಾಲಾಗುತ್ತಿದೆಯೇ ಹೊರತು ಸಿಕ್ಕಲರು, ಮಾಪ್ಪಿಕರಂಥ ದಲಿತರಲ್ಲೇ ಅಸ್ಪೃಶ್ಯರಾಗಿರುವ ಸಮುದಾಯಗಳನ್ನು ತಲುಪೇ ಇಲ್ಲ.

ಜಾತಿವಾರು ಜನಗಣತಿಗೆ ಕುರುಬ ಸಮುದಾಯದ ವಿರೋಧವೂ ಇದೆ. ಏಕೆಂದರೆ, 2ಎ ಗುಂಪಿನಲ್ಲಿ 102 ಜಾತಿಗಳಿವೆಯಾದರೂ ಈ ಗುಂಪಿಗೆ ಸಿಗುವ ಶೇ.15ರಷ್ಟು ಮೀಸಲಾತಿಯನ್ನು ಸಂಪೂರ್ಣವಾಗಿ ಕುರುಬ ಸಮುದಾಯವೇ ಅನುಭವಿಸುತ್ತಿದೆ. ಹಾಗಿದ್ದ ಮೇಲೆ ಉಳಿದ 101 ಜಾತಿಗಳು ಮೀಸಲಾತಿಯಿಂದಲೇ ವಂಚಿತವಾಗಿವೆ ಎಂದೇ ಅರ್ಥ.

ಜಾತಿವಾರು ಜನಗಣತಿಯೇನಾದರೂ ಆದರೆ ಈ ಎಲ್ಲಾ ಸತ್ಯಗಳು ಇನ್ನಷ್ಟು ನಿಖರತೆಯೊಂದಿಗೆ ಹೊರಬೀಳುತ್ತವೆ. ಮೇಲ್ಜಾತಿಯೊಂದಿಗೆ ಸಮೀಕರಣಗೊಂಡ ದಮನಿತ ಜಾತಿಗಳು ತಮ್ಮ ತಮ್ಮ ಜಾತಿಯೊಂದಿಗೆ ಗುರುತಿಸಿಕೊಳ್ಳುತ್ತಾ ಮೀಸಲಾತಿಯ ಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

ಆದರೆ, ಮೇಲ್ಜಾತಿಯ ಹಿತ ಕಾಯುವುದಕ್ಕೇ ಇರುವ ಬಿಜೆಪಿಗೆ ಇಂತಹದ್ದೊಂದು ಸಮೀಕ್ಷೆಯೇ ಬೇಕಾಗಿಲ್ಲ. ಒಂದು ವೇಳೆ ಸಮೀಕ್ಷೆಗೆ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದರೆ "ಹಿಂದುಳಿದ ವರ್ಗಗಳ ವಿರೋಧಿ" ಎಂಬ ಮತ್ತೊಂದು ಬಿರುದು ಅದಕ್ಕೆ ದಕ್ಕುತ್ತದೆ. ಆದ್ದರಿಂದ ಮೇಲ್ನೋಟಕ್ಕೆ ಸಮ್ಮತಿ ವ್ಯಕ್ತಪಡಿಸಿದೆಯಾದರೂ ಒಳಗೊಳಗೇ ಅಡ್ಡಗಾಲು ಹಾಕುತ್ತಿದೆ. ಉದಾಹರಣೆಗೆ, ಈ ಸಮೀಕ್ಷೆಗಾಗಿ ರಾಜ್ಯ ಸರ್ಕಾರ 17.5 ಕೋಟಿ ದುಡ್ಡು ಕೊಡುತ್ತದೆಂದು ಸ್ವತಃ ಯಡ್ಡಿಯೇ ಹೇಳಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡುವಲ್ಲಿ ಮೀನಾಮೇಷ ಎಣಿಸುತ್ತಿದ್ದಾರೆ. ಇನ್ನೊಂದೆಡೆ "ಜಾತಿವಾರು ಜನಗಣತಿ ನಡೆಯಲಿ, ಆದರೆ ಅದನ್ನು ಹಿಂದುಳಿದ ವರ್ಗಗಳ ಆಯೋಗ ನಡೆಸುವುದು ಬೇಡ, ಖಾಸಗಿಯವರಿಗೆ ಕೊಡೋಣ" ಎಂಬ ಮತ್ತೊಂದು ವಾದವನ್ನು ಮುಂದಿಡುತ್ತಿದೆ.

ಕಾನೂನಿನ ಪ್ರಕಾರ ಈ ಸಮೀಕ್ಷೆಯನ್ನು ಆಯೋಗವೇ ನಡೆಸಬೇಕು. ಅದೂಅಲ್ಲದೇ, ಹಿಂದುಳಿದ ವರ್ಗಗಳ ಆಯೋಗವೇ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅದನ್ನು ಖಾಸಗಿಯವರಿಗೆ ಕೊಡುವ ಅವಶ್ಯಕತೆಯಾದರೂ ಏನಿದೆ ಎಂಬ ಪ್ರಶ್ನೆಗೆ ಯಡ್ಡಿಯ ಹತ್ತಿರ ಉತ್ತರವಿಲ್ಲ. ಅಸಲೀಯತ್ತೇನೆಂದರೆ, ಜಾತಿವಾರು ಜನಗಣತಿಯನ್ನು ಆದಷ್ಟು ವಿಳಂಬ ಮಾಡುವುದು, ಅದಕ್ಕೆ ಅಡೆತಡೆಯೊಡ್ಡುವುದೇ ಅದರ ಉದ್ದೇಶವಾಗಿದೆ.

ಸಮೀಕ್ಷೆ ನಡೆಸುವ ಜವಾಬ್ದಾರಿಯನ್ನು ಖಾಸಗಿಯವರಿಗೆ ಕೊಡಬೇಕೆಂಬ ಸರ್ಕಾರದ ನಿಲುವಿಗೆ ಭಾರಿ ವಿರೋಧ ವ್ಯಕ್ತವಾಗಿದೆ. ಹಿರಿಯ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರೆ ಕುರುಬ ನಾಯಕ ಸಿದ್ಧರಾಮಯ್ಯನವರೂ ಅದನ್ನು ವಿರೋಧಿಸಿದ್ದಾರೆ.

ಜಾತಿವಾರು ಜನಗಣತಿಯಾದರೆ ಯಾವ ಯಾವ ಜಾತಿಗಳ ಜನ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ ಎಂಬ ಅಂಶ ಬೆಳಕಿಗೆ ಬರುತ್ತದೆ. ಇದರಿಂದ ಮೀಸಲಾತಿಯನ್ನು ಸರಿಪಡಿಸುವುದಕ್ಕೂ ಅನುಕೂಲವಾಗುತ್ತದೆ. ಸರ್ಕಾರಕ್ಕೆ ನಿಜಕ್ಕೂ ಹಿಂದುಳಿದವರ ಬಗ್ಗೆ ಕಾಳಜಿಯಿದ್ದಲ್ಲಿ ಇಂಥ ಒಂದು ಚಾರಿತ್ರಿಕ ಜನಗಣತಿಗೆ ಸಂಪೂರ್ಣ ಸಹಕಾರ ನೀಡಲಿ. ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕೈಯಲ್ಲಿಯೇ ಈ ಕೆಲಸ ಮಾಡಿಸಲಿ.

■ ಕುಮಾರ್ ಬುರಡಿಕಟ್ಟಿ

ರಾಘವೇಶ್ವರನೂ, ಬಾಲಗಂಗಾಧರನೂ ಅಣ್ಣತಮ್ಮಂದಿರಂತಲ್ಲಾ

ಇತ್ತೀಚೆಗೆ ಕರ್ನಾಟಕದಲ್ಲಿ ಎಲ್ಲಿ ನೋಡಿದರೂ ಕಾವಿಧಾರಿಗಳು ಕಾಣಿಸಿಕೊಂಡು, ಈ ನಮ್ಮ ಕರುನಾಡು ಸುಡುಗಾಡು ಸಿದ್ಧರ ಬೀಡಿನಂತೆ ಕಾಣುತ್ತಿದೆಯಂತಲ್ಲಾ; ಕಳೆದ ವರ್ಷ ನಡೆದ ತರಳಬಾಳು ಹುಣ್ಣಿಮೆ ಸಮಯದಿಂದ ಬಿಜೆಪಿಯ ಕೇಂದ್ರ ಕಚೇರಿಯಂತಾಗಿರುವ ಸಿರಿಗೆರೆ ಮಠವು ಇತ್ತೀಚೆಗೆ ಯಡೂರಪ್ಪನಿಗೆ ಅವಿಧೇಯವಾಗಿ ನಡೆದುಕೊಳ್ಳುವ ಶಾಸಕರಿಗೆ ದಂಡನೆ ವಿಧಿಸುವ ಮಠವಾಗಿಯೂ ಕಾರ್ಯನಿರ್ವಹಿಸತೊಡಗಿದೆಯಂತಲ್ಲಾ, ಸಮಾನ ಮನಸ್ಕರೂ, ಸಮಾನ ಅಭಿರುಚಿವಂತರೂ ಆಗಿ ಕಂಗೊಳಿಸುತ್ತಿದ್ದ ಎಡೂರಿ ಮತ್ತು ರೇಣುಕಾಚಾರಿ ಇತ್ತೀಚೆಗೆ ಮುನಿಸಿಕೊಂಡಂತಾಗಿರುವ ಸುದ್ದಿ ಕೇಳಿದ ಸಿರಿಗೆರೆಯ ಶಿವಾಚಾರ್ಯರು, ರೇಣುಕಾಚಾರಿಯನ್ನು ಗದರಿಸಿ, "ನೀನು ಹೀಗೆ ಆಡಿದರೆ ಹೊನ್ನಾಳಿ ಕ್ಷೇತ್ರದ ಸಾದ ಜನಾಂಗ ಒಂದೂ ಓಟಾಕದಂತೆ ಘತ್ವಾ ಹೊರಡಿಸುತ್ತೇನೆ" ಎಂದರಂತಲ್ಲಾ, ಇದರಿಂದ ಕಂಗಾಲಾದ ರೇಣುಕಾಚಾರಿ "ತಪ್ಪಾಯ್ತು ಬುದ್ಧಿ" ಎಂದು ಗೋಗರೆದನಂತಲ್ಲ, ಆದರೂ ಅನಂತರ "ಈ ಸಾದರಸ್ವಾಮಿಗೆ ಜಂಗಮ ಜಾತಿ ಶಾಸಕನಿಗೆ ಜೋರು ಮಾಡುವ ಅಧಿಕಾರ ಕೊಟ್ಟವರಾರು?" ಎಂದು ಗೊಣಗಿಕೊಂಡನಂತಲ್ಲಾ, ಥೂತ್ತೇರಿ!

* * * * * * *

ಸಿರಿಗೆರೆಯಲ್ಲಿ ಈ ಕತೆಯಾದರೆ, ಅತ್ತ ಉಡುಪಿ ಕಡೆಯ ಜಗದ್ಗುರು ಪೇಜಾವರ ಶ್ರೀಗಳು ತಮ್ಮ ಹಿಂಬಾಲಕರು ಚರ್ಚುಗಳಿಗೆ ಕಲ್ಲು ಬೀರುತ್ತಿರುವ ಸುದ್ದಿ ಕೇಳಿ ಸಮಾಧಾನಗೊಂಡರಂತಲ್ಲಾ, ಕೂಡಲೇ ಮತಾಂತರ ವಿರೋಧಿ ಅರ್ಜಿ ತಯಾರಿಸಿಕೊಂಡು ರಾಜ್ಯಪಾಲ ರಾಮೇಶ್ವರ ಠಾಕೂರ್ ಭೇಟಿ ಮಾಡಲು ಓಡಿದರಂತಲ್ಲಾ, ರಾಜ್ಯಪಾಲ ಠಾಕೂರ್, ಪೇಜಾವರರಿಗೆ ಅದ್ವಾನಿಗೆ ಕೊಡುವಷ್ಟೇ ಗೌರವ ಕೊಟ್ಟು, ಬಂದ ವಿಷಯ ಕೇಳಲಾಗಿ, "ನೋಡಿ, ಹಿಂದೂ ಧರ್ಮದ ಜನರನ್ನು ಕ್ರಿಶ್ಚಿಯನ್ ಪಾದ್ರಿಗಳು ಮತಾಂತರ ಮಾಡಿಕೊಳ್ಳುತ್ತಿದ್ದಾರೆ. ಹೊಲೆ ಮಾದಿಗರು, ಕೊರಮರು, ಕೊರಚರು ಇಲ್ಲದ ಹಿಂದೂ ಧರ್ಮವನ್ನು ಕಲ್ಪಿಸಿಕೊಳ್ಳಲು ನನ್ನಿಂದಾಗುತ್ತಿಲ್ಲ, ಈ ರಾಜ್ಯ ಬರೀ ಬ್ರಾಹ್ಮಣರು; ಲಿಂಗಾಯಿತರು, ಒಕ್ಕಲಿಗರ ಗೂಡಾಗದಂತೆ ತಡೆದು ಹಿಂದೂ ಧರ್ಮ ಉಳಿಸಿ" ಎಂದರಂತಲ್ಲಾ, ಆದರೆ ಠಾಕೂರ್‌ಗೆ ಈ ಸ್ವಾಮಿ ಏನು ಹೇಳುತ್ತಿದ್ದಾನೆಂದು ಅರ್ಥವಾಗದೆ ಅರ್ಜಿ ಪಡೆದು ಕಳಿಸಿದರಂತಲ್ಲಾ, ಥೂತ್ತೇರಿ!!

* * * * * * *

ಥೂತ್ತೇರಿ

■ ಯಾಹೂ

ಇನ್ನ ಆದಿಚುಂಚನಗಿರಿ ವೈಭೋಗವನ್ನು ವರ್ಣಿಸಲು ಪದಗಳೇ ಸಿಗುತ್ತಿಲ್ಲವಲ್ಲಾ, ಬಾಲಗಂಗಾಧರರು ಅವತಾರವೆತ್ತಿದ ನಂತರ, ಆದಿಚುಂಚನಗಿರಿ ನಾಗಮಂಗಲ ಪ್ರಾಂತ್ಯದ ಸ್ವರ್ಗವಾಗಿ ರೂಪುಗೊಂಡಿದ್ದರ ಬಗ್ಗೆ ತೀರಾ ಅಚ್ಚರಿಗೊಂಡ ಮುನಿಯಪ್ಪ ಎಂಬ ಮಂತ್ರಿ ಬವಳಿ ಬಂದಂತೆ ಮಾತನಾಡಿದ್ದನ್ನು ನೋಡಿದ ಜನ "ಇಂತಹ ಅಸಂಬದ್ಧ ವ್ಯಕ್ತಿ ಅದ್ಹೇಗೆ ಕೇಂದ್ರ ಮಂತ್ರಿಯಾದ" ಎಂದು ಬಾಯಿ ಮೇಲೆ ಬೆರಳಿಟ್ಟರಂತಲ್ಲಾ, "ಆದಿಚುಂಚನಗಿರಿ ಸ್ವಾಮಿ ಒಂದು ಭೂಲೋಕದ ಸ್ವರ್ಗ ನಿರ್ಮಿಸಿದ್ದಾರೆ. ಇದು ಬಸವಣ್ಣನಿಗೆ ಮಾದರಿ. ಇಂತಹ ಸಮುಸ್ಯೆಗಳು ಬಹಳ ಉಪಯುಕ್ತ, ಆದಿಚುಂಚನಗಿರಿ ಸ್ವಾಮಿ ದೆಹಲಿಯಲ್ಲೂ ಇಂತಹ ಸಮಸ್ಯೆ ಸೃಷ್ಟಿ ಮಾಡಿದ್ದಾರೆ. ಇಂತಹ ಸಮಸ್ಯೆಗಳು ಅಭಿವೃದ್ಧಿಯಾಗಬೇಕು. ಇದು ಒಂದು ಮಾದರಿ" ಎಂದು ಮುನಿಯಪ್ಪ ಅತ್ಯಂತ ತೂಕವಾಗಿ ಮಾತನಾಡಿ ಹೋಗಿ ವಾರವಾದರೂ ಇನ್ನೂ ಆತನ ಭಾಷಣದ ಸಾರಾಂಶವೇನು ಎಂದು ಯಾರಿಗೂ ಅರ್ಥವಾಗಿಲ್ಲವಂತಲ್ಲಾ, ಮುನಿಯಪ್ಪ ಭಾಷಣ ಕೇಳಿದ ಮಠದ ಪಟಾಲಂ "ಮುನಿಯಪ್ಪ ಏನಾದರೂ ಸಾಧನೆ ಮಾಡಿದ್ದರೆ ಚುಂಚಶ್ರೀ ಪ್ರಶಸ್ತಿ ಕೊಡಬಹುದಿತ್ತು" ಎಂದು ಮಾತನಾಡಿಕೊಂಡರಂತಲ್ಲಾ, ಥೂತ್ತೇರಿ!!

* * * * * * *

ಈ ದೇಶದಲ್ಲಿ ಕೊಡುವ ಪದ್ಮಶ್ರೀ ಪ್ರಶಸ್ತಿಗೆ ಸಮನಾಗಿ ನಾವು ಏನಾದರೂ ಕೊಡಬೇಕೆಂದು ಮನಸ್ಸು ಮಾಡಿದ ಆದಿಚುಂಚನಗಿರಿ ಗುರುಗಳು ಚುಂಚಶ್ರೀ ಪ್ರಶಸ್ತಿಯನ್ನು ಸ್ಥಾಪಿಸಿದರಂತಲ್ಲಾ, ಈ ಚುಂಚಶ್ರೀ ಎಂಬ ಪದವೇ ಕೇಳಲು ಜಿರಲೆ ತುಳಿದ ಅನುಭವ ಕೊಡುತ್ತಿರುವುದರಿಂದ ಮಠದ ಹತ್ತಿರ ಹೋಗಿರುವ ಕವಿ ಮುಕುಂದರಾಜ್, "ಆದಿಶ್ರೀ, ಬಾಲಶ್ರೀ ಅಥವಾ ಗಂಗಾಧರಶ್ರೀ ಇಲ್ಲ ಭೈರವಶ್ರೀ ಪ್ರಶಸ್ತಿ ಎಂದು ಹೆಸರು ಬದಲಾಯಿಸಿ" ಎಂಬ ಸಲಹೆಯನ್ನು ಇನ್ನೂ ಕೊಟ್ಟಿಲ್ಲವಂತಲ್ಲಾ, ಥೂತ್ತೇರಿ!!

* * * * * * *

ಈ ಆದಿಚುಂಚನಗಿರಿಗೆ ಆಗಾಗ್ಗೆ ವಕ್ಕರಿಸುವ ಎಡೂರಪ್ಪ ಮೈಮೇಲೆ ದೆವ್ವ ಬಂದಂತೆ ವದರುತ್ತಾ "ರಾಮಚಂದ್ರಾಪುರದ ಮಠವೂ ಆದಿಚುಂಚನಗಿರಿ ಮಠವೂ ಒಂದು ರೀತಿ ಅಣ್ಣತಮ್ಮಂದಿರ ಮಠವಿದ್ದಂತೆ. ಇವೆರಡನ್ನೂ ಪ್ರವಾಸಿತಾಣವಾಗಿ ಮಾಡುವವರೆಗೂ ನಾವು ವಿಶ್ರಾಂತಿ ಪಡೆಯುವುದಿಲ್ಲ" ಎಂದುಬಿಟ್ಟರಂತಲ್ಲಾ, ಎಡೂರಪ್ಪನ ವ್ಯಾಖ್ಯಾನ ಕೇಳಿದ ಮಠದ ಹಳೇ ಭಕ್ತರು "ಎಡೂರಿ ಮಾತು ನಿಜ. ಆ ರಾಮಚಂದ್ರಾಪುರ ಮಠದ ಸ್ವಾಮಿ ಅವರಿವರ ಜಮೀನು ಲಪಟಾಯಿಸಿದರೆ, ಈ ಆದಿಚುಂಚನಗಿರಿ ಮಠದಸ್ವಾಮಿ ಜನಾಂಗದ ಬಡವರ ಜಮೀನನ್ನೆ ಲಪಟಾಯಿಸಿ ಮೆಡಿಕಲ್ ಕಾಲೇಜು ಕಟ್ಟಿದ್ದಾರೆ. ಎಲ್ಲೋ ಏನೋ ಇಬ್ಬರಿಗೂ ಒಂದು ರವಷ್ಟಾದರೂ ಹೋಲಿಕೆಯಿದೆ" ಎಂದು ಆಡಿಕೊಂಡರಂತಲ್ಲಾ. ಇದೆಲ್ಲಕ್ಕಿಂತ ಮಜಾ ಸಂಗತಿಯೆಂದರೆ ಎಡೂರಪ್ಪ ಬಹಳ ಕರಾರುವಾಕ್ಕಾಗಿ ರಾಮಚಂದ್ರಾಪುರ ಮತ್ತು ಆದಿಚುಂಚನಗಿರಿ ಮಠವನ್ನು ಹೋಲಿಕೆ ಮಾಡಿದ್ದರಿಂದ ಪುಲಕಿತರಾದ ರಾಘವ ಮತ್ತು ಬಾಲು, ಅಪ್ಪ ಮಕ್ಕಳಂತೆ ಮುಖಮುಖ ನೋಡಿಕೊಂಡು ಪ್ರಸನ್ನವದನರಾದರಂತಲ್ಲಾ, ಥೂತ್ತೇರಿ!!! ■



ಸೋತವರದ್ದೂ ಒಂದು ಕಸಾಪ!



ಬರುವ ಅಕ್ಟೋಬರ್ 2ರಂದು ಬೆಂಗಳೂರಿನ ಸೆನೆಟ್‌ಹಾಲ್‌ನಲ್ಲಿ ಉದ್ಘಾಟನೆಗೊಳ್ಳಲಿರುವ ಹೊಸ ಸಂಸ್ಥೆಯ ಹೆಸರೇನು ಗೊತ್ತೆ?

ಕರ್ನಾಟಕ ಸಾಹಿತ್ಯ ಪರಿಷತ್ತು!


ಇದುವರೆಗೂ ನಾವು ಕನ್ನಡ ಸಾಹಿತ್ಯ ಪರಿಷತ್ತು, ಗಮಕ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು ಅಂತೆಲ್ಲಾ ಕೇಳಿದ್ದೇವಲ್ಲ... ಈಗ ನೋಡಿದರೆ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಹೊಸ ಬೋರ್ಡ್ ಮೇಲೇಳುತ್ತಿದೆ. ಹತ್ತಿರತ್ತಿರ ನೂರಿನ್ನೂರು ಹೆಸರುಗಳಿರುವ ಉದ್ಘಾಟನಾ ಸಮಾರಂಭದ ಆಹ್ವಾನ ಪತ್ರಿಕೆ ಓದುತ್ತಾ ಹೋದಂತೆ "ಅರೇ.... ಇದು ಮೊನ್ನೆ ನಡೆದ ಚುನಾವಣೆಲ್ಲಿ ಸೋತವರ ಕನ್ನಡ ಸಾಹಿತ್ಯ ಪರಿಷತ್ ಥರಾ ಇದೆಯಲ್ಲಾ!" ಅನ್ನಿಸುವಂತಿದೆ. ಇರಲಿ, ತಪ್ಪೇನಿಲ್ಲ ಬಿಡಿ. ಅಂದಹಾಗೆ ಈ ನೂತನ ಕರ್ನಾಟಕ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಕಸಾಪದ 'ಭವಿಷ್ಯದ ಅಧ್ಯಕ್ಷ' ಡಾ. ಸಿ. ವೀರಣ್ಣ ಇದ್ದಾರೆ. ಕಾರ್ಯಾಧ್ಯಕ್ಷ, ಕೋಶಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಗಳೂ ಇದ್ದಾರೆ. ಮಜಾ ಅಂದರೆ ಸಂಸ್ಥೆ ಉದ್ಘಾಟನೆಯಾಗುವ ಮೊದಲೇ ರಾಜ್ಯದ ಅಷ್ಟೂ ಜಿಲ್ಲೆಗಳಿಗೆ ಅಧ್ಯಕ್ಷರನ್ನು ಆರಿಸಿಬಿಡಲಾಗಿದೆ. ಇವರಲ್ಲಿ ಕೆಲವರು ಮೊನ್ನಿನ ಕಸಾಪ ಎಲೆಕ್ಷನ್‌ನಲ್ಲಿ ಜಿಲ್ಲಾ ಅಧ್ಯಕ್ಷಗಿರಿಗಾಗಿ ಸ್ಪರ್ಧಿಸಿ ಸೋತಿರುವವರು.

ಈ ಕರ್ನಾಟಕ ಸಾಹಿತ್ಯ ಪರಿಷತ್‌ಗೆ ಒಂದು ಸಲಹಾ ಸಮಿತಿಯಂತಲೂ ಮಾಡಿ ಯು.ಆರ್. ಅನಂತಮೂರ್ತಿ, ಎಂ.ಪಿ. ಪ್ರಕಾಶ್ ತರಹದ ಮುಗ್ಗರ ಹೆಸರು ಕಾಣಿಸಲಾಗಿದೆ. ಈ ಸಂಸ್ಥೆ ಕಟ್ಟಿ ಬೆಳೆಸಲು ಚಾಕು-ಚೂರಿಯೂ ಬೇಕಾಗಬಹುದೆಂತಲೋ ಏನೋ ಆ ಕ್ಷೇತ್ರದ ಪ್ರವೀಣರಿಗೂ ಜಾಗ ಸಿಕ್ಕಿದೆ.

ಅಕ್ಟೋಬರ್ 2ರಂದು ನಡೆಯಲಿರುವ ಕರ್ನಾಟಕ ಸಾಹಿತ್ಯ ಪರಿಷತ್‌ನ ಉದ್ಘಾಟನಾ ಸಮಾರಂಭದ ಕೆಲ ಗೋಷ್ಠಿಗಳ ಸಬ್ಜೆಕ್ಟ್ ಕುತೂಹಲಕಾರಿಯಾಗಿವೆ. ಉಳಿದ ಕೆಲವು ಬರೀ ತೌಡು ಕುಟ್ಟುವ ಕೆಲಸ. ■

ಅಮೂ ಆಲಾಪ; ಚೆಮೂ ಚೀತ್ಕಾರ

ಒಂದೇ ಗಂಟಲಿನ ಎರಡು ದನಿಗಳೇ?



ಪ್ರತಿಕ್ರಿಯೆ

ಪ್ರಮಾಣವಚನ ಸ್ವೀಕರಿಸುವಾಗ ಮುಖ್ಯಮಂತ್ರಿ ಯಡ್ಯೂರಪ್ಪ ಹೊದ್ದ ರೈತರ ಶಾಲಿನ ಹಸಿರು ಬಣ್ಣ ಪದಗೆಟ್ಟು ಅದರ ಅಡಿಯಲ್ಲಿಯೇ ಇದ್ದ ಕೇಸರಿ ಬಣ್ಣ ಈಗ ಢಾಳಾಗಿ ಮೆರೆಯುತ್ತಿದೆ-ಕೇವಲ ನಾಲ್ಕು ತಿಂಗಳ ಬೇಸಿನಲ್ಲಿ. ಇದೇನು ಅನಿರೀಕ್ಷಿತ ಬೆಳವಣಿಗೆಯೇನೂ ಅಲ್ಲ. ಚರ್ಚ್ ಮೇಲಿನ ದಾಳಿಗಳು ಕುಂಕುಮಧಾರಿಗಳ ಗುಪ್ತ ಅಜಂಡಾವನ್ನು ಬಯಲು ಮಾಡುತ್ತಿವೆ ಅಷ್ಟೆ. ಈ ಸಂದರ್ಭದಲ್ಲಿ ನಮ್ಮ ವೈಚಾರಿಕ ವಲಯದಲ್ಲಿ ಬಿಸಿಬಿಸಿ ಚರ್ಚೆ ನಡೆದಿರುವುದು ಸೂಕ್ತವೇ.

ಎರಡು ದನಿಗಳು ಮತ್ತೆ ಮತ್ತೆ ಗಟ್ಟಿಯಾಗಿ ಕೇಳುತ್ತಿವೆ; ಒಂದು, ಒಂದು ಕಾಲಕ್ಕೆ ಖ್ಯಾತ ವಿದ್ವಾಂಸರಾಗಿದ್ದ ಚಿದಾನಂದಮೂರ್ತಿ ಅವರದು; ಇನ್ನೊಂದು ಸಮಕಾಲೀನ ಸಾಹಿತ್ಯ ಲೋಕದ ಮುಖ್ಯರಲ್ಲಿ ಒಬ್ಬರಾದ ಅನಂತಮೂರ್ತಿ ಅವರದು (ಅನುಕೂಲಕ್ಕಾಗಿ 'ಅಮೂ' ಮತ್ತು 'ಚಿಮೂ' ಎಂದು ಕರೆಯೋಣ) ಚಿಮೂ : ಸಂಘ ಪರಿವಾರದ ಸ್ವಯಂಘೋಷಿತ ವಕ್ತಾರ. ಅವರ ದನಿಯಲ್ಲಿ ಚೀರಾಟವಿದೆ, ಚೀತ್ಕಾರವಿದೆ. ಅಮೂ: ತಮ್ಮ ಅನೇಕ ವೈರುಧ್ಯಗಳ ನಡುವೆಯೂ ಮಾನವೀಯ ಮೌಲ್ಯಗಳ ಬಗ್ಗೆ ಮಾತನಾಡುವ ಬುದ್ಧಿಜೀವಿ. ಅವರ ದನಿಯಲ್ಲಿ ಮಧುರ ಆಲಾಪವಿದೆ, ತಂಪುಗೊಳಿಸುವ ಇಂಪು ಇದೆ. ಅವರೊಂದು ಧ್ರುವ, ಇವರೊಂದು ಧ್ರುವ.

* * * *

ನನ್ನ ಅನುಮಾನ: ಕವಿವಾಣಿಯಂತೆ ಇವೆರಡರ ನಡುವೆ ಏನಾದರೂ ಚುಂಬಕ ಗಾಳಿ ಬೀಸುತ್ತಿರಬಹುದೇ? ಒಂದೇ ಪುಪ್ಪುಸದಿಂದ ಹೊರಟು, ಒಂದೇ ನಾಳದ ಗುಂಟ ಹರಿಯುತ್ತಾ ಬಂದ ವಾಯು, ಒಂದೇ ಗಂಟಲಿನಿಂದ ಎರಡು ವಿಭಿನ್ನ ದನಿಗಳಾಗಿ ನಮಗೆ ಕೇಳಿಸುತ್ತಿರಬಹುದೇ? ಇಂಥ ಅನುಮಾನಕ್ಕೆ ಕಾರಣಗಳಿವೆ.

ಇಬ್ಬರೂ 'ಹಿಂದೂ' ಎಂಬ ಶಬ್ದವನ್ನು, ಅದೊಂದು 'ಧರ್ಮ' ಎಂಬ ಪರಿಕಲ್ಪನೆಯನ್ನು ಮನಸಾ ಒಪ್ಪಿಕೊಂಡವರೇ. ಆದರೆ ವೇದೋಪನಿಷತ್ತುಗಳು, ಭಗವದ್ಗೀತೆ, ಇತರ ಧರ್ಮಶಾಸ್ತ್ರಗಳು, ವಚನಸಾಹಿತ್ಯ, ದಾಸರ ಪದ, ತತ್ವಪದ-ಎಲ್ಲಿಯೂ ಕಣ್ಣಿಗೆ ಬೀಳದ ಈ ಶಬ್ದ ಈ ದೇಶಕ್ಕೆ ಮುಸ್ಲಿಮರ ಆಗಮನದ ನಂತರ ಹುಟ್ಟಿಕೊಂಡು ಈಗ ವ್ಯಾಪಕವಾಗಿ ಚಾಲ್ತಿಯಲ್ಲಿದೆ. 'ಹಿಂದೂಧರ್ಮ' ಎಂಬುದು ಸಾವಿರಾರು ವರ್ಷಗಳಿಂದ ನಡಕೊಂಡು ಬಂದಿರುವ 'ವೈದಿಕ' ಅಥವಾ 'ಬ್ರಾಹ್ಮಣ' ಧರ್ಮದ ಆಧುನಿಕ ಮುಖವಾಡ ಮಾತ್ರ. ಪುರೋಹಿತ ಶಾಹಿ ಪಾರುಪತ್ಯದ ಜಾತಿಪದ್ಧತಿ ಈ ಧರ್ಮದ ಬುನಾದಿ. ಮಾನವ ನಿರ್ಮಿತ ಅಸಮಾನತೆ, ಶೋಷಣೆ, ಕ್ರೌರ್ಯ, ಹಿಂಸೆ-ಈ ಧರ್ಮದ ತಿರುಳು. ಸದಾ ನಂಜು ಕಾರುವ, ಅನ್ಯರಿಗೆ ಅಸಹ್ಯಪಡುವ. ಚಿಮೂ ಅಂಥವರು ಕುಂಕುಮಧಾರಿ ತ್ರಿಶೂಲಿಗಳು ಈ ಧರ್ಮದ ನಿಜವಾದ ವಾರಸುದಾರರು. ಜಾತಿವೈಷಮ್ಯವನ್ನು ಖಂಡಿಸಿ, ಮಾನವೀಯತೆಯ ಬಗ್ಗೆ ಮಾತನಾಡುವ ವಚನಕಾರರು, ದಾಸರು, ಉದಾರವಾದಿಗಳು, ಸುಧಾರಣಾವಾದಿಗಳು ಆಗಾಗ ಮಿಂಚಿ ಮಾಯವಾಗುವ ಅಂಚಿನ ಪಾತ್ರಗಳೇ ಹೊರತು, ರಂಗ ಮಧ್ಯದ ಮುಖ್ಯ ಪಾತ್ರಗಳಲ್ಲ. ಅವರದೇ ಅಟ್ಟಹಾಸ ಈಗ ನಮ್ಮ ಕಣ್ಣಿಗೆ, ಕಿವಿಗೆ ಅಪ್ಪಳಿಸುತ್ತಿದೆ.

ಅಮೂ ಹೇಳುತ್ತಾರೆ: "ಸತತ ವಿಮರ್ಶೆಯ ಅಗ್ನಿದಿವ್ಯದಲ್ಲಿ ತನ್ನ ಚೈತನ್ಯವನ್ನು ಜೀವಂತಗೊಳಿಸಿಕೊಳ್ಳುವ ನಮ್ಮ ಹಿಂದೂ ನಾಗರಿಕತೆ..." ಇಂಥ ಒಂದಾದರೂ ಸಂದರ್ಭ ಈ ದೇಶದ ಇತಿಹಾಸದಲ್ಲಿ ನಿರ್ಮಾಣವಾಗಿದೆಯೇ? 'ನಮ್ಮ'- ಎಂಬುದು ಇಂಡಿಯಾದ ಬಹುಮುಖಿ ಸಮುದಾಯದ ಸೂಚಕವೇ? ಅಥವಾ ಅನಂತಮೂರ್ತಿಯವರನ್ನು ಭವದ ಬಂಧನದಲ್ಲಿ ಕಟ್ಟಿಹಾಕಿದ ಒಂದು ಚಿಕ್ಕ, ಆದರೆ ದೇಶವ್ಯಾಪಿಯಾದ, ಬ್ರಾಹ್ಮಣ ಸಮುದಾಯದ ಸೂಚಕವೇ?


ಇಂಥ ರೊಮ್ಯಾಂಟಿಕ್ ಅಪಕಲ್ಪನೆಗಳನ್ನು ನೀಗಿಸಿಕೊಂಡು, ಉದಾರವಾದ-ಸುಧಾರಣಾವಾದದಂಥ ತೇಪೆ ಕೆಲಸಕ್ಕೆ ಹೋಗದೆ ಮೂಲ ಸಮಸ್ಯೆಗಳನ್ನು ಚರ್ಚಿಸುವುದು ಮುಖ್ಯ. ಪ್ರಾರ್ಥನಾ ಮಂದಿರಗಳ ಮೇಲಿನ ದಾಳಿ ವೋಟ್ ಬ್ಯಾಂಕಿನ ರಾಜಕೀಯ - ಎಂಬುದು ಮಾಮೂಲಿ ರಾಜಕಾರಣಿಗಳ ಮೇಲ್ಪದರಿನ ವಿಶ್ಲೇಷಣೆ. ಅಮೂ ಮಾತುಗಳು ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ಸದ್ಯದ ಪ್ರಕ್ಷುಬ್ಧ ಸನ್ನಿವೇಶದಲ್ಲಿ ಎಲ್ಲ ಪ್ರಗತಿಪರ ಚಿಂತಕರು ಒಟ್ಟಾಗಿ ಹೋರಾಡಬೇಕಾದದ್ದು ಕಾಲದ ಅನಿವಾರ್ಯತೆ. ಆದರೆ ಅದರಾಚೆಗೂ ಕೂಡ ನಮ್ಮ ಚಿಂತನೆಯ ಬೀಸು ಹುಟ್ಟಬೇಕು. ಒಂದು ಕಡೆ ತೇಪೆ ಹಚ್ಚಿ ಸಮಾಧಾನಪಟ್ಟುಕೊಳ್ಳಬಹುದು. ಆದರೆ ಹರಿದು ಲಡ್ಡಾಗಿರುವ ಅಂಗಿಯನ್ನು ಗಟಾರಕ್ಕೆ ಬಿಸಾಕುವುದೇ ಒಳ್ಳೆಯದು-ಒಂದಿಷ್ಟು ದಿನ ಬರಿಮೈಯಲ್ಲಿ ತಿರುಗಾಡುವ ಪ್ರಸಂಗ ಬಂದರೂ ಕೂಡ.

■ ಚಂಪಾ

ರಾಮ್‌ವಿಲಾಸ್ ಪಾಸ್ವಾನ್ ಮತ್ತು ಜಾತ್ಯತೀತತೆ

ಇತ್ತೀಚಿಗೆ ಕೇಂದ್ರ ಮಂತ್ರಿ ರಾಮ್‌ವಿಲಾಸ್ ಪಾಸ್ವಾನ್‌ರವರು ಒಂದು ಸಂದರ್ಶನದಲ್ಲಿ ಸಂಘ ಪರಿವಾರದ ಢೋಂಗಿತನವನ್ನು ತೆರೆದಿಟ್ಟಿದ್ದಾರೆ. ಅದರ ಹಲವು ಆಯ್ದ ಭಾಗಗಳನ್ನು ನಮ್ಮ ಓದುಗರಿಗಾಗಿ ನೀಡುತ್ತಿದ್ದೇವೆ.



"ಸಿಮಿ ಸೇರಿದಂತೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಭಜರಂಗದಳ, ವಿಶ್ವಹಿಂದೂ ಪರಿಷತ್ ಮತ್ತು ಆರ್‌ಎಸ್‌ಎಸ್‌ಗಳನ್ನು ನಿಷೇಧಿಸಬೇಕು.

ರಾಷ್ಟ್ರಪಿತ ಮಹಾತ್ಮಾ ಗಾಂಧಿಯನ್ನು ಕೊಂದ ನಾಥುರಾಮ್ ಗೋಡ್ಸೆ ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್‌ನ ಸದಸ್ಯನಾಗಿದ್ದ. ಆದರೂ ಆ ಸಂಘಟನೆಯ ಮೇಲೆ ಹೇರಿದ್ದ ನಿಷೇಧವನ್ನು ಹಿಂದೆ ಪಡೆಯಲಾಯಿತು. ರಾಷ್ಟ್ರೀಯ ಸ್ಮಾರಕವಾಗಿದ್ದ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಸಂಘಟನೆಯನ್ನೂ ನಿಷೇಧಿಸಬೇಕು. ಇತ್ತೀಚಿಗೆ ಕಾನ್ಪುರದಲ್ಲಿ ಬಾಂಬ್‌ಗಳನ್ನು ತಯಾರಿಸುತ್ತಿದ್ದಾಗ ಭಜರಂಗದಳದ ಇಬ್ಬರು ಸದಸ್ಯರು ಸತ್ತರಲ್ಲ, ಅವರು ಯಾರ ವಿರುದ್ಧ ಆ ಬಾಂಬ್‌ಗಳನ್ನು ತಯಾರಿಸುತ್ತಿದ್ದರು ಎಂಬುದೂ ತನಿಖೆಯಾಗಬೇಕು.

ಭಾರತದ ಗಡಿಪ್ರದೇಶದಲ್ಲಿರುವ ಅಲ್ಪಸಂಖ್ಯಾತರ ಬಗ್ಗೆ ನಾವು ಎಂದೂ ಮರೆಯಬಾರದು. ಮಿಜೋರಾಮ್, ಮಣಿಪುರ್, ಅರುಣಾಚಲಪ್ರದೇಶ, ಸಿಕ್ಕಿಂ, ತ್ರಿಪುರ ಮತ್ತು ನಾಗಾಲ್ಯಾಂಡ್‌ನಲ್ಲಿ ಕ್ರಿಶ್ಚಿಯನ್ನರೇ ಬಹುಸಂಖ್ಯೆಯಲ್ಲಿದ್ದಾರೆ. ಪಂಜಾಬಿನಲ್ಲಿ ಸಿಖ್ಖರು, ಕಾಶ್ಮೀರದಲ್ಲಿ ಮುಸಲ್ಮಾನರು, ಲೇಹ್ ಮತ್ತು ಲಡಾಕ್‌ನಲ್ಲಿ ಬೌದ್ಧರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ನಿಮ್ಮ ಮನೆ ಎಷ್ಟೇ ಭದ್ರವಾಗಿದ್ದರೂ ನಿಮ್ಮ ಕಾಂಪೌಂಡ್ ಗೋಡೆಯೇ ಶಿಥಿಲಗೊಂಡಿದ್ದರೆ ನಿಮ್ಮ ಮನೆಯನ್ನು ಪ್ರವೇಶಿಸಲು ಕಳ್ಳನಿಗೆ ಸುಲಭವಾಗುತ್ತದೆ.

ಪಾರ್ಲಿಮೆಂಟಿನ ಮೇಲೆ ನಡೆದ ದಾಳಿಯಲ್ಲಿ ಭಾಗಿಯಾಗಿದ್ದ ಅಫ್ಜಲ್ ಗುರುವನ್ನು ಯಾಕೆ ಇನ್ನೂ ಗಲ್ಲಿಗೇರಿಸಿಲ್ಲ ಎಂದು ಹಲವರು ಪ್ರಶ್ನಿಸುತ್ತಾರೆ. ಆದರೆ ಅದಕ್ಕೂ ಮುನ್ನ ರಾಜೀವ್ ಗಾಂಧಿ ಹತ್ಯಾ ಪ್ರಕರಣದಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಮುರುಗನ್‌ನನ್ನು ಏಕೆ ಗಲ್ಲಿಗೇರಿಸಿಲ್ಲ ಎಂದು ಯಾರೂ ಪ್ರಶ್ನಿಸುತ್ತಿಲ್ಲ. ರಾಷ್ಟ್ರಪತಿಗಳ ಮುಂದಿರುವ ಪಟ್ಟಿಯಲ್ಲಿ ಮುರುಗನ್‌ನದ್ದು 5 ನೇ ಸ್ಥಾನವಾಗಿದ್ದರೆ, ಅಫ್ಜಲ್ ಗುರುವಿನದ್ದು 27 ನೇ ಸ್ಥಾನ. ಅಫ್ಜಲ್ ಪರವಾಗಿ ಕಾಂಗ್ರೆಸ್ ಪಕ್ಷ ರಾಷ್ಟ್ರಪತಿಗಳ ಮೇಲೆ ಪ್ರಭಾವ ಬೀರಿರುವುದು ನಿಜವೇ ಆಗಿದ್ದರೆ, ರಾಜೀವ್ ಗಾಂಧಿಯನ್ನು ಆರಾಧಿಸುವ ಕಾಂಗ್ರೆಸ್ ಮುರುಗನ್ ಅನ್ನು ಗಲ್ಲಿಗೇರಿಸಬೇಕೆಂದೂ ಪ್ರಭಾವ ಬೀರುತ್ತಿತ್ತಲ್ಲವೆ? ಕುಡುಕರಿಗೆ ಕುಡಿಯುವುದಕ್ಕೆ ಒಂದು ನೆಪ ಮಾತ್ರ ಸಾಕು ಎಂಬಂತಿದೆ ಇಂತಹ ಆರೋಪಗಳನ್ನು ಮಾಡುತ್ತಿರುವವರ ಪರಿಸ್ಥಿತಿ.

ರಾಮಾಯಣ, ಭಗವದ್ಗೀತೆ, ವೇದ, ಪುರಾಣ, ಉಪನಿಷದ್‌ಗಳಲ್ಲಿ ಇಲ್ಲದಿರುವ ಈ 'ಹಿಂದೂ' ಪದ ಬಂದಿದ್ದಾದರೂ ಎಲ್ಲಿಂದ? ಧರ್ಮ ಎಂಬುದು ಮನೆಯಲ್ಲಿ ಬೆಳಕು ಚೆಲ್ಲುವ ಹಣತೆಯಾಗಿರಬೇಕೇ ಹೊರತು ಮನೆಯಲ್ಲಿರುವವರನ್ನೇ ಭಸ್ಮ ಮಾಡುವ ಬೆಂಕಿ ಆಗಬಾರದು.

ಇಸ್ಲಾಂ ಧರ್ಮದಲ್ಲಿ ಭಯೋತ್ಪಾದನೆಗೆ ಜಾಗವೇ ಇಲ್ಲ, ಇನ್ನು ಹಿಂದೂ ಧರ್ಮಕ್ಕೆ ಬರುವುದಾದರೆ ಯಾವ ಧರ್ಮ ಗ್ರಂಥದಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿ ಎಂದು ಹೇಳಿದೆ? ಬಾಬರ್ ಬಾಬ್ರಿ ಮಸೀದಿಯನ್ನು ಕಟ್ಟಿಸಿದ ಎಂಬ ಒಂದೇ ಕಾರಣಕ್ಕೆ ಅದನ್ನು ಧ್ವಂಸ ಮಾಡುವುದು ಸರಿಯಾದರೆ ನಮ್ಮ ಸಂಸತ್ ಭವನವನ್ನು ಬ್ರಿಟಿಷರು ಕಟ್ಟಿಸಿದ್ದರು ಎಂಬ ಕಾರಣಕ್ಕೆ ಅದನ್ನೂ ಧ್ವಂಸ ಮಾಡುವುದೂ ಸಮರ್ಥನೀಯ ಆಗುತ್ತದೆಯೇ?

ವಿಶ್ವಹಿಂದೂ ಪರಿಷತ್ತನ್ನು ಭಯೋತ್ಪಾದಕ ಸಂಘಟನೆಗಳ ಪಟ್ಟಿಯಲ್ಲಿ ಸೇರಿಸಬೇಕು."

ರಿಲೈಯನ್ಸ್ ವಿರುದ್ಧ ಜನಮತ!

ಕರ್ನಾಟಕದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ಸರ್ಕಾರ ಇತ್ತೀಚೆಗೆ ಒಂದೇ ದಿನದಲ್ಲಿ ಹಲವಾರು ಹೊಸ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಅನುಮತಿ ನೀಡಿತು. ಆ ಅನುಮತಿಯಿಂದ ಭೂಗಳ್ಳರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಅಶೋಕ್ ತರಹದ ಸಚಿವರು ಮತ್ತು ಚೆಡ್ಡಿ ಪಟಾಲಂನ ಹಲವು ಉದ್ಯಮಪತಿಗಳು ಲಾಭ ಪಡೆಯಬಹುದು. ಆದರೆ ಇದೇ ಚೆಡ್ಡಿಗಳಿಗೆ ತಮ್ಮ ಮತ ನೀಡಿ ಗೆಲ್ಲಿಸಿದ ರೈತರಿಗೆ ಸಿಗುವುದು ಚಿಪ್ಪು ಮಾತ್ರ.

ಇಂತಹ ಅನ್ಯಾಯವನ್ನು ವಿರೋಧಿಸುವುದು ಹೇಗೆ ಎಂಬುದರ ಬಗ್ಗೆ ಇಲ್ಲೊಂದು ಉದಾಹರಣೆಯನ್ನು ನೀಡಲಾಗಿದೆ. ರೈತ ಸಂಘಟನೆಗಳಿಗೂ, ರೈತರ ಪರ ಹೋರಾಟಗಾರರಿಗೂ, ಕೊನೆಗೆ ರೈತರಿಗೂ ಇದು ಮಾರ್ಗದರ್ಶಿಯಾಗಬಲ್ಲದು. ಆದ್ದರಿಂದ ಎಲ್ಲರೂ ಇದನ್ನು ಓದಬೇಕು ಮತ್ತು ಇದರಿಂದ ಸ್ಫೂರ್ತಿ ಪಡೆಯಬೇಕು ಎಂಬ ವಿನಂತಿ....

ದೇಶದ ಅಭಿವೃದ್ಧಿಗಾಗಿ ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್)ಗಳು ಅಗತ್ಯ ಎಂಬುದರ ಬಗ್ಗೆ ಈಗಾಗಲೇ ಬಂಡವಾಳಶಾಹಿಗಳಿಂದ, ಉದ್ಯಮಪತಿಗಳಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾಗಿದೆ; ಅವೆಲ್ಲ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾಗಿ ಪ್ರಕಟವಾಗಿವೆ. ಆದರೆ ಇದೇ ಎಸ್‌ಇಜೆಡ್‌ಗಳಿಗೆ ತಮ್ಮ ಭೂಮಿಯನ್ನು ಕಳೆದುಕೊಳ್ಳುವ ರೈತರ ಅಭಿಪ್ರಾಯವನ್ನು ಇಲ್ಲಿಯತನಕ ಯಾರೂ ಸಂಗ್ರಹಿಸುವ ಪ್ರಯತ್ನ ಮಾಡಿರಲಿಲ್ಲ, ಮಾತ್ರವಲ್ಲ ಅವರ ಅಭಿಪ್ರಾಯಗಳು ಮಾಧ್ಯಮಗಳಲ್ಲಿ ಪ್ರಕಟಗೊಂಡಿರಲಿಲ್ಲ.

ಆದರೆ ಪ್ರಥಮ ಬಾರಿಗೆ ಇಂತಹ ಒಂದು ಪ್ರಕ್ರಿಯೆ ಮಹಾರಾಷ್ಟ್ರದಲ್ಲಿ ನಡೆದಿದೆ! ಮಹಾರಾಷ್ಟ್ರದ ರಾಯ್‌ಗಢ್ ಜಿಲ್ಲೆಯ ಹತ್ತು ಸಾವಿರ ಹೆಕ್ಟೇರ್‌ಗಳನ್ನು (ಆ ಪ್ರದೇಶದಲ್ಲಿನ 45 ಹಳ್ಳಿಗಳೂ ಸೇರಿದಂತೆ) ರಿಲೈಯನ್ಸ್ ಕಂಪನಿ ಪಡೆದು ಅಲ್ಲಿ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಮುಂದಾಗಿತ್ತು, ಅದಕ್ಕೆ ಮಹಾರಾಷ್ಟ್ರ ಸರ್ಕಾರದ ಸಹಮತವೂ ಇತ್ತು.


ಆದರೆ 'ಎಸ್‌ಇಜೆಡ್ ವಿರೋಧ ಸಮಿತಿ' ಎಂಬ ಸಂಘಟನೆಯೊಂದು ರಾಯ್‌ಗಢ್ ಜಿಲ್ಲೆಯಲ್ಲಿ ಹುಟ್ಟಿಕೊಂಡು 10,000 ಹೆಕ್ಟೇರ್ ಪ್ರದೇಶವನ್ನು ರಿಲೈಯನ್ಸ್ ಕಂಪೆನಿಗೆ ನೀಡುವುದರ ಬಗ್ಗೆ ಅಲ್ಲಿನ ಭೂಮಾಲೀಕರ ಅಭಿಪ್ರಾಯವೇನೆಂದು ಜನಮತ ಸಂಗ್ರಹಿಸಲು ಮುಂದಾಯಿತು. ಇದರ ಸುಳಿವು ಸಿಕ್ಕ ಕೂಡಲೇ ರಿಲೈಯನ್ಸ್ ಕಂಪನಿ ಮತ್ತು ಮಹಾರಾಷ್ಟ್ರದ ಸರ್ಕಾರ ಪ್ರಸ್ತಾಪಿತ ಎಸ್‌ಇಜೆಡ್ ಪ್ರದೇಶದಿಂದ 23 ಹಳ್ಳಿಗಳನ್ನು ಕೈಬಿಟ್ಟು ಬರೀ 22 ಹಳ್ಳಿಗಳನ್ನು SEZ ಗಾಗಿ ವಶಪಡಿಸಿಕೊಳ್ಳಲಾಗುವುದು ಎಂದು ಹೇಳಿದವು.

ತಮ್ಮ ವಿರುದ್ಧದ ರೈತರ ಒಗ್ಗಟ್ಟನ್ನು ಮುರಿಯುವ ತಂತ್ರ ಇದಾಗಿತ್ತು. ಇದನ್ನು ಚೆನ್ನಾಗಿಯೇ ಅರಿತ ಆ ಪ್ರದೇಶದಲ್ಲಿನ ರೈತರು ಇನ್ನಷ್ಟು ಒಗ್ಗೂಡಿದರಲ್ಲದೆ ತಮ್ಮ ಹೋರಾಟವನ್ನು ತೀವ್ರಗೊಳಿಸಿದರು. ತಾಯಿಗೆ ಸಮಾನವಾದ ತಮ್ಮ ಭೂಮಿಯನ್ನು ರಿಲೈಯನ್ಸ್‌ನ ರಾಕ್ಷಸರಿಗೆ ನೀಡಬಾರದೆಂದು ಹಾಡುಗಳನ್ನು ರಚಿಸಿ ಹಾಡಿದರು; ಮನೆಮನೆಗೆ ಹೋಗಿ SEZ ವಿರುದ್ಧದ ಪ್ರಚಾರಾಂದೋಲನದಲ್ಲಿ ತೊಡಗಿದರು; ತಮ್ಮ ಭೂಮಿ ರಿಲೈಯನ್ಸ್ ಕಂಪನಿಯ ಪಾಲಾಗಬೇಕೋ ಬೇಡವೋ ಎಂಬುದರ ಬಗ್ಗೆ ತಮ್ಮ ಮತ ಚಲಾಯಿಸುವಂತೆ ಕೇಳಿಕೊಂಡರು.

ತಮ್ಮ ವಿರುದ್ಧ ರೈತರು ಹೀಗೆ ಸಂಘಟಿತರಾಗುತ್ತಿರುವುದನ್ನು ಕಂಡು ಕಂಗಾಲಾದ ರಿಲೈಯನ್ಸ್ ಕಂಪನಿ ಇಂತಹ ಒಂದು ಜನಮತ ನಡೆಯಲೇಬಾರದೆಂದು ತಡೆಯಾಜ್ಞೆ ಕೋರಿ ಮುಂಬೈ ಹೈಕೋರ್ಟ್ ಮುಂದೆ ಅರ್ಜಿ ಸಲ್ಲಿಸಿತು. ಆ ಅರ್ಜಿಗೆ ತಕ್ಷಣವೇ ಹೈಕೋರ್ಟ್ ಪ್ರತಿಕ್ರಿಯಿಸದಿದ್ದರಿಂದ ಜನಮತ ಸಂಗ್ರಹಿಸುವ ಪ್ರಕ್ರಿಯೆ ಮುಂದುವರೆಯಿತು.

ಮತದಾನ ನಡೆದ ದಿನ ಮತದಾರನಿಗೆ ಎರಡು ಅರ್ಜಿಗಳನ್ನು ನೀಡಲಾಯಿತು. ಒಂದು ಶರತ್ತಿನ ಮೇಲೆ ತಮ್ಮ ಭೂಮಿಯನ್ನು SEZ ಗೆ ನೀಡಲು ಸಿದ್ಧರಿದ್ದೇವೆ ಎಂದು ಹೇಳುವ ಅರ್ಜಿ. ಇನ್ನೊಂದು ಯಾವುದೇ ಕಾರಣಕ್ಕೂ ತಮ್ಮ ಭೂಮಿಯನ್ನು SEZ ಗೆ ನೀಡುವುದಿಲ್ಲ ಎಂಬ ಅರ್ಜಿ.

ಈ ಜನಮತದಲ್ಲಿ 19,000 ರೈತರ ಅಭಿಪ್ರಾಯ ವ್ಯಕ್ತವಾಗಿದ್ದು ಅವರಲ್ಲಿ ಶೇ. 80-85 ಜನ ತಮ್ಮ ಭೂಮಿಯನ್ನು SEZ ಗೆ ನೀಡುವುದನ್ನು ವಿರೋಧಿಸಿದರು. ಇನ್ನುಳಿದಂತೆ 'ಶರತ್ತು ಬದ್ಧವಾಗಿ' ತಮ್ಮ ಭೂಮಿಯನ್ನು ನೀಡಲು ಒಪ್ಪಿದ ಶೇ. 15-20 ಮತದಾರರು ಪ್ರತಿ ಎಕರೆಗೆ ರಿಲೈಯನ್ಸ್ ಕಂಪನಿ ನೀಡಲು ಸಿದ್ಧವಾಗಿರುವ ಹತ್ತು ಲಕ್ಷದ ಬದಲಾಗಿ ಹತ್ತು ಕೋಟಿ ರೂಪಾಯಿಗಳನ್ನು ನೀಡಬೇಕೆಂದೂ, ಅಭಿವೃದ್ಧಿಗೊಂಡ ಭೂಮಿಯಲ್ಲಿ ತಮಗೆ ಶೇ. 12.5 ಭೂಮಿಯನ್ನು ನೀಡಬೇಕೆಂದೂ, ಅಷ್ಟೇ ಅಲ್ಲದೆ



ತಮ್ಮ ಭೂಮಿಯನ್ನು ಮಾರಾಟ ಮಾಡುವುದಿಲ್ಲ ಬದಲಾಗಿ 99 ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ನೀಡುತ್ತೇವೆ ಎಂದೂ ಹೇಳಿದರು!

ತಮ್ಮ ಭೂಮಿಯನ್ನು SEZ ಗೆ ನೀಡುವುದನ್ನು ವಿರೋಧಿಸಿದ ಹಲವರು "ನಾವು ರೈತರಾಗಿರಬಹುದು, ಆದರೆ ನಾವು ಪೆದ್ದರಲ್ಲ, ಸರ್ಕಾರದ ಹೆಗಲಿನ ಮೇಲೆ ಸವಾರಿ ಮಾಡಿಕೊಂಡು ನಮ್ಮ ಭೂಮಿಯನ್ನೇ ಕಬಳಿಸಲು ಯತ್ನಿಸುತ್ತಿರುವ ಈ ಅಂಬಾನಿ ಯಾರು? ನಮ್ಮ ಭೂಮಿಗೆ ಹಣ ಎಂದೂ ಪರ್ಯಾಯವಲ್ಲ" ಎಂದು ಗುಡುಗಿದ್ದಾರೆ.

ಅಧಿಕಾರದ ಅಮಲನ್ನೇರಿಸಿಕೊಂಡಿರುವ ಸರಕಾರ ಮತ್ತು ಹಣದ ಕೊಬ್ಬಿನಿಂದ ಕೂಡಿರುವ ಉದ್ಯಮಪತಿಗಳು ಜೊತೆಗೂಡಿ ತಮ್ಮ ನಡುವೆ ಕೋಟ್ಯಂತರ ರೂಪಾಯಿಗಳ ವ್ಯವಹಾರವನ್ನು ಕುದುರಿಸಿಕೊಂಡು ಲಕ್ಷಾಂತರ ರೈತರು ಬೀದಿಪಾಲಾಗುವಂತೆ ಮಾಡುತ್ತಿದ್ದಾರೆ. ರಾಯ್‌ಗಢದಲ್ಲಿ ನಡೆದ ಜನಾಭಿಪ್ರಾಯದಂತಹ ಪ್ರಕ್ರಿಯೆ ಮೊದಲೇ ನಡೆದಿದ್ದರೆ ಪಶ್ಚಿಮ ಬಂಗಾಳದಲ್ಲಿ ಸಿಂಗೂರ್‌ನಂತಹ ಬಿಕ್ಕಟ್ಟು, ನಂದಿಗ್ರಾಮದಂತಹ ರಕ್ತದೋಕುಳಿ, ನಮ್ಮ ಕರ್ನಾಟಕದ ನಂದಗುಡಿಯಲ್ಲಿನ ರೈತರ ಸಂಘರ್ಷ ಸಂಭವಿಸುತ್ತಲೇ ಇರಲಿಲ್ಲ.

ಆದರೆ ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ಎಂಬ ಭಾರತದಲ್ಲಿ ಇವತ್ತು ಪ್ರಜೆಗಳ ಅಭಿಪ್ರಾಯಕ್ಕೆ ಎಷ್ಟು ಮನ್ನಣೆ ಇದೆ ಎಂದರೆ ಮಹಾರಾಷ್ಟ್ರದ ರಾಯ್‌ಗಢ್‌ದ ರೈತರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಯಾವುದೇ ಕಾನೂನಿನಡಿ ಮನ್ನಣೆ ಇಲ್ಲ! ರಾಯ್‌ಗಢದ ಶೇ. 80-85 ರೈತರು ತಮ್ಮ ಭೂಮಿಯನ್ನ ರಿಲೈಯನ್ಸ್ ವಶಪಡಿಸಿಕೊಳ್ಳುವುದರ ವಿರುದ್ಧ ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವುದರ ಬಗ್ಗೆ ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಮಹಾರಾಷ್ಟ್ರದ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಆದರೆ ಕಾನೂನಿನಡಿ ಆ ವರದಿಯನ್ನು ಮುಖ್ಯಮಂತ್ರಿಗಳು ಪರಿಗಣಿಸುವುದರ ಅವಶ್ಯಕತೆ ಇಲ್ಲ! ಪ್ರಜಾಪ್ರಭುತ್ವ ಭಾರತದ ಕಾನೂನಿನ ಪ್ರಕಾರ ಜನಾಭಿಪ್ರಾಯವೇನೇ ಆಗಿರಲಿ, ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇರುವುದು ಮುಖ್ಯಮಂತ್ರಿಗೆ ಮಾತ್ರ!

ಹಮಾರ್ ಭಾರತ್ ಮಹಾನ್!

ನಗಲ ಮುಳ್ಳು

ವಾಸನಾಶೂರರು

ಕೆಲವು ಕುಡುಕರಿದ್ದಾರೆ. ಮದ್ಯದ ವಾಸನೆ ನೋಡಿಯೇ 'ಇದು 'ಇಂತಹ ಬ್ರಾಂಡು' ಅಂತ ಕರಾರುವಾಕ್ಕಾಗಿ ಹೇಳ್ತಾರೆ. ತಂಕರುಬದರಿಯವರೂ ಈ ಗುಂಪಿಗೆ ಸೇರಿದವರಾ ಅನ್ನೋ ಅನುಮಾನ ನನಗೆ. ಅಂದರೆ ಸಕತ್ತಾಗಿ ಕುಡೀತಾರೆ ಅಂತ ಅಲ್ಲ, ವಾಸನೆ ನೋಡಿಯೇ ನಡೆದಿರುವ ಘಟನೆ ತೀರ್ಪು ನೀಡುವ ಶಕ್ತಿ ಅವರಿಗೆ ಇದೆಯ ಅಂತ. ಈ ಅನುಮಾನ ಯಾಕೆ ಬಂತು ಅಂದ್ರೆ..... ಬೆಂಗಳೂರಿನಲ್ಲಿ ಚರ್ಚುಗಳ ಮೇಲೆ ನಡೆದ ದಾಳಿ ಪರಿಶೀಲಿಸೋಕೆ ಅಂತ ಹೋಗಿದ್ದರಲ್ಲಾ, ಅದನ್ನು ನೋಡುತ್ತಿದ್ದ ಹಾಗೇ ಇದು ದಾಳಿ ಅಲ್ಲ ಕಳ್ಳತನದ ಯತ್ನ ಅಂತ ಸಾರಿದರಲ್ಲ. ಅಲ್ಲ ದಾಳಿ ಮಾಡಿದೋನು ಅನಾಯಾಸವಾಗಿ ಹಣ ಸಿಗುವಾಗ ಯಾಕೆ ಬಿಟ್ಟು ಬರ್‍ತಾನೆ ಅಂತ ನಮಗೆಲ್ಲ ಅನ್ನಿಸಿದರೂ ಅವರಿಗೆ ಹೀಗೆ ಅನ್ನಿಸುತ್ತಲೇ ಇಲ್ಲವಲ್ಲ ಅದಕ್ಕೇ. ವಾಸನೆಯಿಂದಲೇ ತಿಳೀತಾ ಅನ್ನೊ ಅನುಮಾನ ಅಷ್ಟೆ. ಘಸ್ನಿ ಮಹಮದ್ ಅಂಬೋನು ಹದಿನೇಳು ಸಾರಿ ಸೋಮನಾಥ ದೇವಾಲಯಕ್ಕೆ ದಾಳಿ ಮಾಡಿದನಲ್ಲ, ಭಂಡಾರನೇ ಲೂಟಿ ಹೊಡೆದನಲ್ಲ. ಅದನ್ಯಾಕೆ ದೇವಾಲಯದ ಮೇಲೆ ದಾಳಿ ಅಂತಾರೆ, ಹಣಕ್ಕಾಗಿ ಹಂಗೆ ಮಾಡಿದ ಅನ್ನುವುದೇ ಇಲ್ಲವಲ್ಲ ಸಂಘ ಪರಿವಾರದವರು ಅನ್ನುವ ಅನುಮಾನ ಅಷ್ಟೇಯ.


ಗೆದ್ದರೆ ಮಂತ್ರಿ!

ಶಾಸಕ ಮರಣ ಹೊಂದಿದಾಗ ರಾಜಕೀಯ ಪಕ್ಷಗಳಲ್ಲಿ ವಿಚಿತ್ರ ಸಂವೇದನೆಗಳು ಪುಟಿಯುತ್ತವೆ. ಅವರ ಪತ್ನಿಗೆ ಟಿಕೇಟು ನೀಡಿ ಅನುಕಂಪದ ಅಲೆಯಲ್ಲಿ ಭರ್ಜರಿ ಜಯಗಳಿಸುವುದು ಲಾಗಾಯ್ತಿನಿಂದಲೂ ಬಂದಿರುವ ಸಂಪ್ರದಾಯ. ಇಷ್ಟು ಬೇಗ ಅದೃಷ್ಟ ಪರೀಕ್ಷೆಗೆ ಮತ್ತೊಮ್ಮೆ ಅವಕಾಶ ದೊರೆಯಿತಲ್ಲ ಅನ್ನುವುದು ವಿರೋಧಿಗಳ ಸಂಭ್ರಮಕ್ಕೆ ಕಾರಣವಾಗುವುದಾದರೂ ಇದನ್ನು ಮುಖದಲ್ಲಿ ಮೂಡಿಸಲು ಒಂದು ರೀತಿಯ ಅಳುಕು. ಭಾರೀ ನೋವು ಅನುಭವಿಸಿದವರಂತೆ ಮೃತರ ಮನೆಗೆ ತೆರಳಿ ಸಾಂತ್ವನದ ಶಾಸ್ತ್ರ ಮುಗಿಸಿ ಬರ್‍ತಾರೆ. ತನ್ನ ಜಾತಿಯವರು ಹೆಚ್ಚಿನವರು ಇದ್ದರೆ ತನ್ನ ಅವ್ಯವಹಾರಗಳಿಗೆಲ್ಲ ಬೆಂಬಲ ಸಿಗುತ್ತೆ ಅನ್ನುವುದು ಸಾರಿಗೆ ಸಚಿವರ ಚಿಂತನೆ ಇರಬೇಕು. ಶಾಸಕ ಸಿದ್ಧರಾಜು ಮರಣ ಹೊಂದಿದಾಗ ಅವರ ಮನೆಗೆ ಹೋಗಿ ಸಾಂತ್ವನ ಎಂಬ ಶ್ರಾದ್ಧ ಮುಗಿಸಿ 'ಮದ್ದೂರಿನಿಂದ ಗೆದ್ದವರನ್ನ ಮಂತ್ರಿ ಮಾಡ್ತೀವಿ' ಅಂತ ಸಾರಿದರು. ಈ ಪದವಿ ನೀಡೋದು ಸಾರಿಗೆ ಮಂತ್ರೀನೋ ಮುಖ್ಯಮಂತ್ರೀನೋ ಅನ್ನೊ ಪ್ರಶ್ನೆಯನ್ನು ಯಾರೂ ಕೇಳಲಿಲ್ಲ ಅನ್ನಿ. ಅಲ್ಲ ಗೆದ್ದವರನ್ನ ಮಂತ್ರಿ ಮಾಡ್ತೀವಿ ಅಂತ ಹುಚ್ಚುಚ್ಚಾಗಿ ಸಾರಿದಾರಲ್ಲ ಈ ಸಾರಿಗೆ ಮಂತ್ರಿಗಳು ಇದನ್ನು ಕೇಳಿದನಂತರವೂ ಭಾರತೀಯ ಜನತಾ ಪಕ್ಷದವರು ತಮ್ಮ ಅಭ್ಯರ್ಥಿ ಗೆಲ್ಲೋಕೆ ಬಿಡ್ತಾರಾ, ಅವನು ಗೆದ್ದು ಮಂತ್ರಿಯಾಗೇ ಬಿಟ್ಟರೇನು ಮಾಡೋದು ಅನ್ನೋ ಸಂಕಟದಲ್ಲಿ ಕಾಲೆಳೆಯುವ ಸಂಭವವೇ ಹೆಚ್ಚು ಕಾಣುತ್ತಿದೆಯಲ್ಲಾ... ಇವರೇನು ಭಾಜಪ ಪರವೋ, ವಿರೋಧವೋ ಅಂತಾ.....

ಗಂಡಸಿಗೂ ರೋಗ!

ಮದುವೆ ಮನೆಗಳಲ್ಲಿ ಗಮನಿಸಿರಬೇಕು. ಪುರುಷರು ತಾವು ಹಾಕಿಕೊಂಡಿದ್ದ ಬಟ್ಟೆಯಲ್ಲೇ ಇರುತ್ತಾರೆ. ಮಹಿಳೆಯರು ಹಾಗಲ್ಲ, ಮೂರುನಾಲ್ಕು ಸಲವಾದರೂ ಬಟ್ಟೆ ಬದಲಾಯಿಸಿ ಮೆರೆದರೇ ಒಂದು ರೀತಿಯ ತೃಪ್ತಿ. ಈ ರೋಗ ಮದುವೆಮನೆಗೆ ಮಾತ್ರ ಸೀಮಿತ ಅಂದುಕೊಂಡಿದ್ದೆ, ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದವರೊಬ್ಬರು ಒಂದೊಂದು ಗೋಷ್ಠಿಗೂ ವಿವಿಧ ರೀತಿಯ ಆಕರ್ಷಕ ಉಡುಪು ಧರಿಸಿ ಪ್ರೇಕ್ಷಕರನ್ನು ದಂಗು ಬಡಿಸಿದ ಸಂಗತಿಯನ್ನು ಸಮ್ಮೇಳನದಲ್ಲಿ ಭಾಗವಹಿಸಿದವರೊಬ್ಬರು ಗಮನಕ್ಕೆ ತಂದರು. ಸಮಾರಂಭ ಯಾವುದೇ ಇರಲಿ. ಈ ಉಡುಪು ಬದಲಿಸುವ ರೋಗ ಮಹಿಳೆಯರದ್ದು ಎಂದು ನನ್ನ ಅಭಿಪ್ರಾಯ ಬದಲಾಯಿಸಿಕೊಂಡೆ. ಈ ರೋಗ ಪುರುಷರನ್ನು ಕಾಡುತ್ತಿದೆ ಎಂಬ ಸಂಗತಿ ಇತ್ತೀಚೆಗೆ ಬಯಲಾಗಿದೆ. ನಮ್ಮ ಕೇಂದ್ರ ಗೃಹಮಂತ್ರಿಗೆ ಪ್ರತಿದಿನ ಮೂರುನಾಲ್ಕು ಸಾರಿ ಉಡುಪು ಬದಲಾಯಿಸದಿದ್ದರೆ ಸಮಾಧಾನವೇ ಇರಲ್ವಂತೆ. ದೆಹಲಿಯಲ್ಲಿ ಬಾಂಬ್ ಸ್ಫೋಟ ಆಯಿತಲ್ಲ ಆಗ ಈ ಮಹಾಶಯರು ಒಂದೇ ದಿನದಲ್ಲಿ ಮೂರು ಟಿವಿ ಸಂದರ್ಶನಗಳಲ್ಲಿ ಹಾಜರಿದ್ದರಂತೆ. ಒಂದೊಂದು ಸಂದರ್ಶನದಲ್ಲೂ ಬೇರೆಬೇರೆ ಗರಿಗರಿಸೂಟುಗಳಲ್ಲಿ.

■ ಎಚ್.ಎಲ್. ಕೇಶವಮೂರ್ತಿ



ಒಂದು ಕೊಲೆ, ಒಂದು ಕ್ಷಮೆ


ಇಟಲಿಯ ಮೋಟಾರ್ ವಾಹನಗಳ ಬಿಡಿ ಭಾಗಗಳನ್ನು ಭಾರತದಲ್ಲಿ ತಯಾರಿಸುತ್ತಿದ್ದ ಗ್ರಾಜಿಯಾನೋ ಕಂಪನಿಯ ಮಾಲೀಕ ಲಲಿತ್ ಕಿಶೋರ್ ಚೌಧರಿಯನ್ನು ಇನ್ನೂರು ಜನರ ಗುಂಪೊಂದು ದೆಹಲಿ ಹತ್ತಿರದ ನೊಯಿಡಾದಲ್ಲಿ ಕಳೆದ ವಾರ ಕೊಂದು ಹಾಕಿತ್ತು. ಎರಡು ತಿಂಗಳ ಹಿಂದೆ ಚೌಧುರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹೆಚ್ಚು ವೇತನ ಕೇಳಿದ್ದಕ್ಕೆ ಆತ 300 ಕಾರ್ಮಿಕರನ್ನು ಕೆಲಸದಿಂದ ಹೊರ ಎಸೆದಿದ್ದ.

ತಮ್ಮನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂಬ ಬೇಡಿಕೆಯೊಂದಿಗೆ ಅವರೆಲ್ಲ ಚೌಧುರಿಯೊಂದಿಗೆ ಮಾತುಕತೆ ನಡೆಸಲು ಬಂದಾಗ ಆತ ಅವರ ಬೇಡಿಕೆಗಳನ್ನು ನಿರ್ಲಕ್ಷಿಸಿದ. ಇದರಿಂದ ಸಿಟ್ಟಿದ್ದ ಗುಂಪು ಆತನ ಮೇಲೆರಗಿ ಅವನನ್ನು ಕೊಂದೇ ಹಾಕಿತು.

ಈ ಪ್ರಕರಣ ಕುರಿತಂತೆ ಕೇಂದ್ರ ಕಾರ್ಮಿಕ ಮಂತ್ರಿ ಆಸ್ಕರ್ ಫರ್ನಾಂಡಿಸ್ "ಕಂಪನಿಗಳು ಕಾರ್ಮಿಕರ ಬಗ್ಗೆ ಮಾನವೀಯತೆಯನ್ನು ಪ್ರದರ್ಶಿಸಬೇಕು. ಅವರನ್ನು ಏಕಾಏಕಿ ಕೆಲಸದಿಂದ ತೆಗೆದರೆ ಇಂತಹ ಅತೃಪ್ತಿಗೆ ಕಾರಣವಾಗುತ್ತದೆ" ಎಂದು ಹೇಳಿದರು. ಸಹಜವಾಗಿಯೇ ಬಂಡವಾಳಶಾಹಿ ಕಂಪನಿಗಳ ಮಾಲೀಕರಿಗೆ ಮತ್ತು ಉದ್ಯಮಪತಿಗಳಿಗೆ ಇದು ಅಪಥ್ಯವಾಗಿತ್ತು. ಅವರೆಲ್ಲ ಆಸ್ಕರ್ ಫರ್ನಾಂಡಿಸ್ ವಿರುದ್ಧ ಮುಗಿಬಿದ್ದರು; ತಮ್ಮದೇನೂ ತಪ್ಪಿಲ್ಲ ಕಾರ್ಮಿಕರದ್ದೇ ತಪ್ಪು ಎಂದು ವಾದಿಸಿದರು. ಅವರ ವಿರುದ್ಧ ನಿಲ್ಲಲಾಗದೆ ಆಸ್ಕರ್ ಫರ್ನಾಂಡಿಸ್ ಕೊನೆಗೆ ಕಂಪನಿ ಮಾಲೀಕರ ಕ್ಷಮೆ ಕೇಳಬೇಕಾಯಿತು.

ಲಲಿತ್ ಕಿಶೋರ್ ಚೌಧುರಿಯ ಸಾವು ಖಂಡನಾರ್ಹ ನಿಜ. ಆದರೆ ಆತನಂತಹ ಬಂಡವಾಳಶಾಹಿಗಳ ದೌರ್ಜನ್ಯವನ್ನು ಖಂಡಿಸದಿದ್ದರೆ ಹೇಗೆ?

ಅಥಣಿ: ಪ್ರಭುಚೆನ್ನಬಸವ ಸ್ವಾಮಿಯ ರಾಸಲೀಲೆ



ಬೆಳಗಾವಿ ಜಿಲ್ಲೆಯ ಗಡಿಭಾಗದಲ್ಲಿರುವ ಅಥಣಿ ಒಂದು ಕಾಲಕ್ಕೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳ ತಾಣವಾಗಿತ್ತು. ಆದರೆ, ಈಗ ಮೊಟಗಿ ಮಠದ ಪ್ರಭುಚನ್ನಬಸವ ಸ್ವಾಮಿಯ ದೆಸೆಯಿಂದ ಅಥಣಿಗೆ ಅದೆಂಥ ದೌರ್ಭಾಗ್ಯ ಬಂದಿದೆಯೆಂದರೆ ಮಾನವಂತರು ಮಠಕ್ಕೆ ಕಾಲಿಡುವುದಕ್ಕೆ ಹಿಂದು ಮುಂದು ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೊಟಗಿ ಮಠದಲ್ಲಿ ನೀವೇನಾದರೂ ಕಾಲಿಟ್ಟರೆ ಉಪಯೋಗಿಸಿದ ನಿರೋಧ್‌ಗಳು, ಸಿಗರೇಟ್ ಬಡ್ಸ್, ಒಂದಿಬ್ಬರು ಅಲನೆಯರು, ಬ್ಲೂಫಿಲ್ಮ್ ಸೀಡಿಗಳು ಕಂಡರೆ ಆಶ್ಚರ್ಯಪಡಬೇಡಿ. ಮಠಕ್ಕೆ ಸ್ವಾಮಿಯಾಗಿರುವ ಪ್ರಭುಚನ್ನಬಸವ ಅವರ ಭೋಗದಾಸೆಗೆ ಮಠಕ್ಕೆ ಈ ಹೊತ್ತು ಈ ಗತಿ ಬಂದಿದೆ.

ನೋಡುವುದಕ್ಕೆ ಥೇಟ್ ಉಳವಿಯ ಚೆನ್ನಬಸವನಂತೆ ಕಾಣುವ, ಪ್ರಖಾಂಡ ಪಂಡಿತನಂತೆ ಪೋಜು ಕೊಡುವ, ಬಾಯ್ತೆರೆದರೆ ನಿರರ್ಗಳವಾಗಿ ಭಾಷಣ ಬಿಗಿಯುವ, ಅಷ್ಟೇ ಏಕೆ ಚೂರುಪಾರು ಸಾಹಿತಿಯೂ ಆಗಿರುವ ಪ್ರಭುಚೆನ್ನಬಸವ ಸ್ವಾಮಿಯ ರಾಸಲೀಲೆಯ ಪುರಾಣ ಕೇವಲ ಅಥಣಿಯಲ್ಲಿ ಮಾತ್ರವಲ್ಲ; ಇಡೀ ಉತ್ತರ ಕರ್ನಾಟಕದ ಜನರ ಬಾಯಲ್ಲಿ ಎಲೆಯಡಿಕೆಯಂತಾಗಿ ಹೋಗಿರುವುದು ಸುಳ್ಳೇನಲ್ಲ.

ಪ್ರಭುಚೆನ್ನಬಸವ ಸ್ವಾಮಿ ತಿಂಗಳೊಂದರಲ್ಲಿ ಅರ್ಧ ಸಮಯವನ್ನು ಮಠದಲ್ಲಿ ಕಳೆದರೆ ಇನ್ನರ್ಧ ಸಮಯ ಭೂಗತನಾಗಿರುತ್ತಾನೆ. ಈ ದಿನಗಳಲ್ಲಿ ಆತ ಎಲ್ಲಿಗೆ ಹೋಗುತ್ತಾನೆ, ಏನು ಮಾಡುತ್ತಾನೆ, ಯಾರ್‍ಯಾರ ಜೊತೆಯಲ್ಲಿರುತ್ತಾನೆ ಎಂಬುದು ಖುದ್ದು ಮಠದವರಿಗೇ ಗೊತ್ತಿರುವುದಿಲ್ಲವಾದರೂ ಸಾಮಾನ್ಯ ಜನಕ್ಕೆ ಗೊತ್ತಿದೆ. ಬರ್ಮೋಡಾ ಚಡ್ಡಿ ತೊಟ್ಟುಕೊಂಡು, ಸುರಪಾನ ಮಾಡಿಕೊಂಡು, ಕೈಯಲ್ಲಿ ಸಿಗರೇಟ್ ಹಿಡಿದುಕೊಂಡು, ಜೊತೆಗಿಬ್ಬರು ಹುಡುಗಿಯರನ್ನು ಕಟ್ಟಿಕೊಂಡು ಥೇಟ್ ಪಡ್ಡೆಹುಡುಗರಂತೆ ಗೋವಾದ ಬೀಚುಗಳಲ್ಲಿ ಈತ ಸುತ್ತಾಡುತ್ತಿರುವುದನ್ನು ಅದೆಷ್ಟೋ ಜನ ಕಣ್ಣಾರೆ ನೋಡಿದ್ದಾರೆ.

ಈ ಹಿಂದೆ ಕೆಲವು ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸಿ ಆಮೇಲೆ ಅವರೆಲ್ಲ ಇವನ ವಿರುದ್ಧ ತಿರುಗಿ ಬಿದ್ದು ರಾದ್ಧಾಂತವಾಗಿತ್ತು. ಮೊನ್ನೆ ತಾನೆ ಹುಬ್ಬಳ್ಳಿಯ ಪ್ರತಿಷ್ಠಿತ ಮನೆತನದ ಹುಡುಗಿಯೊಬ್ಬರಿಗೆ ಫೋನಾಯಿಸಿ ಮಾತನಾಡಬಾರದ್ದೆಲ್ಲಾ ಮಾತಾಡಿದ್ದ, ಕೊನೆಗೆ ಆ ಹುಡುಗಿ ಮನೆಯವರಿಗೆ ಹೇಳಿ ಮಠಕ್ಕೆ ಬಂದು ಸ್ವಾಮಿಯನ್ನು ತದುಕಿ ಬೆಂಡೆತ್ತಿದ್ದರು. ಇದು ಮತ್ತೊಂದು ರಾದ್ಧಾಂತವಾಗಿ ನೀಲಗುಂದ ಶ್ರೀಗಳು ಮಧ್ಯಪ್ರವೇಶಿಸಿ ಜಗಳ ಬಗೆಹರಿಸಿದ್ದರು. ಈ ವಿಚಾರ ಹೊರಬರುತ್ತಿದ್ದಂತೆ ಹುಬ್ಬಳ್ಳಿ ಟೈಮ್ಸ್ ಎಂಬ ಲೋಕಲ್ ಪತ್ರಿಕೆಯ ಸಂಪಾದಕ ಮುಕೇಶ್ ಗವಿ "50 ಸಾವಿರ ಕೊಡು, ಇಲ್ಲದಿದ್ದರೆ ಈ ರಾಸಲೀಲೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ನಿನ್ನ ಮಾನಮರ್ಯಾದೆ ಹರಾಜು ಹಾಕುತ್ತೇವೆ" ಎಂದು ಚೆನ್ನಬಸವ ಸ್ವಾಮಿಗೆ ಬೆದರಿಕೆಯೊಡ್ಡಿದ್ದ. ಇಟ್ನಾಳ ಮಠದ ಹಾಗೂ ಹಿರೇಮಠ ಎಂಬಿಬ್ಬರು ಲೋಕಲ್ ಪತ್ರಿಕೆ ವರದಿಗಾರರು ಮಧ್ಯಪ್ರವೇಶಿಸಿ ಈ ವ್ಯವಹಾರ ಕುದುರಿಸಿದ್ದೂ ಆಯಿತು.

ಮೊಟಗಿ ಮಠದ ಪ್ರಭುಚೆನ್ನಬಸವ ಸ್ವಾಮಿಯ ರಾಸಲೀಲೆಗಳನ್ನು ಕೆದಕುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾದೀತು. ಅಥಣಿಯ ಪ್ರತಿಷ್ಠಿತ ಬ್ಯಾಂಕೊಂದರಲ್ಲಿ ಪಿಗ್ಮಿ ಕಲೆಕ್ಟರ್ ಆಗಿರುವ ಯುವತಿಯೊಬ್ಬಳು ಈಗ ಪ್ರಭುಚೆನ್ನಬಸವ ಸ್ವಾಮಿಯ ಶಯನಗೃಹದ ಕಾಯಂ ನಿವಾಸಿಯಾಗಿದ್ದು ಸರ್ವರೀತಿಯಿಂದಲೂ ಸ್ವಾಮಿಯ ಸೇವೆಯಲ್ಲಿ ನಿರತಳಾಗಿದ್ದಾಳೆ. ತನ್ನ ಕಚ್ಚೆಹರುಕತನವನ್ನು ವಿರೋಧಿಸಿದ ಮಠದ ಸಿಬ್ಬಂದಿಯನ್ನೆಲ್ಲಾ ಈತ ಒಬ್ಬರಾದಮೇಲೊಬ್ಬರಂತೆ ಹೊರಗಟ್ಟುತ್ತಾ ಬಂದಿದ್ದಾನೆ. ಈಗ ಉಳಿದುಕೊಂಡಿರುವುದು ಅವನ ಅಡ್ಡಾದಿ ಕೆಲಸಗಳನ್ನು ಬೆಂಬಲಿಸುವ ಒಂದಿಷ್ಟು ಮಂದಿ ಮಾತ್ರ.

ಧಾರವಾಡದ ಪ್ರಸಿದ್ಧ ಸಂಗೀತಗಾರನ ಮಗಳೊಂದಿಗೆ ಈತ ಅನೈತಿಕ ಸಂಬಂಧವಿಟ್ಟುಕೊಂಡಿರುವುದು ಇಡೀ ಧಾರವಾಡಕ್ಕೆ ಗೊತ್ತಿರುವ ವಿಚಾರ. ಅಲ್ಲದೇ ಶಿವಮೊಗ್ಗ, ಗೋಕಾಕ, ಗದಗ, ಮೈಸೂರು, ಶಿರಹಟ್ಟಿ ಅಷ್ಟೇ ಏಕೆ ಮಹಾರಾಷ್ಟ್ರದಲ್ಲೂ ಈತನಿಗೆ ಕೀಪ್‌ಗಳಿರುವುದು ಜಗತ್ತಿಗೇ ಗೊತ್ತಿರುವ ರಹಸ್ಯ. ಆಗಾಗ ಈತ ಸುತ್ತೂರು ಮಠಕ್ಕೆ ಭೇಟಿ ಕೊಡುವ ಹವ್ಯಾಸವಿಟ್ಟುಕೊಂಡಿದ್ದು ಮಠಕ್ಕೆ ಹೋಗುವ ಶಾಸ್ತ್ರ ಮುಗಿಸಿದ ಮೇಲೆ ಒಂದಿಬ್ಬರು ಹುಡುಗಿಯರನ್ನು ಕಟ್ಟಿಕೊಂಡು ಮೈಸೂರಿನ ಬೀದಿಗಳಲ್ಲಿ ಸಿಗರೇಟ್ ಸೇದುತ್ತಾ ಥಿಯೇಟರ್‌ಗಳಲ್ಲಿ ಸಿನಿಮಾ ನೋಡುತ್ತಾ ಕಾಲ ಕಳೆಯುತ್ತಾನೆ. ಮಠದಲ್ಲಿ ಕುಳಿತು, ಕರ್ನಾಟಕ ಮಹಾರಾಷ್ಟ್ರ ಸುತ್ತಾಡಿ ಬೇಜಾರಾದರೆ ಆಗಾಗ ತನ್ನ ಸಖಿಯರನ್ನು ತನ್ನ ಜೊತೆ ಕರೆದುಕೊಂಡು ವಿದೇಶ ಪ್ರವಾಸಕ್ಕೂ ಹೋಗಿಬರುತ್ತಾನೆ.

ಈತ ರಾಸಲೀಲೆಗಳಲ್ಲಿ ಮಾತ್ರವಲ್ಲ ಭೂಗಳ್ಳತನದಲ್ಲೂ ಸಾಕಷ್ಟು ಹೆಸರು ಮಾಡಿದ್ದಾನೆ. ಮಠದ ಸುತ್ತ, ಮಠದ ಆಸ್ತಿಗಳ ಸುತ್ತಮುತ್ತ ಇರುವ ಉದ್ಯಾನ ಮತ್ತಿತರ ಜಾಗಗಳನ್ನು ಆಕ್ರಮಿಸಿಕೊಂಡು ಬೇಲಿಹಾಕಿಕೊಂಡಿರುವುದನ್ನು ನೋಡಿದರೆ ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶನ ದಾರಿಯಲ್ಲಿ ನಡೆಯುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಈಗ ಮೊಟಗಿ ಮಠ ಎನ್ನುವುದು ಸಾರ್ವಜನಿಕರ ಅಥವ ಯಾವುದೇ ಒಂದು ಸಮುದಾಯದ ಮಠ ಎನ್ನುವುದಕ್ಕಿಂತ ಅದು ಪ್ರಭುಚೆನ್ನಬಸವನ ವೈಯಕ್ತಿಕ ಕುಟುಂಬದ ಆಸ್ತಿಯಂತಾಗಿ ಹೋಗಿದೆ.

ಮಠಕ್ಕೆ ನಡೆದುಕೊಳ್ಳುವ ಭಕ್ತರ ಸಹನೆಗೂ ಒಂದು ಮಿತಿಯಿದೆ. ಸ್ವಾಮಿಗಳು ಈಹೊತ್ತು ಸರಿಹೋಗುತ್ತಾರೆ, ನಾಳೆ ಸರಿಹೋಗುತ್ತಾರೆ ಎಂದು ಇಷ್ಟು ದಿನ ಸಹನೆಯಿಂದ ಕಾಯ್ದಿದ್ದಾಯಿತು. ಆದರೂ ತನ್ನ ಕಚ್ಚೆಪುರಾಣಗಳನ್ನು ಈತ ಮುಂದುವರೆಸಿದ್ದಾನೆಂದರೆ ಇವನ ಕಾಲಿಗೆ ಅವರು ಅದ್ಹೇಗೆ ಬೀಳುತ್ತಾರೆ? ಅವರ ತಾಳ್ಮೆ ಕಟ್ಟೆಯೊಡೆದಂತೆ ಕಾಣುತ್ತಿದೆ. ಮೊಟಗಿ ಮಠವನ್ನು ಪ್ರಭುಚೆನ್ನಬಸವ ಸ್ವಾಮಿಯಿಂದ ಮುಕ್ತಗೊಳಿಸುವುದಕ್ಕಾಗಿ ಭಕ್ತಸಮೂಹ ಸಜ್ಜಾಗಿರುವುದು ಇತ್ತೀಚಿನ ಬೆಳವಣಿಗೆ.

■ ಮಧುಬಾಲ



ಮೈತ್ರಿ ಸಾಧ್ಯವೆ?

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಗೆ ಕೊನೆಗೂ ಜೀವ ಬಂದಿದೆ.

ಆರ್.ವಿ. ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷನಾಗಿಯೂ ಡಿ.ಕೆ. ಶಿವಕುಮಾರ್ ಕಾರ್ಯಾಧ್ಯಕ್ಷರಾಗಿಯೂ ಅವತರಿಸಿದ್ದಾರೆ. ಈ ಸುದ್ದಿ ಕೇಳಿಬಂದ ತಕ್ಷಣ ಸ್ವತಃ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರೇ 'ಡಿಕೆ ಬೆಸ್ಟು, ದೇಶಪಾಂಡೆ ವೇಸ್ಟು' ಎಂದು ಕಾಮೆಂಟ್ ಶುರುಮಾಡಿಬಿಟ್ಟರು. ಅದೇನೇ ಇರಲಿ ಸೇನಾಧಿಪತಿಯೇ ಇರದಿದ್ದ ಯುದ್ಧಭೂಮಿಯಲ್ಲಿ ಕಾಂಗ್ರೆಸ್‌ಗೀಗ ಒಟ್ಟೊಟ್ಟಿಗೆ ಇಬ್ಬರು ದಳಪತಿಗಳು ಸಿಕ್ಕಿದ್ದಾರೆ. ಯಡಿಯೂರಪ್ಪನವರ ಬಿಜೆಪಿ ಸರ್ಕಾರ ಇದರಿಂದೇನೂ ಶೇಕ್ ಆದಂತೆ ಕಾಣುತ್ತಿಲ್ಲ. ಈ ಮುದ್ದಿನ ಕುಳ ದೇಶಪಾಂಡೆ ಬದಲಾಗಿ ಪ್ರಮುಖ ಲಿಂಗಾಯತ ನಾಯಕರೊಬ್ಬರನ್ನು ಆ ಸ್ಥಾನಕ್ಕೆ ತಂದಿದಿದ್ದರೆ ಕಾಂಗ್ರೆಸ್‌ಗೆ ಅನುಕೂಲವಾಗುತ್ತಿತ್ತೆಂಬ ಮಾತು ಕೇಳಿಬರುತ್ತಿದೆಯಾದರೂ ಅಸಲಿಗೆ ಅಂತ ಶಕ್ತಿಶಾಲಿ ಲಿಂಗಾಯಿತ ಲೀಡರ್‌ಗಳೇ ಕಾಂಗ್ರೆಸ್‌ನಲ್ಲಿರಲಿಲ್ಲ. ಆದರೂ ಹಾಲಿ ಕಾಂಗ್ರೆಸ್‌ನಲ್ಲಿರುವ ಕೆಲ ಜಾತಿ ನಾಯಕರ ಸಾಮರ್ಥ್ಯದೊಂದಿಗೆ ಹೋಲಿಸಿ ನೋಡಿದರೆ ದೇಶಪಾಂಡೆ ಯಾತಕ್ಕೂ ಬೇಡ. ಒಬ್ಬ ಬಲಿಷ್ಠ ಡಿಕೆ ಈ ಕಾಂಗ್ರೆಸ್ ರಥವನ್ನು ಅದೆಷ್ಟು ದೂರ ಎಳೆದಾರೆಂಬುದನ್ನು ಕೆಲಕಾಲ ಕಾದೇ ನೋಡಬೇಕಷ್ಟೇ!

ಕುಮಾರಸ್ವಾಮಿ ಗ್ರೀನ್ ಸಿಗ್ನಲ್

ಈಗಿನ ಹೊಸ ಪದಾಧಿಕಾರಿಗಳ ನೇಮಕಾತಿಯಿಂದ ಕಾಂಗ್ರೆಸ್‌ನೊಳಗೆ ಏನೇನಾಗಬಹುದು ಎಂಬುದಕ್ಕಿಂತ ಇನ್ನೊಂದು ಪ್ರತಿಪಕ್ಷ ಜನತಾದಳದೊಂದಿಗೆ ಹೊಂದಿಕೊಂಡು ಹೋಗುವ ಅವಕಾಶ ಎಷ್ಟಿದೆ ಎಂಬುದು ಈಗ ಎಲ್ಲರ ಪ್ರಶ್ನೆಯಾಗಿದೆ.

ಇತ್ತ ಡಿಕೆ-ದೇಶಪಾಂಡೆ ಕೆಪಿಸಿಸಿ ಮುಖಂಡರಾಗಿ ಬಂದು ಕೂರುತ್ತಿದ್ದಂತೆಯೇ ಜೆಡಿಎಸ್‌ನ ದೇವೇಗೌಡರು ಹಾಗೂ ಕುಮಾರಸ್ವಾಮಿ ಕೋಮುವಾದಿಗಳನ್ನು ಸೋಲಿಸಲು ನಾವು ಕಾಂಗ್ರೆಸ್‌ನೊಂದಿಗೂ ಮೈತ್ರಿಗೆ ಸಿದ್ಧ ಎಂಬುದಾಗಿ ಹೇಳಿಕೊಂಡಿದ್ದಾರೆ. "ಇದಕ್ಕೆ ಏನು ಹೇಳ್ತೀರಿ?" ಅಂತ 'ಲಂಕೇಶ್' ಡಿ.ಕೆ. ಶಿವಕುಮಾರ್‌ರನ್ನು ಕೇಳಿದಾಗ "ನಾನು ಅವರ ಬಗ್ಗೆ ಮಾತಾಡಲ್ಲ, **I am a small man,** ಈಗ ನನ್ನ ಮೊದಲ ಆದ್ಯತೆ ನಮ್ಮ ಮನೆ (ಪಾರ್ಟಿ) ಬಲಪಡಿಸುವುದು ಮಾತ್ರ" ಎಂದರು.

ಇದು ಡಿಕೆಯ ವೈಯಕ್ತಿಕ ಬಿಗುಮಾನವಾ ಅಥವಾ ಪಾರ್ಟಿ ಹೈಕಮಾಂಡಿನ ನಿಲುವು ಅದೇ ಇದೆಯಾ ಕಾದು ನೋಡಬೇಕಷ್ಟೇ.

ಅದೇನೆ ಇರಲಿ, ಎಸ್.ಎಂ. ಕೃಷ್ಣ ಕಾಂಗ್ರೆಸ್ ಅನ್ನು ನಾಶ ಮಾಡಿ ತೊಲಗಿದ ಮೇಲೆ ಎರಡು ಬಾರಿ ಶಾಸಕನಾಗಿ ಗೆದ್ದು ಬಂದರೂ ಡಿಕೆಶಿ ಅಧಿಕಾರ ವಂಚಿತರಾಗೇ ಉಳಿದರು. ಧರಂಸಿಂಗ್ ಸರ್ಕಾರ ಒಂದು ಮೈತ್ರಿಕೂಟವೇ ಆಗಿದ್ದರೂ ದೇವೇಗೌಡರ ಹಠದಿಂದಾಗಿ ಡಿ.ಕೆ. ಮಂತ್ರಿಯಾಗಲು ಆಗಿರಲಿಲ್ಲ, ಹಾಗೆ ನೋಡಿದರೆ ಡಿಕೆಗೆ ಕಾಂಗ್ರೆಸ್‌ನೊಳಗೆ ಅಸಂಖ್ಯ ವೈರಿಗಳಿದ್ದಾರೆ. ಮೈಸೂರಿನ ಎಚ್. ವಿಶ್ವನಾಥ್, ಗದಗಿನ ಎಚ್.ಕೆ. ಪಾಟೀಲ್‌ಗೆ ಡಿಕೆ ಕಂಡರಾಗುವುದಿಲ್ಲ, ಕನಕಪುರ ಸಂಸದ ಎಂ.ವಿ. ಚಂದ್ರಶೇಖರನ್ ತಾನು ಬದುಕಿದ್ದಷ್ಟೂ ಕಾಲ ಡಿಕೆಗೆ ಕಾಟ ಕೊಟ್ಟುಕೊಂಡೇ ಹೋಗಿದ್ದರು. ಆದರೆ ಡಿಕೆ ಅದನ್ನೆಲ್ಲ ಬದಿಗಿಟ್ಟು ಕಾಂಗ್ರೆಸ್ ಪಾರ್ಟಿ ಕೆಲಸ ಮಾಡಿಕೊಂಡೇ ಹೋಗಿದ್ದರು.

ಅನಿವಾರ್ಯ ಸಂದರ್ಭಗಳಲ್ಲಿ ನಾಯಕರಾದವರಿಗೆ ಎದುರಾಗುವ ಸಂದಿಗ್ಧತೆ ಇದು. ಇದು ವಾಸ್ತವ ಎಂದುಕೊಂಡರೆ ಡಿಕೆ-ಎಚ್‌ಡಿಕೆ ನಡುವಿನ ಅಸಹನೆಯೂ ಮುಂದೆ ಕರಗಿ ಹೋಗಬಹುದಾ?

ಡಿಕೆಗೆ ಬೇಕೊ ಬೇಡವೊ ಆದರೆ ಖರ್ಗೆ, ಧರಂಸಿಂಗ್ ಹಾಗೂ ಸ್ವತಃ ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆ ಸೈತ ದೇವೇಗೌಡರೊಂದಿಗೆ ಚೆನ್ನಾಗಿದ್ದಾರೆ. ಮುಂದೆ ಗೌಡರೇನಾದರೂ ರಾಷ್ಟ್ರಮಟ್ಟದಲ್ಲಿ ತೃತೀಯ ರಂಗ ಅಂತ ಓಡಾಡದೆ ಹೋದರೆ ಕರ್ನಾಟಕದ ಮಟ್ಟಿಗೆ ಕಾಂಗ್ರೆಸ್-ಜೆಡಿಎಸ್ ಮೈತ್ರಿಯ ಸಾಧ್ಯತೆಗಳು ಇದ್ದೇ ಇರುತ್ತವೆ.

ಕರ್ನಾಟಕ ಕಾಂಗ್ರೆಸ್ ಸದ್ಯಕ್ಕೆ ಒಡೆದ ಮನೆಯಂತೆ, ಹೋರಾಟದ ಸ್ಫೂರ್ತಿ ಕಳೆದುಕೊಂಡಿದ್ದರು ಸಮರ್ಥ ನಾಯಕತ್ವ ಸಿಕ್ಕಾಗೆಲ್ಲಾ ಅದು ಚೇತರಿಸಿಕೊಂಡಿದೆ. ಒಂದು ಕಡೆ ಬಿಜೆಪಿಗಳ ಅಟ್ಟಹಾಸ-ಮತ್ತೊಂದೆಡೆ ಬೆಳೆಯುತ್ತಿರುವ ಮಾಯಾವತಿಯ ಬಿಎಸ್‌ಪಿ, ಗೌಡರ ಜಾತ್ಯತೀತ ದಳದ ಕಡಿಮೆಯಾಗಿರದ ಶಕ್ತಿಯೆದಿರು ಕಾಂಗ್ರೆಸ್‌ಗೆ ಆಕ್ಸಿಜನ್ ನೀಡುವ ಕೆಲಸ ಕಡಿಮೆ ಸವಾಲಿನದ್ದಲ್ಲ, ದೇಶಪಾಂಡೆ ಈ ಸವಾಲನ್ನೆದುರಿಸಲಾರ ಎಂದು ಈಗಲೇ ಹೇಳಿಬಿಡಬಹುದು. ಆದರೆ ಡಿಕೆಗೆ ಆ ಸಾಮರ್ಥ್ಯ ಇದೆಯಾದರೂ ಪಾರ್ಟಿಯ ಎಲ್ಲಾ ನಾಯಕರ ವಿಶ್ವಾಸ ಗಳಿಸುವುದು ಅಷ್ಟು ಸುಲಭದ ಕೆಲಸವಲ್ಲ.

ಡಿ.ಕೆ. ಶಿವಕುಮಾರ್ ಪಕ್ಷದ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ಮೇಲೆ ಖರ್ಗೆ, ಧರಂಸಿಂಗ್, ಡಿ.ಬಿ. ಚಂದ್ರೇಗೌಡರಾದಿಯಾಗಿ ಬಹುತೇಕ ಹಿರಿಯ ನಾಯಕರು ಅಭಿನಂದಿಸಿದ್ದರು: ಆದರೆ ಆ ಬಗ್ಗೆ ಮಾತೇ ಆಡದೇ ಹೋದವರು ಸಿದ್ದರಾಮಯ್ಯ ಮಾತ್ರ!

ಈ ಸವಾಲನ್ನು ಡಿಕೆ ಹೇಗೆ ನಿಭಾಯಿಸುತ್ತಾರೋ ಕಾದು ನೋಡಬೇಕಿದೆ.

ಸದ್ಯಕ್ಕೆ ಮೂರು ದ್ರುವಗಳಂತಿರುವ ಡಿಕೆ-ಎಚ್‌ಡಿಕೆ ಹಾಗೂ ಸಿದ್ದರಾಮಯ್ಯನವರು ವಿಷಯಾಧಾರಿತ ಹೊಂದಾಣಿಕೆ ಮಾಡಿಕೊಳ್ಳಲು ಮುಂದಡಿ ಇಟ್ಟರೆ ಮಾತ್ರ ಅವತ್ತು ಬಿಜೆಪಿ ಪಾಳಯದಲ್ಲಿ ಬರುಕು ತರಲು ಸಾಧ್ಯ.

ಈ ಮೈತ್ರಿ ಸಾಧ್ಯವಾ?

ದಂಡಪಿಂಡ ದೇಶಪಾಂಡೆ

ಯುದ್ಧ ಶುರುವಾಗಿ ಎಷ್ಟೋ ದಿನಗಳಾದ ನಂತರ ಕಾಂಗ್ರೆಸ್ ಪಾರ್ಟಿ ಇದೀಗ ಆರ್.ವಿ. ದೇಶಪಾಂಡೆಯನ್ನು ತನ್ನ ಸೇನಾಧಿಪತಿಯಾಗಿ ಮುಂದಕ್ಕೆ ತಂದಿದೆ. ಆದರೆ ನೀವೇ ಗಮನಿಸಿ ನೋಡಿ, ಈಗಾಗಲೇ ಹೋರಾಟದ ಸ್ಫೂರ್ತಿ ಕಳೆದುಕೊಂಡಿರುವ ಕಾಂಗ್ರೆಸ್ ಕಾರ್ಯಕರ್ತರಿಗೆ 'ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷ'ರಂತೆ ಎಂಬ ಸುದ್ದಿ ಕಿವಿಗೆ ಬಿದ್ದ ಮೇಲೆ ಇದು ತಮ್ಮನ್ನು ಸೋಲಿಸುವ ಯುದ್ಧ ಎಂಬುದು ಮನವರಿಕೆಯಾಗಿ ಹೋಗಿದೆ. ಅವರಿಗೆ ಒಂದೇ ಒಂದು ಧೈರ್ಯದ ವಿಚಾರ ಅಂದರೆ ಡಿ.ಕೆ. ಶಿವಕುಮಾರ್ ಪಕ್ಷದ ಕಾರ್ಯಾಧ್ಯಕ್ಷರಾಗಿ ಬಂದಿರುವುದು. ಎಂಥ ಬಿಕ್ಕಟ್ಟಿನ ಸಂದರ್ಭದಲ್ಲೂ ಧೃತಿಗೆಡದ ಡಿಕೆ ಬರೀ ಆಕ್ರಮಣಕಾರಿ ಪ್ರವೃತ್ತಿಗೆ ಮಾತ್ರವಲ್ಲ, ಜೊತೆಗೆ ರಾಜಕೀಯ ತಂತ್ರ-ಪ್ರತಿತಂತ್ರದ ಪಟ್ಟುಗಳನ್ನು ಬಲ್ಲಾತ. ಬೇಕೆಂದಾಗ ಜನರನ್ನು ಸೇರಿಸಬಲ್ಲ, ಅಗತ್ಯ ಬಂದಾಗೆಲ್ಲಾ ಸ್ವಂತದ ಹಣವನ್ನು ಹಿಂದೆಮುಂದೆ ನೋಡದೆ ಖರ್ಚು ಮಾಡಬಲ್ಲ ಡಿಕೆಶಿ ಆಯ್ಕೆ ಕಾಂಗ್ರೆಸ್‌ಗೆ ನಿಜಕ್ಕೂ ಉಪಯೋಗಕರ ಹೌದು.

ಆದರೆ ಈ ದೇಶಪಾಂಡೆ ವಿಚಾರದಲ್ಲಿ ಇದ್ಯಾವುದು ಅಸಾಧ್ಯ. ಕಾಂಗ್ರೆಸ್ ಹೈಕಮಾಂಡ್ ಅದ್ಯಾವ ಆಳತೆಗೋಲಿಟ್ಟುಕೊಂಡು ದೇಶಪಾಂಡೆಗೆ ಪಕ್ಷದ ಕರ್ನಾಟಕ ಸಾರಥ್ಯ ವಹಿಸಿದೆ ಎಂಬುದೂ ಯಾರಿಗೂ ಅರ್ಥವಾಗಿಲ್ಲ.

ದೇಶಪಾಂಡೆ ದುಡ್ಡು ಕೊಟ್ಟು ಕೆಪಿಸಿಸಿ ಅಧ್ಯಕ್ಷಗಿರೀನ ಖರೀದಿಸಿದ್ದಾರೆ ಎಂಬ ಒಂದು ಮಾತಂತೂ ರಾಜ್ಯ ಕಾಂಗ್ರೆಸ್‌ನೊಳಗೆ ಕೇಳಿಬರುತ್ತಿದೆ.

ಬೆಟ್ಟ ಅಗೆದು ಹೆಗ್ಗಣ ಹಿಡಿದರು

2008 ರ ಮೇನಲ್ಲಿ ಅಂದರೆ ಅಸೆಂಬ್ಲಿ ಎಲೆಕ್ಷನ್ ಆದ ಮೇಲೆ ಕೆಪಿಸಿಸಿ ಅಧ್ಯಕ್ಷಗಿರಿಗೆ ಖರ್ಗೆ ರಾಜೀನಾಮೆ ನೀಡಿದ ನಂತರ ಇದುವರೆಗೂ ಆ ಹುದ್ದೆ ಖಾಲಿ ಇತ್ತು. ಸಿದ್ದರಾಮಯ್ಯ, ಡಿ.ಬಿ. ಚಂದ್ರೇಗೌಡರಿಂದ ಹಿಡಿದು ಎಚ್.ಕೆ. ಪಾಟೀಲ್, ಎಚ್. ವಿಶ್ವನಾಥರವರೆಗೂ ಅಧ್ಯಕ್ಷಗಾದಿಗೆ ಹೆಸರುಗಳು ಕೇಳಿಬರುತ್ತಿದ್ದವು. ಇವರ ಪೈಕಿ ಚಂದ್ರೇಗೌಡ ಯೂಸ್‌ಲೆಸ್ ಎಂಬುದನ್ನು ಬಿಟ್ಟರೆ ಉಳಿದ ಯಾವುದೇ ನಾಯಕ ಇವತ್ತಿನ ದೇಶಪಾಂಡೆಗಿಂತ ಬೆಟರ್ ಆಯ್ಕೆಯಾಗಿರುತ್ತಿದ್ದರು ಅನ್ನೋದು ಸಾಮಾನ್ಯ ಕಾಂಗ್ರೆಸ್ಸಿಗರ ಅಂಬೋಣ.

ಸ್ವತಃ ಈ ಬಾರಿ ಹಳಿಯಾಳದಲ್ಲಿ ಸೋತು ಹೈರಾಣಾಗಿರುವ ದೇಶಪಾಂಡೆಗೆ ಕಾಂಗ್ರೆಸ್‌ನೊಳಗೆ ಹೇಳಿಕೊಳ್ಳುವಂಥ ವರ್ಚಸ್ಸೇ ಇಲ್ಲ, ಮನೆ ತುಂಬಾ ದುಡ್ಡು ತುಂಬಿಕೊಂಡಿದ್ದಾರೆ ಎಂಬುದನ್ನು ಹೊರತುಪಡಿಸಿದರೆ ದೇಶಪಾಂಡೆ ಎಂದೂ ಮಾಸ್ ಲೀಡರ್ ಆಗಿರಲೇ ಇಲ್ಲ. ಇಷ್ಟಕ್ಕೂ ದೇಶಪಾಂಡೆ ಅತೀ ಅಲ್ಪಸಂಖ್ಯಾತರಂತಿರುವ ಬ್ರಾಹ್ಮಣ ಸಮುದಾಯದ ರಾಜಕಾರಣಿ. ಆದರೆ ರಾಜ್ಯದ ಬಹುತೇಕ ಬ್ರಾಹ್ಮಣರು ಪ್ರಾಣ ಹೋದರೂ ಬಿಜೆಪಿ ಬಿಟ್ಟು ಅನ್ಯರಿಗೆ ಓಟು ಹಾಕುವವರಲ್ಲ, ಹೀಗೆ ಜಾತಿ, ವರ್ಚಸ್ಸು, ನಾಯಕತ್ವದ ಗುಣ-ಯಾವುದರಲ್ಲೂ ಜಸ್ಟ್ ಪಾಸ್ ಆಗುವಷ್ಟು ಅರ್ಹತೆಯಿರದಿದ್ದರೂ ಅದು ಹೇಗೆ ದೇಶಪಾಂಡೆಗೆ ಕೆಪಿಸಿಸಿ ಚೇರ್ಮನ್‌ಗಿರಿ ಸಿಕ್ಕಿತೆಂಬುದೇ ಆಶ್ಚರ್ಯ.

ಸದ್ಯಕ್ಕಂತು ರಾಜ್ಯ ಕಾಂಗ್ರೆಸ್ಸಿಗರು ದೇಶಪಾಂಡೆಯ 'ಮುಂಬೈ ಲಿಂಕ್'ಗಳ ಕಡೆ ಕೈ ತೋರಿಸುತ್ತಿದ್ದಾರೆ. ಯುಪಿಎ ಸರ್ಕಾರದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿರುವ ಮುಂಬೈನ ಪ್ರಫುಲ್ ಪಟೇಲ್ ಈ ದೇಶಪಾಂಡೆಯ ಬೀಗರು. ದೇಶಪಾಂಡೆಯ ಮಗ ಪ್ರಶಾಂತ್ ಮದುವೆ ಎರಡು ವರ್ಷಗಳ ಹಿಂದೆ ಪಟೇಲನ ಮಗಳು ಆನವಿ ಜೊತೆ ಆಗಿತ್ತು, ಆಗ ಕುದುರಿದ ಬೀಗರ ಸಂಬಂಧ ಈಗ ಇನ್ನಷ್ಟು ಗಾಢವಾದ ರಾಜಕೀಯ ಸಂಬಂಧವಾಗಿ ಬೆಸೆದುಕೊಂಡಿದೆ. ಕೆಪಿಸಿಸಿ ಅಧ್ಯಕ್ಷರ ನೇಮಕದ ವಿಚಾರ ಬಂದಾಗ ಈ ಪ್ರಫುಲ್ ಪಟೇಲ್, ಸೋನಿಯಾ ಕಾರ್ಯದರ್ಶಿ ಅಹ್ಮದ್ ಪಟೇಲ್, ಕರ್ನಾಟಕ ಉಸ್ತುವಾರಿಯ ಪೃಥ್ವಿರಾಜ್ ಚೌಹಾಣ್‌ರೆಲ್ಲಾ ಸೇರಿ ಸೋನಿಯಾ ಹತ್ತಿರ ಲಾಬಿ ಮಾಡಿರುವುದು ಈಗ ಗುಟ್ಟಾಗಿ ಉಳಿದಿಲ್ಲ, ಜೊತೆಗೆ ಅಧಿಕಾರದಲ್ಲಿದ್ದಾಗ ನೂರಾರು ಕೋಟಿ ಲೂಟಿ ಮಾಡಿ ಕುಬೇರನಾಗಿ ಹೋಗಿರುವ ದೇಶಪಾಂಡೆ ಅಂತ ಟೈಮು ಬಂದಾಗ ಹಣ ಖರ್ಚು ಮಾಡಲೂ ಹಿಂಜರಿಯುವ ಆಸಾಮಿಯೂ ಅಲ್ಲ, ಹಾಗಾಗಿ ದೇಶಪಾಂಡೆಯಿಂದ ಉಪಕೃತರಾದವರೇ ಈಗ ಕೆಪಿಸಿಸಿ ಅಧ್ಯಕ್ಷಗಿರಿಗೆ ತಂದು ಕೂರಿಸಿದ್ದಾರೆ ಎಂಬ ರೂಮರುಗಳಿವೆ.

ಒಬ್ಬ ಖರ್ಗೆ, ಧರಂಸಿಂಗ್ ಬಿಟ್ಟರೆ ಉಳಿದ ಕಾಂಗ್ರೆಸ್ ನಾಯಕರು ಉಪಚಾರಕ್ಕಾದರೂ ದೇಶಪಾಂಡೆ ನೇಮಕವನ್ನು ಸ್ವಾಗತಿಸಿಲ್ಲವೆಂಬುದನ್ನು ನೀವೂ ಗಮನಿಸಿರಬಹುದು?

ಒಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ನಾಲ್ಕಾರು ತಿಂಗಳಿಂದ ಒಂದೇ ಸಮ ಬೆಟ್ಟ ಅಗೆದೂ ಅಗೆದೂ ಕೊನೆಗೂ ಹಿಡಿದು ತೆಗೆದದ್ದು ದೊಡ್ಡ ಹೆಗ್ಗಣವನ್ನೇ ವಿನಃ ಪಾರ್ಟಿ ಕಟ್ಟಿ ಬೆಳೆಸಿ, ಹೋರಾಟಕ್ಕೆ ರೆಡಿ ಮಾಡಬಲ್ಲ ನಾಯಕನನ್ನಲ್ಲ ಎಂಬುದೀಗ ಸಾಬೀತಾಗಿದೆ.

ಮೂಲತಃ ಕಾಂಗ್ರೆಸ್ ಮನುಷ್ಯನೇ ಆಗಿದ್ದ ದೇಶಪಾಂಡೆ 1978 ರಲ್ಲಿ ಕಾಂಗ್ರೆಸ್ ತ್ಯಜಿಸಿ ಜನತಾ ಪರಿವಾರದಲ್ಲಿ ಓಡಾಡಿಕೊಂಡಿದ್ದು ಕೊನೆಗೆ 1998 ರಲ್ಲಿ ಮತ್ತೆ ಕಾಂಗ್ರೆಸ್ ಸೇರಿದ್ದರು. ಈ ಹತ್ತು ವರ್ಷದಲ್ಲಿ ಆತ ಪಕ್ಷ ಬಿಟ್ಟು ಹೋಗಲಿಲ್ಲ ಎಂಬುದು ಎಷ್ಟು ನಿಜವೋ ಅದೇರೀತಿ ಪಕ್ಷವನ್ನು ಕಟ್ಟಲಿಲ್ಲ ಎಂಬುದೂ ಅಷ್ಟೇ ವಾಸ್ತವ. ಆದರೆ ಪಕ್ಷ ಬೆಳೆಯದಿದ್ದರೇನು, ಈ ಅವಧಿಯಲ್ಲಿ ದೇಶಪಾಂಡೆ ಆಸ್ತಿ ಮಾತ್ರ ರಾಶಿರಾಶಿ ಬೆಳೆದಿದೆ. 2004 ರಲ್ಲಿ ಎಲೆಕ್ಷನ್‌ಗೆ ನಿಂತಾಗ ಜುಜುಬಿ 9 ಕೋಟಿ ಮೊತ್ತದ ಆಸ್ತಿ ಘೋಷಣೆ ಮಾಡಿಕೊಂಡಿದ್ದ ದೇಶಪಾಂಡೆ 2008 ರ ಎಲೆಕ್ಷನ್ ಸಮಯದಲ್ಲಿ ಬಹಿರಂಗಪಡಿಸಿದ್ದು 145 ಕೋಟಿ ರೂ. ಆಸ್ತಿ!

ಕಳೆದ 10 ವರ್ಷಗಳಿಂದ ಒಂದಲ್ಲಾ ಒಂದು ಮಂತ್ರಿಗಿರಿ ಅನುಭವಿಸಿಕೊಂಡು ಬಂದಿರುವ ದೇಶಪಾಂಡೆ ಎನ್‌ಜಿಇಎಫ್ ಮಾರಾಟ, ಬೆಂಗಳೂರು ಸುತ್ತಮುತ್ತಲಿನ ಅಕ್ರಮ ಭೂದಂಧೆಗಳಲ್ಲೆಲ್ಲಾ ಲೂಟಿ ಮಾಡಿ ಜೇಬು ತುಂಬಿಸಿಕೊಂಡಿರುವಾತ. ಅಷ್ಟೇ ಅಲ್ಲ, ಲೋಕಾಯುಕ್ತರಿಗೆ ಶಾಸಕರು ಸಲ್ಲಿಸುವ ಆಸ್ತಿ ವಿವರಗಳ ಮಾಹಿತಿ ಸಾರ್ವಜನಿಕರಿಗೂ ಸಿಗಬೇಕೆಂದು ಇಂದಿರಾನಗರದ ಸುರೇಶ್ ಎಂಬುವರು ಅರ್ಜಿ ಸಲ್ಲಿಸಿದಾಗ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಏಕೈಕ ರಾಜಕಾರಣಿಯೆಂದರೆ ಇದೇ ದೇಶಪಾಂಡೆ!

ಕೆಪಿಸಿಸಿ ಅಧ್ಯಕ್ಷಗಾದಿಗೆ ದೇಶಪಾಂಡೆಯನ್ನು ಆರಿಸುವಾಗ ಸೋನಿಯಾ ಗಾಂಧಿಗೆ ಇದ್ಯಾವುದೂ ಮುಖ್ಯವಾಗದಿದ್ದುದು ಆಶ್ಚರ್ಯ. ನಿತ್ರಾಣಗೊಂಡಿರುವ ಕಾಂಗ್ರೆಸ್ ಗಾಡಿಯನ್ನು ಜಗ್ಗಿಸಿ ಎಳೆಯಲು ಡಿಕೇಶಿ ಎಂಬ ಬಲಿಷ್ಠನ ಜೊತೆಗೆ ದೇಶಪಾಂಡೆಯೆಂಬ ಕಳ್ಳ ಎತ್ತನ್ನು ನೊಗಕ್ಕೆ ಹೂಡಿರುವುದನ್ನು ನೋಡಿದರೆ....!

ಕಾಂಗ್ರೆಸ್ ಉದ್ಧಾರವಾಗುತ್ತಾ ಅಂತಾ?

■ ಬಿಳಿದಾಳೆ ಪಾರ್ವತೀಶ

ಸಿದ್ಧರಾಮಯ್ಯ ಬೇಡವಾದರೇಕೆ?



ಕಳೆದ 10 ವರ್ಷಗಳ ಹಿನ್ನೆಲೆ ನೋಡಿದರೆ ರಾಜ್ಯ ಕಾಂಗ್ರೆಸ್‌ನ ಸಾರಥ್ಯ ವಹಿಸಿಕೊಂಡಿದ್ದ ಯಾರು ಮಾಸ್ ಲೀಡರ್‌ಗಳಲ್ಲ, ಎಸ್.ಎಂ. ಕೃಷ್ಣ ಖರ್ಗೆ, ಧರಂಸಿಂಗ್‌ಗಳೆಲ್ಲಾ ಸೀನಿಯರ್ ಲೀಡರ್‌ಗಳಂತಿದ್ದರೆ ವಿನಃ ಒಬ್ಬ ಯಡಿಯೂರಪ್ಪ ಇನ್ನೊಬ್ಬ ಕುಮಾರಸ್ವಾಮಿಯಂತೆ ಛಲವಂತರಾಗಿರಲಿಲ್ಲ. ಈಗಿನ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಅಂತ ಸಾಮರ್ಥ್ಯ ಇದೆಯಾದರೂ ಜೊತೆಗಿರುವ ಅಲಂಕಾರಿಕ ಅಧ್ಯಕ್ಷ ದೇಶಪಾಂಡೆಯದ್ದೂ ಅದೇ ಹಳೇ ಕತೆಯ ಪುನರಾವರ್ತನೆ....

ದೇಶಪಾಂಡೆ ಕೂಡಾ ಮಾಸ್ ಲೀಡರ್ ಅಲ್ಲ,

ಆದರೆ ನಿಜಕ್ಕೂ ಮಾಸ್ ಲೀಡರ್ ಆಗಿರುವ ಸಿದ್ಧರಾಮಯ್ಯ ಕಾಂಗ್ರೆಸ್‌ಗೆ ಬೇಡವಾದರೇಕೆ?

ಈ ಪ್ರಶ್ನೆ ಕೇಳಿಕೊಂಡೇ ಹತಾಶೆಯಿಂದ, ಸಿಟ್ಟಿನಿಂದ ಸಿದ್ದು ಬೆಂಬಲಿಗರು ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಆಫೀಸನ್ನು ಧ್ವಂಸ ಮಾಡಿದ್ದಾರೆ. ಅಲ್ಲಲ್ಲಿ ತಾವೇ ಸಭೆ ನಡೆಸುತ್ತಾ 'ರೀಜನಲ್ ಪಾರ್ಟಿ ಕಟ್ತೇವಿ' ಎಂದು ಹೂಂಕರಿಸುತ್ತಿದ್ದಾರೆ.

ಸಿದ್ಧರಾಮಯ್ಯ ಕೆಪಿಸಿಸಿ ಗಾದಿಗೆ ಬರದಂತೆ ದೇವೇಗೌಡರು ಧರಂಸಿಂಗ್ ಮೂಲಕ ತಡೆದರೆಂಬ ಸುದ್ದಿ ಇದೆಯಾದರೂ ಅದೊಂದೇ ಸತ್ಯವಲ್ಲ. ಕಾಂಗ್ರೆಸ್‌ಗೀಗ ತನ್ನ ಪಾರ್ಟಿ ಬಲಪಡಿಸುವ ಜವಾಬ್ದಾರಿಯ ಜೊತೆಗೆ ಮುಂದಿನ ದಿನಗಳಲ್ಲಿ ಅಗತ್ಯಾನುಸಾರ ದೇವೇಗೌಡರೊಂದಿಗೂ ಗೆಳೆತನ ಬೆಳೆಸುವ ಇರಾದೆಯಿದೆ. ಆದರೆ ಅಂತ ಸಂದರ್ಭಕ್ಕೆ ಸಿದ್ಧರಾಮಯ್ಯ ಮಾನಸಿಕವಾಗಿ ಸಿದ್ಧರಿಲ್ಲವೆಂಬ ಅನುಮಾನ ಮೂಲ ಕಾಂಗ್ರೆಸ್ಸಿಗರಲ್ಲಿದೆ. ಮೊಯ್ಲಿ, ಆಸ್ಕರ್, ಧರಂಸಿಂಗ್ ಮುಂತಾದವರಿಗೆ ಸಿದ್ದು ಬಗ್ಗೆ ಅಂತಾ ಒಲವಿಲ್ಲದಿರಲು ಇದೇ ಕಾರಣ. ಗೌಡರ ವಿರುದ್ಧದ ವೈಯಕ್ತಿಕ ಸಿಟ್ಟು, ಬೇಸರಗಳು ಸಿದ್ಧರಾಮಯ್ಯನವರು ಭವಿಷ್ಯದತ್ತ ಸಕಾರಾತ್ಮಕವಾಗಿ ನೋಡದಂತೆ ತಡೆಯುತ್ತಿವೆ ಎಂಬ ಹಿಂಜರಿಕೆ ಹೈಕಮಾಂಡಿಗಿದೆ. ಜೊತೆಗೆ ಸಿದ್ಧರಾಮಯ್ಯ ರಾಜಕಾರಣಕ್ಕೆ ಹಳಬರಾದರೂ ಕಾಂಗ್ರೆಸ್‌ಗಿನ್ನು ಹೊಸಬರೆಂಬ ಹಳೇ ಕಾಂಗ್ರೆಸ್ಸಿಗರ ಆಕ್ಷೇಪವೂ ಅಡ್ಡಗಾಲಾಯಿತು. ಅದನ್ನು ಬ್ಯಾಲೆನ್ಸ್ ಮಾಡಲೆಂದೇ ಅಧ್ಯಕ್ಷ-ಕಾರ್ಯಾಧ್ಯಕ್ಷರೆಂಬ ಎರಡು ಹುದ್ದೆ ಸೃಷ್ಟಿಸುವ ಪ್ರಸ್ತಾಪ ಬಂದಾಗ 'ನಾನೇನು ಕೆಲಸ ಕಾರ್ಯ ಮಾಡಲ್ಲ ಅಂತಾನಾ?' ಎಂದು ಸಿದ್ದು ರಾಂಗಾದರಂತೆ. ವಿಪರೀತ ಆತ್ಮಗೌರವ ಸ್ವಾಭಿಮಾನದ ಸಿದ್ದು ಕೆಪಿಸಿಸಿ ಅಧ್ಯಕ್ಷಗಾದಿಯಿಂದ ತಾವಾಗೇ ದೂರವಾದ ಬಗೆ ಇದು. ತಮ್ಮ ಬಿಗುಮಾನವನ್ನು ಕೊಂಚ ಬಿಟ್ಟು ಸಿದ್ದು ಮನಸ್ಸು ಮಾಡಿದಿದ್ದರೆ ಇವತ್ತು ದೇಶಪಾಂಡೆ ಜಾಗದಲ್ಲಿ ಸಿದ್ಧರಾಮಯ್ಯ ಇರುತ್ತಿದ್ದರೇನೊ?

ಇನ್ನೊಂದು ಒಳಗಿನ ಸುದ್ದಿ ಏನೆಂದರೆ ರಾಜ್ಯ ಕಾಂಗ್ರೆಸ್ ಪಾರ್ಟಿ ಚಟುವಟಿಕೆ ಹಾಗೂ ಆಫೀಸಿನ ತಿಂಗಳ ಖರ್ಚೇ ಹದಿನೈದಿಪ್ಪತ್ತು ಲಕ್ಷಗಳಾಗುತ್ತದೆ. ಸಿದ್ಧರಾಮಯ್ಯ 'ಅದನ್ನು ಪಾರ್ಟಿನೇ ಭರಿಸಬೇಕು' ಅಂತಾ ಖಡಕ್ಕಾಗಿ ಹೇಳಿದರೆ ದೇಶಪಾಂಡೆ 'ಸರಿ ಬಿಡಿ, ಅದನ್ನ ನಾನೇ ನೋಡ್ಕೋತೀನಿ' ಅಂದರಂತೆ!

ಕಾಂಗ್ರೆಸ್ ಹೈಕಮಾಂಡಿಗೆ ದೇಶಪಾಂಡೆ ಯಾಕೆ ಬೇಕಾದರೆನ್ನಲು ಇಂಥ ಚಿಕ್ಕಪುಟ್ಟ ಸಂಗತಿಗಳೂ ಆಳತೆಗೋಲಾದವು. ಇದಲ್ಲವಾ ದುರಂತ.

ಉಪಚುನಾವಣೆಯದ್ದೇ ಮೊದಲ ಸವಾಲು

'ಆಪರೇಷನ್ ಕಮಲ'ಕ್ಕೆ ಪ್ರತಿಯಾಗಿ 'ಆಪರೇಷನ್ ಹಸ್ತ' ನಡೆಯುವುದಾಗಿ ...ಷ ಕಾಂಗ್ರೆಸ್ ನಾಯಕರು ಒಂದೆರಡು ಹೇಳಿಕೆ ಕೊಟ್ಟಿದ್ದಾರೆ. ಆದರೆ ...ಧಿಕಾರವಿರುವ ಪಕ್ಷಕ್ಕೆ, ಕೇವಲ ತತ್ವ-ಸಿದ್ಧಾಂತದ ಕಾರಣಕ್ಕೆ ಯಾವನೂ ...ಬಂದು ಸೇರಲಾರ ಎಂಬುದು ಕಾಂಗ್ರೆಸ್‌ಗೆ ಅರ್ಥವಾದಂತಿಲ್ಲ.

'ಪಕ್ಷ ಬಿಟ್ಟು ಹೋಗಿರುವ ನಾಯಕರು, ಕಾರ್ಯಕರ್ತರ ಮುನಿಸನ್ನು ...ಗಹರಿಸಿ ಮತ್ತೆ ಪಾರ್ಟಿಗೆ ಕರೆತಂದು ಮನೆ ಭದ್ರಪಡಿಸುವುದಾಗಿ' ...ಕೇಶಿ ಹೇಳುತ್ತಿದ್ದಾರಾದರೂ ಅದು ಕೇವಲ confidence building ...xercise ಆಗಬಲ್ಲದಷ್ಟೇ.

ಹೊಸ ನಾಯಕತ್ವದೆದಿರು ಈಗಿರುವ ನಿಜವಾದ ಸವಾಲು ...ಪಚುನಾವಣೆಯದ್ದು.

ಜೆಡಿಎಸ್‌ನಿಂದ ಸ್ಪರ್ಧಿಸಿ ಗೆದ್ದುಬಂದು ಈಗ ಬಿಜೆಪಿ ಸೇರಿರುವ ...ಭಾವಿಯ ಬಾಲಚಂದ್ರ ಜಾರಕಿಹೊಳಿ ಹಾಗೂ ಹುಕ್ಕೇರಿಯ ಉಮೇಶ್ ...ಗೆ ಮರು ಚುನಾವಣೆಯಲ್ಲಿ ಸ್ಪರ್ಧಿಸಿ ಮತ್ತೆ ಗೆದ್ದು ಬರುವ ಬಗ್ಗೆ ...ಕ್ಷ ಯಾವುದೇ ಆತಂಕ ಇದ್ದಂತಿಲ್ಲ.

ಇವರನ್ನು ಮಣಿಸಲು ಕಾಂಗ್ರೆಸ್‌ಗಂತೂ ವಿಶೇಷ ತಯಾರಿಯೇ ...ಕಾಗಬಹುದು. ಆದರೆ ಅದೇ ಕಾಂಗ್ರೆಸ್‌ನಿಂದ ಗೆದ್ದು ಈಗ ಬಿಜೆಪಿಗೆ ...ಗೆದಿರುವ ತುರುವೇಕೆರೆಯ ಜಗ್ಗೇಶ್ ಹಾಗೂ ದೊಡ್ಡಬಳ್ಳಾಪುರದ ...ಸಿಂಹಸ್ವಾಮಿ ಬುರುಡೆಗೆ ಬಿಸಿ ನೀರು ಕಾಯಿಸುವ ಶಕ್ತಿ ಡಿಕೇಶಿಗಿದೆ.

ಒಂದು ಕಾಲದ ಆಪ್ತ ಗೆಳೆಯನೇ ಆಗಿದ್ದರೂ ಜಗ್ಗೇಶ್‌ನನ್ನು ...ಜಕೀಯವಾಗಿ ಮುಗಿಸಲು ಡಿಕೇಶಿ ಹಿಂಜರಿಯಲಾರರು. ಮತ್ತೊಂದೆಡೆ ...ಡ್ಡಬಳ್ಳಾಪುರದ ಹಾಲಿ ಕಾಂಗ್ರೆಸ್ ಸಂಸದ ಜಾಲಪ್ಪನ ಮಗ ...ಸಿಂಹಸ್ವಾಮಿಯೇ ದೊಡ್ಡಬಳ್ಳಾಪುರದಲ್ಲಿ ಬಿಜೆಪಿಯಿಂದ ಸ್ಪರ್ಧಿಸುವ ...ರಣ ಅದೊಂದು ಕಠಿಣ ಪರೀಕ್ಷೆಯಾಗಲಿದೆ. ಕ್ಷೇತ್ರದ ಪೂರ್ತಿ ...ತೋಟಯಿರುವ ಜಾಲಪ್ಪ ಸಹಕರಿಸದಿದ್ದರೆ ಕಾಂಗ್ರೆಸ್ ಅಲ್ಲಿ ಗೆಲ್ಲುವುದು ...ಷ್ಟ.

ಇನ್ನು ಕಾರವಾರದ ವಿಚಾರಕ್ಕೆ ಬಂದರೆ ಕರಾವಳಿಯಲ್ಲಿ ಕಾಂಗ್ರೆಸ್ ...ಸ್ಥಿತಿ ಪರವಾಗಿಲ್ಲ ಎನ್ನುವಂತಿದೆ. 2004 ರ ಚುನಾವಣೆಯಲ್ಲಿ 21 ...ತ್ರಗಳ ಪೈಕಿ ಬಿಜೆಪಿ 15 ರಲ್ಲಿ ಗೆದ್ದಿತ್ತು. ನಂತರ 2008 ರಲ್ಲಿ 19 ...ತ್ರಗಳಷ್ಟೇ ಉಳಿದು ಅದರಲ್ಲಿ ಬಿಜೆಪಿಗೆ ದಕ್ಕಿದ್ದು ಕೇವಲ 10 ಸ್ಥಾನ ...ಮಾತ್ರ.

ಬಿಜೆಪಿಗೀಗ ಪಕ್ಷಾಂತರ ಮಾಡಿರುವ ಶಾಸಕರನ್ನು ಗೆಲ್ಲಿಸಿಕೊಳ್ಳಲೇಬೇಕಾದ ...ತ್ತಡವಿದೆ. ಮತ್ತೊಂದೆಡೆ ಕಾಂಗ್ರೆಸ್‌ನ ಹೊಸ ನಾಯಕತ್ವಕ್ಕೆ ಕಳೆದುಕೊಂಡ ...ತ್ರ ಹಾಗೂ ಶಾಸಕರ ಬದಲಿಗೆ ಹೊಸಬರನ್ನು ತಂದು ಗೆದ್ದು ಮರ್ಯಾದೆ ...ಳಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ.

ಈ ಹಗ್ಗಜಗ್ಗಾಟದಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿ ತೋರಿಸಿದರೆ ...ಮಾತ್ರ ಅದಕ್ಕೆ ಇನ್ನೊಂದಿಷ್ಟು ಬಲಬಂದೀತು.

ಬೇರು ಬಿಟ್ಟುಕೊಳ್ಳುತ್ತಿರುವ ಬಿಜೆಪಿಯನ್ನು ಸೋಲಿಸಲು ಕೇವಲ ಚುನಾವಣೆಗಳಿಗೆ ಕಾಯುತ್ತಾ ಕುಳಿತರೆ ಕಾಂಗ್ರೆಸ್‌ಗೆ ಬಲ ಬರುವುದಿಲ್ಲ. ಇದು ಹತ್ತಾರು ರಾಜ್ಯಗಳಲ್ಲಿ ಇದುವರೆಗೂ ನಡೆದಿರುವ ಎಲೆಕ್ಷನ್‌ಗಳಲ್ಲಿ ಸಾಬೀತಾಗಿ ಹೋಗಿದೆ.

ಎಲ್ಲರಿಗೂ ಈಗಾಗಲೇ ಅರ್ಥವಾಗಿರುವಂತೆ ಈ ಬಿಜೆಪಿಗಳೇನೂ ಸಾಚಾಗಳಲ್ಲ. ದುಡ್ಡು ಹೊಡೆಯುವ ಅವಕಾಶ ಸಿಕ್ಕರೆ ಬರೀ ಹಿಂದೂ ಧರ್ಮವೇನು ಭಾರತಾಂಬೆಯನ್ನೇ ಮೂಲೆಗೆ ತಳ್ಳಿ ಲಂಚ ಎಣಿಸಿಕೊಳ್ಳುವ ಮಾಮೂಲಿ ರಾಜಕಾರಣಿಗಳೆ ತಾನೇ ಇವರು.

ಕಾಂಗ್ರೆಸ್ ಮೊಟ್ಟಮೊದಲು ಮಾಡಬಹುದಾದ ಕೆಲಸವೆಂದರೆ ಹಾಲಿ ಬಿಜೆಪಿ ಮಂತ್ರಿಗಳ ಸಾಲುಸಾಲು ಭ್ರಷ್ಟಾಚಾರದ ಹಗರಣಗಳನ್ನು ಪತ್ತೆಹಚ್ಚಿ ಜನರಿಗೆ ತಿಳಿಸುವುದು.

ಯಡಿಯೂರಪ್ಪನ ಮಕ್ಕಳ ವರ್ಗಾದಂಧೆ, ಕಟ್ಟಾನಾಯ್ಡು ಅಶೋಕನ ಲ್ಯಾಂಡ್ ಡೀಲುಗಳು, ಗಣಿರೆಡ್ಡಿಯ ಕರ್ನಾಟಕದ ಗಡಿ ಒತ್ತುವರಿ ಪ್ರಕರಣಗಳು ಬೆಳಕಿಗೆ ಬಂದರೂ ಸಾಕು. ಜೊತೆಗೆ ಎರಡು ರೂಪಾಯಿಗೆ ಕೇಜಿ ಅಕ್ಕಿ, ರೈತರಿಗೆ ಉಚಿತ ಕರೆಂಟೆಂಬ ಆಶ್ವಾಸನೆಯನ್ನು ಬಿಜೆಪಿ ಈಗಾಗಲೇ ಮರೆತಿದೆ.

ಇನ್ನು ಬಿಜೆಪಿ ವಿರುದ್ಧ ಮಾತಾಡಿದರೆ ಹಿಂದೂ ಓಟ್‌ಗಳು ಬರುವುದಿಲ್ಲವೆಂಬ ಭ್ರಮೆ ಕಾಂಗ್ರೆಸ್‌ಗಿದ್ದಂತಿದೆ. ಆದರೆ ಹಿಂದೂ ಓಟ್ ಎಂಬ ಓಟ್‌ಬ್ಯಾಂಕ್ ಎಲ್ಲೂ ಅಸ್ತಿತ್ವದಲ್ಲಿಲ್ಲ. ಒಬ್ಬ ರೈತನಿಗೆ, ಕೂಲಿ ಮಾಡುವವನಿಗೆ, ಮಧ್ಯಮ ವರ್ಗಿಗೆ, ಯುವ ಜನರಿಗೆ ಹಿಂದೂತ್ವವಾದವನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ ಎಂಬುದು ಕಾಂಗ್ರೆಸ್‌ಗೆ ಅರ್ಥವಾಗಬೇಕು.


ಬಿಜೆಪಿಗಳ ಅಸಂಬದ್ಧ 'ಹಿಂದೂ ರಾಷ್ಟ್ರ'ದ ಪ್ರಚಾರ ಕೇವಲ ಅಲ್ಪಸಂಖ್ಯಾತರಿಗಷ್ಟೇ ಅಲ್ಲ, ಬಹುಸಂಖ್ಯಾತ ದಲಿತ-ಶೂದ್ರರಿಗೇ ಆಪತ್ತು ತರುವಂತದ್ದು. ಕಾಂಗ್ರೆಸ್ ನಾಯಕರು ಇದನ್ನು ಸರಿಯಾಗಿ ಗ್ರಹಿಸಿ ರಾಜಕೀಯ ಹೋರಾಟಕ್ಕಿಳಿದರೆ ಬಿಜೆಪಿಯೆಂಬ ಪೆಡಂಭೂತವನ್ನು ಕಟ್ಟಿಹಾಕುವುದು ಕಷ್ಟವಾಗಲಾರದು.

ಇದು ಕೇವಲ ದುಡ್ಡು ಕಾಸು ಹಾಗೂ ತೋಳ್ಬಲದ ವಿಚಾರ ಅಲ್ಲ ಎಂಬುದು ಡಿಕೇಶಿ-ದೇಶಪಾಂಡೆಗೆ ಅರ್ಥವಾಗಬೇಕಿದೆ.

ಡ್ರೈವರ್ ವಿರುದ್ಧ ರೌಡಿ ಗ್ಯಾಂಗ್ ಮತ್ತೆ ಜಗ್ಗೇಶ್ ಪುಂಡಾಟಿಕೆ

'ಹುಟ್ಟು ಗುಣ ಸುಟ್ಟರೂ ಹೋಗಲ್ಲ' ಅನ್ನುವುದನ್ನು ಪದೇಪದೇ ಸಾಬೀತು ಮಾಡುವುದೇ ಜಗ್ಗೇಶ್ ಸ್ಟೈಲು!

ಮೊದಲು ಶ್ರೀರಾಂಪುರದ ಕಾಂಗ್ರೆಸ್ ನಾಯಕ ಲಕ್ಕೇಗೌಡನನ್ನು ನಡುರಸ್ತೆಯಲ್ಲೇ ಕತ್ತರಿಸಿ, ತದನಂತರ ಡೈರೆಕ್ಟರ್ ರಾಮಮೂರ್ತಿಯ ತಲೆ ಸೀಳಿ, ಹಿರಿಯ ನಟ ಬಾಲಕೃಷ್ಣರನ್ನು ಸಿನಿಮಾ ಸೆಟ್ಟಲ್ಲೇ ಹಿಡಿದು ಬಡಿದಿದ್ದ ಜಗ್ಗೇಶನ ಪುಂಡು ಬುದ್ಧಿಗೆ ಲೇಟೆಸ್ಟ್ ಸೇರ್ಪಡೆಯೆಂಬಂತೆ ಅವರ ಕಾರಿಗೆ ಡ್ರೈವರಾಗಿದ್ದ ಪದ್ಮನಾಭನ ಮೇಲೆ 'ಅಟ್ಯಾಕ್' ಆಗಿದೆ.



ಹೊಟ್ಟೆ ಮತ್ತು ಬೆನ್ನಿಗೆ ಡ್ಯಾಗರ್‌ನಿಂದ ಚುಚ್ಚಿಸಿಕೊಂಡು, ಎಡಗೈಗೆ ಬಿದ್ದ ಲಾಂಗ್ ಏಟುಗಳಿಂದಾಗಿ ಕೈತುಂಬಾ ಬ್ಯಾಂಡೇಜ್ ಸುತ್ತಿಕೊಂಡು ಬಸವೇಶ್ವರನಗರದ ಫೆನಿಸಿಯೇ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೆಣಗಾಡುತ್ತಿರುವ ಪದ್ದು ಅಲಿಯಾಸ್ ಪದ್ಮನಾಭನನ್ನು ರೌಡಿ ಗ್ಯಾಂಗೊಂದು ಇಪ್ಪತ್ತೊಂಭತ್ತು ಬಾರಿ ಚುಚ್ಚಿದೆ. ನಿನ್ನೆಮೊನ್ನೆಯ ತನಕ ತನ್ನನ್ನು ಈ ಸ್ಥಿತಿಗೆ ತಂದಿದ್ದೇ ಜಗ್ಗೇಶ್ ಎಂದು ಆಸ್ಪತ್ರೆಯ ಹಾಸಿಗೆಯಲ್ಲೇ ಬಹಿರಂಗವಾಗಿ ಹೇಳಿಕೆ ಕೊಡುತ್ತಿದ್ದ ಡ್ರೈವರ್ ಪದ್ಮನಾಭ ಮೂರನೇ ದಿನದ ಹೊತ್ತಿಗೆ ಏಕೆ ಮೌನ ವಹಿಸಿದ?

ರೆಕಾರ್ಡ್ ಮಾಡಿಕೊಂಡವನೊಬ್ಬ ಸೀದಾ ಅದನ್ನು ಜಗ್ಗೇಶ್ ಮುಂದಿಟ್ಟ. ತನ್ನ ಹುಳುಕ ಥಳುಕಗಳೆಲ್ಲ ಹೀಗೆ ಕಂಡಕಂಡಲ್ಲಿ ಬಾಯಿಬಿಡುತ್ತಿರುವ ಡ್ರೈವರ್ ವಿರುದ್ಧ ಕೆಂಡಾಮಂಡಲನಾದ ಜಗ್ಗೇಶ್ ತಾನೇ ಒಂದೆರಡು ... ಫೋನ್ ಮಾಡಿ 'ಅಮ್ಮಾ ಅಕ್ಕಾ' ಎಂದ. ಅಷ್ಟಕ್ಕೇ ಸುಮ್ಮನಾಗದೇ ದೂರದರ್ಶನದಲ್ಲಿ ಕೆಲಸ ಮಾಡುವ ತನ್ನ ಮೇಕಪ್ ಮ್ಯಾನ್ ಮಾದೇಗೌಡನನ್ನು ಬಿಟ್ಟು 'ಅವಾಜ್' ಹಾಕಿಸಿದ್ದ.

ಈ ಮಧ್ಯೆ ಜಗ್ಗೇಶ್ ಧಮಕಿಗೆ ಹೆದರಿ ತನ್ನ ಮೊಬೈಲನ್ನೇ ಬದಲಿಸಿದ ಪದ್ದು ಒಂದಷ್ಟು ದಿನಗಳ ಕಾಲ ತನ್ನ ಪಾಡಿಗೆ ತಾನಿದ್ದ. ಆದರೆ ಜಗ್ಗೇಶ್ ಹೇಗೋ ಆತನ ಹೊಸ ನಂಬರನ್ನೂ ಪತ್ತೆಹಚ್ಚಿ ಮತ್ತೆ ಮಾದೇಗೌಡನಿಂದ ವಾರ್ನ್ ಮಾಡಿಸಲಾರಂಭಿಸಿದ. ಬಹುಶಃ ಸೆಪ್ಟೆಂಬರ್ 26 ರ ಶುಕ್ರವಾರ ರಾತ್ರಿ ಮಾದೇಗೌಡನ ಸ್ಕೆಚ್ಚು ರೆಡಿಯಾಗಿತ್ತೇನೊ.

ರಾತ್ರಿ ಹತ್ತೂವರೆಯ ಹೊತ್ತಿಗೆ ಪದ್ದೂನ ಮೊಬೈಲಿಗೆ ಕುಮಾರ್ ಎಂಬ ಹೆಸರಿನಿಂದ ಯಾರೋ ಒಬ್ಬ ಫೋನ್ ಮಾಡಿದ್ದಾನೆ. ನಿನ್ನ ಹತ್ರ ಏನೋ ಮಾತಾಡಬೇಕು ಲಗ್ಗೆರೆ ರಿಂಗ್‌ರೋಡ್ ಹತ್ತಿರ ಬಾ ಎಂದಿದ್ದಾನೆ. ಪಕ್ಕದಲ್ಲೇ ಮನೆಯಿದ್ದ ಪದ್ದು ಮಿಕದಂತೆ ರಿಂಗ್‌ರಸ್ತೆಯ ಫ್ಲೈಓವರ್ ಬಳಿ ಬಂದಿದ್ದಾನೆ ಅಷ್ಟೇ. ಮೊದಲೇ ಹೊಂಚು ಹಾಕುತ್ತಿದ್ದ ಆಟೋದಿಂದ ಮಚ್ಚು ಲಾಂಗ್ ಹಿಡಿದ ಐವರು ಆತನನ್ನು ಹಿಗ್ಗಾಮುಗ್ಗಾ ಇರಿಯಲಾರಂಭಿಸಿದ್ದಾರೆ. ಬೀಸಿದ ಲಾಂಗಿಗೆ ಕೈ ಅಡ್ಡ ಹಿಡಿದ ಪದ್ದೂನ ಎಡಗೈಯೇ ಸೀಳಿಹೋಗಿದೆ.



ಆತನ ಪ್ರಜ್ಞೆಯನ್ನು ಡಾಕ್ಟರುಗಳೇ ಇಂಜೆಕ್ಷನ್ ಚುಚ್ಚಿ ತಪ್ಪಿಸಿದ್ದಾರಾ? ಬಿಜೆಪಿ ಸರ್ಕಾರ ಮುಖಭಂಗ ತಪ್ಪಿಸಿಕೊಳ್ಳಲು ಇಡೀ ಪ್ರಕರಣವನ್ನು ಮುಚ್ಚಿಹಾಕುತ್ತಿದೆಯಾ? ರಾಜಗೋಪಾಲನಗರದ ಪೊಲೀಸರು ಘಟನೆಯನ್ನು ತಿರುಚುತ್ತಿರುವುದು ಏಕೆ?

ಹೀಗೆ ತಲೆ ಎತ್ತಿದ ಗುಮಾನಿಗಳೆಲ್ಲಕ್ಕೂ ಉತ್ತರ ಕೊಡಬೇಕಿದ್ದ ಜಗ್ಗೇಶ್ ಸದ್ಯ ನಾಪತ್ತೆ. ಫೋನ್ ಎತ್ತುತ್ತಿಲ್ಲ, ಯಾರ ಬಳಿಯೂ ಮಾತಾಡುತ್ತಿಲ್ಲ. ಅದು ಅಪರಾಧಿ ಪ್ರಜ್ಞೆಯ ಲಕ್ಷಣವಷ್ಟೆ.

ನಡೆದ ಘಟನೆಯಿಷ್ಟೆ. ಪದ್ದು ಉರ್ಫ್ ಪದ್ಮನಾಭ ಕಳೆದ ಹತ್ತು ವರ್ಷಗಳಿಂದ ಜಗ್ಗೇಶ್ ಕಾರಿಗೆ ಡ್ರೈವರ್. ಜಗ್ಗೇಶ್ ತಮ್ಮ ಹಾಸ್ಯನಟ ಕೋಮಲ್ ಮತ್ತು ಡ್ರೈವರ್ ಪದ್ದು ಇಬ್ಬರೂ ಶ್ರೀರಾಂಪುರದ ಕಾನ್ವೆಂಟ್ ಒಂದರಲ್ಲಿ ಸಹಪಾಠಿಗಳಾಗಿದ್ದು ಸ್ನೇಹಕ್ಕಾಗೇ ಜಗ್ಗೇಶ್ ಕಾರಿಗೆ ಡ್ರೈವರ್ ಆದ ಪದ್ದು ಮೂಲತಃ ತಮಿಳನಾಡಿನ ತಿರುವಣ್ಣಾಮಲೈಯವನು. ಜಗ್ಗೇಶ್ ತುರುವೆಕೆರೆಯಿಂದ ಎಮ್ಮೆಲ್ಲೆಯಾಗಿ ಗೆದ್ದು ನಂತರ ಕಾಂಗ್ರೆಸ್ಸಿಗೇ ಕೈಕೊಟ್ಟು ರಾಜೀನಾಮೆ ಬೀಸಾಕುವ ತನಕ ಪದ್ದು ಜಗ್ಗೇಶ್ ಸಂಬಂಧ ಚೆನ್ನಾಗಿತ್ತು. ಯಾವತ್ತು ಸಾರಿಗೆ ಸಂಸ್ಥೆಗೆ ಜಗ್ಗೇಶ್ ಉಪಾಧ್ಯಕ್ಷರಾದರೋ ಸರ್ಕಾರಿ ಕಾರು ಬಂತಲ್ಲ; ತರಲೆ ಶುರುವಾಗಿದ್ದೇ ಆವಾಗ. ಗೂಟದ ಕಾರು ಮತ್ತು ಇಬ್ಬಬ್ಬರು ಸರ್ಕಾರಿ ಡ್ರೈವರ್‌ಗಳಿದ್ದರಿಂದ ಸಹಜವಾಗೇ ಪದ್ದು ನಿರುದ್ಯೋಗಿಯಾದ.



ಹಾಗಂತ ಜಗ್ಗೇಶ್ ಆತನನ್ನು ಕೆಲಸಕ್ಕೆ ಬರಬೇಡ ಅನ್ನಲಿಲ್ಲ, ತನ್ನ ಸ್ವಂತಕ್ಕಿದ್ದ ಏಳು ಕಾರುಗಳನ್ನು ನೋಡಿಕೊಂಡು ಮನೆಯಲ್ಲೇ ಇದ್ದು ಬಿಡು ಎಂದಿದ್ದು ಡ್ರೈವರ್‌ನನ್ನು ಘಾಸಿಗೊಳಿಸಿದೆ. ಇದೇ ಹೊತ್ತಿಗೆ ನನಗೆ ಸಾರಿಗೆ ಸಂಸ್ಥೆಯಲ್ಲೊಂದು ಕೆಲಸ ಕೊಡಿಸಿ ಎಂದಿದ್ದಾನೆ. ಅದಕ್ಕೆ ಜಗ್ಗೇಶ್ ನಿನಗ್ಯಾಕಯ್ಯಾ ಕೆಲಸ ಮನೆಯಲ್ಲೇ ಬಿದ್ದಿರು ಎಂದು ಗಂಟಿಕ್ಕಿದ. ಹಾಗಾದರೆ 50 ಸಾವಿರ ರೂಪಾಯಿ ಅಡ್ವಾನ್ಸಾದ್ರೂ ಕೊಡಿ ಎಂದಿದ್ದಾನೆ ಡ್ರೈವರ್. ಜಗ್ಗೇಶ್ ಅದಕ್ಕೆ ಸುಮ್ಮನೆ ಕ್ಯಾತೆ ತೆಗಿಬೇಡ ಎಂದು ಆವಾಜ್ ಹಾಕಿ ಸಾಗಿಸಿದ.

ಇದು ಜಗ್ಗೇಶ್ ಮತ್ತು ಡ್ರೈವರ್ ಪದ್ದು ನಡುವೆ ಹೊತ್ತಿಕೊಂಡ ಸಣ್ಣ ವೈಮನಸ್ಯವಷ್ಟೇ. ಇಲ್ಲಿಗೆ ತಿಂಗಳ ಹಿಂದೆ ಏಕಾಏಕಿ ಕೆಲಸಕ್ಕೆ ಬರುವುದನ್ನೇ ನಿಲ್ಲಿಸಿದ ಪದ್ದು ಶ್ರೀರಾಂಪುರದ ಪೋರ್ಕಿ ಅಡ್ಡೆಗಳಲ್ಲಿ ಜಗ್ಗೇಶ್ ಬಗ್ಗೆ ತನಗೆ ಗೊತ್ತಿದ್ದ ಒಂದೊಂದೇ ಲೀಲಾ ವಿನೋದಾವಳಿಗಳನ್ನು ಬಾಯಿಬಿಡಲಾರಂಭಿಸಿದ. ಇದು ಹೇಗೋ ಜಗ್ಗೇಶ್ ಕಿವಿಗೆ ಬಿದ್ದಿದೆ.

ಜಗ್ಗೇಶ್‌ರ ಕಪಿಚೇಷ್ಟೆ ಅವರ ಮಕ್ಕಳ ಹಾವಳಿ, ಯಾವುದೋ ನಟಿಯೊಬ್ಬಳ ಜೊತೆಗಿನ ಅಂಗಚೇಷ್ಟೆ ಇತ್ಯಾದಿಗಳೆಲ್ಲ ಗೊತ್ತಿದ್ದ ಡ್ರೈವರ್ ಅದನ್ನು ಶ್ರೀರಾಂಪುರದ ಬಾರ್ ಒಂದರಲ್ಲಿ ಕುಡಿದು ಚಿತ್ತಾಗಿ ಬಾಯಿಬಿಟ್ಟ. ಅದನ್ನು ಟೇಪ್ ಒಂದರಲ್ಲಿ ...

ಬಹುಶಃ ಓಡಿ ಹೋಗದೇ ಇದ್ದಿದ್ದರೆ ಪದ್ದು ಹೆಣವಾಗಿರುತ್ತಿದ್ದ. ಅದೃಷ್ಟ ನೆಟ್ಟಗಿತ್ತು. ರಕ್ತ ಹರಿಸುತ್ತಾ ಕೂಗಾಡುತ್ತಿದ್ದ ಆತನನ್ನು ಯಾರೋ ಆಟೋ ಡ್ರೈವರ್ ಓರ್ವ ರಾಜಗೋಪಾಲನಗರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾನೆ. ಅಲ್ಲಿ ಯಾರೋ ಐದು ಮಂದಿ ಜಗ್ಗೇಶ್ ಕಡೆಯವರು ತನ್ನನ್ನು ಕೊಲ್ಲಲು ಬಂದರೆಂದೇ ದೂರು ಕೊಟ್ಟಿದ್ದಾನೆ. ಆನಂತರ ಪೊಲೀಸರೇ ಆತನನ್ನು ಬಸವೇಶ್ವರ ನಗರ ಪೊಲೀಸ್ ಠಾಣೆಗೆ ಸಾಗಿಸಿದ್ದಾರೆ.

ಮರುದಿನ ಅಂದರೆ ಶನಿವಾರದ ತನಕ ತನ್ನನ್ನು ಜಗ್ಗೇಶ್ ಗ್ಯಾಂಗೇ ಕತ್ತರಿಸಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದ ಪದ್ಮನಾಭ ಮೂರನೇ ದಿನಕ್ಕೇ ಮೆತ್ತಗಾಗಿದ್ದ. ಇದರರ್ಥ ಈ ಹೊತ್ತಿಗಾಗಲೇ ಜಗ್ಗೇಶ್ ಬಲಗೈಬಂಟ ಮತ್ತು ಜಗ್ಗೇಶ್ ಅಭಿಮಾನಿಗಳ ಸಂಘದ ಅಧ್ಯಕ್ಷ ಜಯರಾಮ ಆಸ್ಪತ್ರೆಗೆ ಬಂದು ಪದ್ಮನಾಭನ ತಲೆತಿಕ್ಕಿದ್ದ. ಈಗ ಯಾರೋ ಗೊತ್ತಿಲ್ಲ ರೌಡಿಗಳು ಬಂದು ನನ್ನನ್ನು ಕತ್ತರಿಸಿದ್ರು ಎಂದಷ್ಟೇ ಪದ್ದು ಬಾಯಿ ಬಿಡುತ್ತಿದ್ದಾನೆ.

ಓಕೆ, ಡ್ರೈವರ್ ಮಾತನ್ನೇ ಬದಿಗಿಟ್ಟು ನೋಡೋಣ. ಆತ ತಿಂಗಳ ಹಿಂದೆ ಕೆಲಸಬಿಟ್ಟದ್ದು ಸುಳ್ಳಾ? ಜಗ್ಗೇಶ್‌ನ ಮೇಕಪ್‌ಮ್ಯಾನ್ ಮಾದೇಗೌಡ ಆತನನ್ನು ಥ್ರೆಟ್ ಮಾಡಿದ್ದು ಸುಳ್ಳಾ? ಜಗ್ಗೇಶ್ ಈ ಹಿಂದೆ ಕಾವೇರಿ ಗಲಾಟೆಯ ದಿನ ತಾನೇ ಮಂಕಿಕ್ಯಾಪ್ ಹಾಕಿಕೊಂಡು ಲಕ್ಕೇಗೌಡನನ್ನು ಇದೇ ರೀತಿ ಕತ್ತರಿಸಿದ್ದು ಸುಳ್ಳಾ?

ಈ ಬಾರಿ ತಾನೇ ಕತ್ತರಿಸುವ ಬದಲು ರೌಡಿಗಳನ್ನು ಬಿಟ್ಟು ಮಾಡಿಸಿದ್ದಾನೆ ಎನ್ನುವುದನ್ನು ಬಿಟ್ಟರೆ ಜಗ್ಗೇಶ್ ಹುಟ್ಟುಗುಣ ಬಿಟ್ಟಿಲ್ಲ. ಅಷ್ಟಕ್ಕೂ ಜಗ್ಗೇಶ್ ಬಗ್ಗೆ ಯಾರಿಗೂ ಗೊತ್ತಿಲ್ಲದ ಯಾವ ರಹಸ್ಯ ಆತನ ಡ್ರೈವರ್‌ಗೆ ಗೊತ್ತಿತ್ತು? ಅಂಥಾ ಯಾವ ವಿಷಯವನ್ನು ಬಾಯಿಬಿಟ್ಟದ್ದಕ್ಕೆ ಜಗ್ಗೇಶ್ ಈಪಾಟಿ ತಲೆಕೆಡಿಸಿಕೊಂಡ?

ಒಂದಂತೂ ಸತ್ಯ, ಜಗ್ಗೇಶ್ ಎಮ್ಮೆಲ್ಲೆಯಾದ ಮೇಲೂ ತನ್ನ ಪುಂಡು ಬುದ್ಧಿ ಬಿಟ್ಟಿಲ್ಲ!

■ ರಾ.ಸೋ.



ಮಾಡಿಸಿದ್ದು ಎಂ.ಟಿ. ಕೃಷ್ಣಪ್ಪನಾ?

ಕೋತಿ ಬೆಣ್ಣೆ ತಿಂದು ಮೇಕೆ ಬಾಯಿಗೆ ಒರೆಸಿದಂತೆ ತನ್ನ ಡ್ರೈವರ್ ಮೇಲಾದ ದಾಳಿಯನ್ನು ತನ್ನ ರಾಜಕೀಯ ಎದುರಾಳಿ ಎಂ.ಟಿ. ಕೃಷ್ಣಪ್ಪನ ತಲೆಗೆ ಕಟ್ಟುವುದು ಜಗ್ಗೇಶ್ ಉದ್ದೇಶವೆ?

ರಾಜಗೋಪಾಲನಗರ ಪೊಲೀಸರ ಪ್ರಕಾರ ಇದನ್ನು ಎಂ.ಟಿ.ಕೃಷ್ಣಪ್ಪನ ಹುಡುಗರೇ ಮಾಡಿದ್ದಾರೆಂದು ಜಗ್ಗೇಶ್ ಹೇಳಿದ್ದಾನೆ. ಪೊಲೀಸರ ಮೂಲಕ ಇಡೀ ಕೇಸನ್ನು ತುರುವೇಕೆರೆಯ ತನ್ನ ಎದುರಾಳಿ ಎಂ.ಟಿ. ಕೃಷ್ಣಪ್ಪನವರ ಮೇಲೆ ಹೊರಿಸಲು ತನ್ನ ಗುರು ಸಾರಿಗೆ ಮಂತ್ರಿ ಅಶೋಕ್‌ರಿಗೆ ದುಂಬಾಲು ಬಿದ್ದಿದ್ದಾನೆ. ಸದ್ಯ ರಾಜಗೋಪಾಲನಗರಕ್ಕೆ ಇನ್ಸ್‌ಪೆಕ್ಟರ್ ಆಗಿರುವ ಚಂದ್ರು ಹೇಳಿಕೇಳಿ ಅಶೋಕ್ ಪರಮಾಪ್ತ. ಆದರೆ ಅದು ಸಾಧ್ಯವಾ? ಜಗ್ಗೇಶ್ ಪುಂಡು ಬುದ್ಧಿಗೆ ಅಷ್ಟೂ ಹೊಳೆಯುವುದಿಲ್ಲವಾ?

ಎಂ.ಟಿ. ಕೃಷ್ಣಪ್ಪ ತುರುವೇಕೆರೆಯಲ್ಲಿ ಜಗ್ಗೇಶ್ ಕಡುವೈರಿ ನಿಜ. ಹಾಗೊಮ್ಮೆ ಜಿದ್ದಾಜಿದ್ದಿ ಇದ್ದಿದ್ದೇ ಆಗಿದ್ದರೆ ಅದನ್ನು ಜಗ್ಗೇಶ್‌ರ ಡ್ರೈವರ್ ಮೇಲೆ ಯಾರಾದರೂ ಏಕೆ ತೀರಿಸಿಕೊಳ್ಳುತ್ತಾರೆ? ಬಹುಶಃ ತನ್ನಿಂದ ದೂರವಾದ ನಂತರ ಕೃಷ್ಣಪ್ಪನವರ ಜೊತೆ ಡ್ರೈವರ್ ಕೈಜೋಡಿಸಿದ್ದಾನೆಂಬ ಗುಮಾನಿ ಜಗ್ಗೇಶ್‌ಗಿರಬಹುದೆ?

ಆದರೆ ಪದ್ಮನಾಭನ ತಾಯಿ ಕಸ್ತೂರಿ ಹೇಳುವುದೇ ಬೇರೆ. ಏನ್ ಸ್ವಾಮಿ ಮಾಡೋದು? ಈಗಾಗಲೇ ಆಸ್ಪತ್ರೆ ಬಿಲ್ಲು 3 ಲಕ್ಷ ರೂಪಾಯಿಗೇರಿದೆ. ಇನ್ನೆರಡು ದಿನ ಇದ್ರೆ ಅದು ಐದು ಲಕ್ಷವಾಗುತ್ತೆ. ಅಷ್ಟೊಂದು ದುಡ್ಡು ಕೊಡೋ ಶಕ್ತಿ ನಮಗೆಲ್ಲಿದೆ? ಈ ಟೈಮಲ್ಲಿ ಜಗ್ಗೇಶ್ ನಿಷ್ಠುರ ಮಾಡ್ಕೊಂಡ್ರೆ ಆಸ್ಪತ್ರೆ ಬಿಲ್ ಕೊಡೋದು ಯಾರು? ಅದಕ್ಕೇ ದಯವಿಟ್ಟು ನಾವು ಜಗ್ಗೇಶೇ ಮಾಡಿಸಿದ್ದಾರೆ ಅಂತ ಹೇಳಿದ್ದೀವಿ ಅಂತ ಬರೀಬ್ಯಾಡಿ ಸ್ವಾಮೀ...! ■

ಇದು ಡ್ರೈವರ್ ಪದ್ಮನಾಭನ ತಾಯಿಯ ಮಾತು. ಸತ್ಯ ಇದಕ್ಕಿಂತ ಬೇಕೆ?

ಹೊಸಕೋಟೆ: ಗೂಂಡಾ ಪೊಲೀಸ್ ಮಲ್ಲೇಶ

ಹೊಸಕೋಟೆಯ ಕಾಂಗ್ರೆಸ್-ಬಿಜೆಪಿ ವೈಮನಸ್ಸು ಇನ್ನೇನು ಬೀದಿಕಾಳಗವಾಗುವ ಹಂತಕ್ಕೆ ಬಂದಿದೆ. ಕಾರ್ಮಿಕ ಸಚಿವ, ಹೊಸಕೋಟೆಯ ಬಿಜೆಪಿ ಶಾಸಕ ಬಿ.ಎನ್. ಬಚ್ಚೇಗೌಡ ಕೊನೆಗೂ ಆಡಿದ ಮಾತಿನಂತೆ ತನ್ನ ವಿರೋಧಿಗಳ ಮೇಲೆ ಸೇಡಿನ ದಾಳಿ ಶುರು ಮಾಡಿದ್ದಾನೆ. ಅವನ ಬಂಟನಂತೆ ರಾಜಕೀಯ ಸೇಡಿನ ನೇರ ದಾಳಿಗಿಳಿದಿರುವುದು ಎಂ. ಮಲ್ಲೇಶ್!

ಹೊಸಕೋಟೆಯ ಸರ್ಕಲ್ ಇನ್ಸ್‌ಪೆಕ್ಟರ್ ಇವನು!!

ಕೆಲಸಕ್ಕೆ ಸೇರಿ ಇನ್ನು ಹತ್ತು ವರ್ಷ ಆಗಿರದಿದ್ದರೂ ಈಗಾಗಲೇ ಎರಡು ಬಾರಿ ಸಸ್ಪೆಂಡಾಗಿರುವ ಮಲ್ಲೇಶ ಈಗ ಹೊಸಕೋಟೆಯ ಹಳ್ಳಿಹಳ್ಳಿಗೆ ನುಗ್ಗಿ ಗೂಂಡಾಗಿರಿ ನಡೆಸುತ್ತಿದ್ದಾನೆ. ಬಚ್ಚೇಗೌಡನಿಗೆ ಓಟು ಹಾಕದವರು, ಮುಸ್ಲಿಮರು, ಅತೀ ಮುಖ್ಯವಾಗಿ ಕಾಂಗ್ರೆಸ್‌ನ ಮಾಜಿ ಶಾಸಕ ಎಂ.ಟಿ.ಬಿ. ನಾಗರಾಜ್ ಬೆಂಬಲಿಗರನ್ನು ಹಣಿಯಬೇಕೆಂಬುದೇ ಈ ದಾಳಿಯ ಉದ್ದೇಶ.


ಬಚ್ಚೇಗೌಡ

ಕನಕಪುರದವನಾದ ಈ ಮಲ್ಲೇಶ ಕೆಲ ವರ್ಷಗಳ ಹಿಂದೆ ಹೊಸಕೋಟೆಯಲ್ಲೇ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ. ಬಾಯಿ ತೆಗೆದರೆ ಹೊಲಸು ಮಾತು, ಕೈ ಸನ್ನೆ, ಬಾಯಿಸನ್ನೆಗಳೆಲ್ಲಾ ಬರೀ ಥರ್ಡ್ ಕ್ಲಾಸಿನ ಮಟ್ಟದಲ್ಲೇ ಆಗಿದ್ದವನಾದ್ದರಿಂದ ಆಗ ಶಾಸಕರಾಗಿದ್ದ ನಾಗರಾಜ್ ಇವನನ್ನು ವರ್ಗಾ ಮಾಡಿಸಿದ್ದರು. ಆಗ ಊರು ಬಿಡುವ ಮುನ್ನ ತಿರುಗಾ ಇದೇ ಜಾಗಕ್ಕೆ ಹಾಕಿಸ್ಕೊಂಡು ಬರಲಿಲ್ಲಾಂದ್ರೆ.... ಅಂತ ಧುರ್ಯೋಧನ ಪ್ರತಿಜ್ಞೆ ಮಾಡೇ ತೊಲಗಿದ್ದ ಮಲ್ಲೇಶ ಬಿಜೆಪಿ ಅಧಿಕಾರಕ್ಕೆ ಬಂದೇಟಿಗೆ ಮತ್ತೆ ಶನಿಯಂತೆ ಸೆಪ್ಟೆಂಬರ್ 8 ರಂದು ಹೊಸಕೋಟೆಯ ಸರ್ಕಲ್ ಇನ್ಸ್‌ಪೆಕ್ಟರಾಗಿ ವಕ್ಕರಿಸಿಕೊಂಡಿದ್ದಾನೆ.

ಹಾಗೆ ಬಂದ ಮೂರನೇ ದಿನವೇ ಅತ್ತಿವಟ್ಟ ಗ್ರಾಮದ ಬಿಜೆಪಿ ದಲಿತರ ಗಣೇಶೋತ್ಸವಕ್ಕೆ ಅಧ್ಯಕ್ಷತೆ ವಹಿಸಲು ಹೋಗಿ ಅಲ್ಲೊಂದು ಜಾತಿ ರಾಜಕೀಯದ ಜಗಳ ಹಚ್ಚಿ ಬಂದಿದ್ದಾನೆ.

ಬಿಜೆಪಿ ದಲಿತರ ಅಟ್ರಾಸಿಟಿ ಕೇಸು

ಜಡಿಗೇನಹಳ್ಳಿ ಹೋಬಳಿಯ ಅತ್ತಿವಟ್ಟ ಬೆಂಗಳೂರು-ಕೋಲಾರ ನ್ಯಾಷನಲ್ ಹೈವೆಯಲ್ಲಿದೆ. ಮೊನ್ನೆ ಸೆಪ್ಟೆಂಬರ್ 11 ರಂದು ಅಲ್ಲೊಂದು ಗಣೇಶ ಪೂಜೆ ಇತ್ತು. ಗಣೇಶ ಇಟ್ಟಿದ್ದವರು ಬಿಜೆಪಿಯ ದಲಿತ ಯುವಕರು. ಅದೇ ಊರಿನ ಬಹುತೇಕ ಜನ ಕಾಂಗ್ರೆಸ್ ಬೆಂಬಲಿಗರಾಗಿದ್ದು ಬಚ್ಚೇಗೌಡನನ್ನು ಕೆರಳಿಸಿತ್ತು. 'ನನಗ್ಯಾರ್‍ಯಾರು ಓಟ್ ಹಾಕಿಲ್ಲ, ಅವರಿಗೆಲ್ಲಾ ಪಾಠ ಕಲುಸ್ತೀನಿ' ಅಂತಾ ಮುತ್ಸಾಳ ಮಾತುಗಳನ್ನು ಈ ಬಚ್ಚೇಗೌಡ ಹೇಳಿದ್ದು ನಿಮಗೂ ಗೊತ್ತಿರಬೇಕಲ್ಲ? ಅದೇರೀತಿ ಅತ್ತಿವಟ್ಟದ ಕೆಲ ದಲಿತ ಯುವಕರ ಗಣೇಶೋತ್ಸವದ ದಿನ ಕಾಂಗ್ರೆಸ್‌ನ ಕೆಲ ಒಕ್ಕಲಿಗ ಕಾರ್ಯಕರ್ತರ ಮೇಲೆ ಕಾಲು ಕೆರೆದು ಜಗಳಕ್ಕಿಳಿದು ಅಲ್ಲೊಂದು ಸಣ್ಣ ಮಾರಾಮಾರಿ ಯಾಗಿದೆ. ಆಗ ಈ ಪೊಲೀಸ್ ಮಲ್ಲೇಶ ಗಲಾಟೆ ನಿಲ್ಲಿಸುವ ಬದಲಾಗಿ ತಾನೇ ಶುದ್ಧ ಬೀದಿ ರೌಡಿಯಂತೆ ಊರೊಳಕ್ಕೆ ನುಗ್ಗಿ 'ರಂಡೆ-ಮುಂಡೆ' ಅಂತೆಲ್ಲಾ ಹೆಂಗಸರನ್ನು ಬೈಯುತ್ತಾ ಕಣ್ಣಿಗೆ ಕಂಡ ಕಾಂಗ್ರೆಸ್‌ನವರಿಗೆಲ್ಲಾ ಹೊಡೆದಿದ್ದಾನೆ. ಅಷ್ಟು ಸಾಲದೂಂತ ಕೆಲ ದಲಿತ ಬಿಜೆಪಿಗಳಿಗೆ ಚಿತಾವಣೆ ನೀಡಿ 'ಜಾತಿ ನಿಂದನೆ' ಕಂಪ್ಲೇಂಟ್ ಬರೆಸಿಕೊಂಡು ಈಗ ಅರೆಸ್ಟು, ಜೈಲು ಎಂದು ಕಾಂಗ್ರೆಸ್ ಕಾರ್ಯಕರ್ತರ ಶಿಕಾರಿ ಶುರು ಮಾಡಿದ್ದಾನೆ.


ಎಂ.ಟಿ.ಬಿ. ನಾಗರಾಜ್

ತಾಲ್ಲೂಕಿನ ಇಡೀ ಜನಸ್ತೋಮ ಮಲ್ಲೇಶನ ಈ ನೀಚಬುದ್ಧಿ ನೋಡಿ ರೊಚ್ಚಿಗೇಳತೊಡಗಿದೆ. ಇದಿಷ್ಟೇ ಅಲ್ಲದೇ ಬಚ್ಚೇಗೌಡನನ್ನು ಖುಷಿಪಡಿಸಲು ಹೊಸಕೋಟೆ ತಾಲ್ಲೂಕಿನ ಕೋಟೂರು, ಕೆಂಬ್ಳಿಗಾನಹಳ್ಳಿ, ದಾಸರಹಳ್ಳಿಗಳಲ್ಲೂ ತನ್ನ ಪೊಲೀಸ್ ಪವರ್ ದುರ್ಬಳಕೆ ಮಾಡಿಕೊಂಡು ಬಿಜೆಪಿ ಗೂಂಡಾಗಿರಿ ನಡೆಸಿ ಅಲ್ಲೂ ಜನರಿಗೆ ಕಿರುಕುಳ ಕೊಡುತ್ತಿದ್ದಾನೆ.

ನಾಲಾಯಕ್ ಪೊಲೀಸ್

ಪೊಲೀಸ್ ಇಲಾಖೆಯ ಮೇಲಧಿಕಾರಿಗಳಿಗೆ ಈ ಮಲ್ಲೇಶನ ಅಯೋಗ್ಯತೆಗಳು ಹಲವಾರು ಬಾರಿ ಪತ್ತೆಯಾಗಿ ಎರಡು ಸಾರಿ ಸಸ್ಪೆಂಡ್ ಮಾಡಿದ್ದಾರೆ. ಹತ್ತಾರು ಸಾರಿ ವರ್ಗಾ ಶಿಕ್ಷೆ ನೀಡಿದ್ದಾರೆ. ಆದರೂ 'ನಾಯಿ-ಬಾಲ ಯಾವತ್ತಿದ್ದರೂ ಡೊಂಕು' ಅನ್ನುವಂತೆ ಮಲ್ಲೇಶನ ಗಲೀಜು ಬುದ್ಧಿ ಬದಲಾಗಿಲ್ಲ, ಜೊತೆಗೆ ಅದಕ್ಷತೆಯ ಅಪರಾವತಾರ ಇವನು. ಕಳ್ಳಕಾಕರೊಂದಿಗೆ ಇವನಿಗೆಷ್ಟು ಸ್ನೇಹವಿದೆಯೆಂದರೆ ಈಗ್ಗೆ ಕೆಲ ದಿನಗಳ ಹಿಂದೆ ಅಕ್ರಮ ಡೀಸೆಲ್ ಸಾಗಾಣಿಕೆ ಆರೋಪದ ಮೇಲೆ ಲೋಡ್ ಲಾರಿಯೊಂದನ್ನು ಪೊಲೀಸರು ಸೀಜ್ ಮಾಡಿ ತಂದು ಸ್ಟೇಷನ್ನಿನ ಹತ್ತಿರ ನಿಲ್ಲಿಸಿದ್ದರು. ಮೊನ್ನೆ ಇಡೀ ಲಾರಿ ರಾತ್ರೋರಾತ್ರಿ ಕಣ್ಮರೆಯಾಯಿತು. ನಂತರ ಹುಡುಕಾಡಿದಾಗ ತಾಲ್ಲೂಕಿನ ಗಡಿಯಾರ ಜಂಗಮಕೋಟೆ ಬಳಿ ಲಾರಿ ಪತ್ತೆಯಾಯಿತಾದರೂ 12 ಸಾವಿರ ಲೀಟರ್ ಡೀಸೆಲ್ ಖಾಲಿಯಾಗಿತ್ತು.

ಸ್ವತಃ ಇನ್ಸ್‌ಪೆಕ್ಟರ್ ಮಲ್ಲೇಶನ ಕೈವಾಡ ಇದರಲ್ಲಿದೆ ಎಂದು ಪೊಲೀಸ್ ಸಿಬ್ಬಂದಿಯೇ ಹೇಳಿಕೊಂಡು ತಿರುಗುತ್ತಿದ್ದಾರೆ.

ಜಿಲ್ಲಾ ಎಸ್‌ಪಿ ಹಾಗೂ ರಾಜ್ಯ ಪೊಲೀಸ್ ಮುಖ್ಯಸ್ಥರು ಈ ಬಗ್ಗೆ ವಿಶೇಷ ತನಿಖೆ ನಡೆಸಬೇಕಾಗಿದೆ.

ಈಗ ಅತ್ತಿವಟ್ಟ ಗಣೇಶನ ಗಲಾಟೆಯಲ್ಲಿ ಮಲ್ಲೇಶನ ದೌರ್ಜನ್ಯದಿಂದ ನೊಂದಿರುವ ಕೆಲ ಮಹಿಳೆಯರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಗ್ರಾಮದ ಮಹಿಳೆಯರನ್ನು ಅತ್ಯಂತ ಕೀಳಾದ ಹಲ್ಕಾ ಭಾಷೆಯಲ್ಲಿ ಬೈಯ್ದು ಅವಮಾನ ಮಾಡಿರುವ ಬಗ್ಗೆ ರಾಜ್ಯ ಮಹಿಳಾ ಆಯೋಗದಲ್ಲೂ ದೂರು ದಾಖಲಾಗಿದೆ.


ಸೆಪ್ಟೆಂಬರ್ 29 ರ ಸೋಮವಾರ ಹೊಸಕೋಟೆಯಲ್ಲಿ ಇನ್ಸ್‌ಪೆಕ್ಟರ್ ಮಲ್ಲೇಶನ ವಿರುದ್ಧ ತಾಲ್ಲೂಕಿನ ಜನತೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ.

ಈ ಹಡಬೆ ಪೊಲೀಸ್ ಮಲ್ಲೇಶ ಹೊಸಕೋಟೆಯಲ್ಲೇ ಮುಂದುವರೆದರೆ ಮುಂದೆ ಕಾನೂನು ಪರಿಸ್ಥಿತಿ ಹದಗೆಡುವುದು ಖಚಿತ. ■

ಕೋಮುವಾದಿಗಳೊಂದಿಗೆ ಕೈಜೋಡಿಸಿದ ಮೈಸೂರು ಪೊಲೀಸರು!

ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಕೋಮುವಾದಿಗಳು ಅಬ್ಬರಿಸಿದಾಗ ಬಹಳಷ್ಟು ಜನ ಇದನ್ನು ತಮಾಷೆಯಾಗಿ ತೆಗೆದುಕೊಂಡಿದ್ದರೋ ಏನೋ? ಆದರೆ, ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ಅದು ಸತ್ಯವಾಗುತ್ತಿದೆ: ಎಷ್ಟರಮಟ್ಟಿಗೆ ಎಂದರೆ ಗುಜರಾತ್‌ನಲ್ಲಿ ನಡೆದ ಪ್ರಯೋಗವನ್ನು ಇಲ್ಲಿ ಅಕ್ಷರಶಃ ಯಥಾವತ್ತಾಗಿ ಅನುಕರಿಸಲು ಅವರು ಸಜ್ಜಾಗುತ್ತಿದ್ದಾರೆ.

ಗುಜರಾತ್ ನರಮೇಧದಲ್ಲಿ ದಲಿತರು, ಆದಿವಾಸಿಗಳು ಬಹುದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡಿ ಆ ಸಮುದಾಯಗಳ ಕೈಯಿಂದಲೇ ಮುಸ್ಲಿಮರನ್ನು ಕೊಲ್ಲಿಸಿ ಬ್ರಾಹ್ಮಣಶಾಹಿಗಳು ಅದರ ಮಜಾ ಅನುಭವಿಸಿದ್ದರು. ತಮ್ಮ ನರಮೇಧ ಕಾರ್ಯಕ್ರಮದಲ್ಲಿ ಪೊಲೀಸರು ಸಕ್ರಿಯವಾಗಿ ಬೆಂಬಲ ನೀಡುವಂತೆ ಅಥವಾ ಸಾಧ್ಯವಾದರೆ ಅವರೂ ಖುದ್ದಾಗಿ ಭಾಗವಹಿಸುವಂತೆ ಪೊಲೀಸರನ್ನೂ ಬ್ರೇನ್‌ವಾಷ್ ಮಾಡಿದ್ದರು. ಈ ಎಲ್ಲಾ ತಂತ್ರಗಳನ್ನು ಕರ್ನಾಟಕದಲ್ಲೂ ಅವರು ಪ್ರಾಥಮಿಕ ಹಂತದಲ್ಲಿ ಅನುಕರಿಸುತ್ತಿರುವುದನ್ನು ನಾವು ಈ ಹೊತ್ತು ನೋಡಬಹುದಾಗಿದೆ. ಕರಾವಳಿಯಲ್ಲಿ ಇತ್ತೀಚೆಗೆ ನಡೆದ ಚರ್ಚುಗಳ ಮೇಲಿನ ದಾಳಿಗಳಲ್ಲಿ ಬ್ರಾಹ್ಮಣರು ಭಾಗವಹಿಸಿದ್ದು ಕಡಿಮೆ. ದಲಿತ ಮತ್ತು ಇನ್ನಿತರ ಹಿಂದೂಗಳನ್ನೇ ಕ್ರಿಶ್ಚಿಯನ್ನರ ಮೇಲೆ ದಾಳಿಗೆ ಬಿಟ್ಟು ಅವರು ಮಜಾ ಅನುಭವಿಸುತ್ತಿದ್ದುದು ಸುಳ್ಳಲ್ಲ.



ಇನ್ನು ಪೊಲೀಸರನ್ನು ಹೇಗೆ ಅವರು ತಮ್ಮೆಡೆ ಸೆಳೆದುಕೊಳ್ಳುತ್ತಿದ್ದಾರೆ ಎಂಬುದಕ್ಕೆ ಕರಾವಳಿಯ ಗಲಭೆಗಳಲ್ಲಿ ಪೊಲೀಸರು ಕೋಮುವಾದಿಗಳ ಪಕ್ಷ ವಹಿಸಿಕೊಂಡಿದ್ದು ಒಂದು ಉದಾಹರಣೆಯಾದರೆ ಮೈಸೂರಿನಲ್ಲೂ ಪೊಲೀಸರು ಸಂಘಪರಿವಾರಿಗಳ ಸೇವೆ ಸಲ್ಲಿಸುತ್ತಿರುವುದು ಇದಕ್ಕೆ ಇನ್ನೊಂದು ಉದಾಹರಣೆ.

ಮೊನ್ನೆ ನಡೆದ ಒಂದು ಚಿಕ್ಕ ಘಟನೆಯನ್ನೇ ನೋಡಿ. ಮೈಸೂರಿನ ಪ್ರಗತಿಪರ ಚಿಂತಕರು, ಶಾಂತಿಪ್ರಿಯ ನಾಗರಿಕರು, ಬುದ್ಧಿಜೀವಿಗಳು, ಕಲಾವಿದರು ಸರಸ್ವತೀಪುರಂ 14ನೇ ಮೇನ್‌ರೋಡಿಗೆ ಹೊಂದಿಕೊಂಡಂತೆ ಇರುವ ಕುಕ್ಕರಹಳ್ಳಿ ರಸ್ತೆಬದಿಯಲ್ಲಿ ಈ ದೇಶ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಮಗನ್ನಿಸಿದ ಆಲೋಚನೆಗಳನ್ನು ಬರೆದು ಭಿತ್ತಿಚಿತ್ರಗಳನ್ನು ಅಂಟಿಸುತ್ತಾ ಬರುತ್ತಿದ್ದಾರೆ. ಕಾಶ್ಮೀರ ಸಮಸ್ಯೆಯಿರಬಹುದು, ಗುಜರಾತ್ ನರಮೇಧವಿರಬಹುದು, ನಂದಿಗ್ರಾಮ ಹತ್ಯಾಕಾಂಡವಿರಬಹುದು, ಜಾಗತೀಕರಣವಿರಬಹುದು - ಹೀಗೆ ಹತ್ತು ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಕಲಾವಿದರು ಕಾರ್ಟೂನ್ ಮೂಲಕ, ಚಿತ್ರಗಳ ಮೂಲಕ ಸೃಜನಶೀಲವಾಗಿ ತಮ್ಮ ಭಾವನೆಗಳನ್ನು ಅಲ್ಲಿ ಹೊರಗೆಡುವುತ್ತಾ ಬಂದಿದ್ದಾರೆ. ಇದು ನಿನ್ನೆ ಮೊನ್ನೆ ಪ್ರಾರಂಭವಾದ ವಿದ್ಯಮಾನವೇನಲ್ಲ, ಹಲವಾರು ವರ್ಷಗಳಿಂದಲೂ ನಡೆದುಕೊಂಡು ಬಂದಿದೆ.

ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಸಮಾಜದಲ್ಲಿ ಕೋಮುಸಾಮರಸ್ಯವನ್ನು ಪ್ರತಿಷ್ಠಾಪಿಸುವುದು ಇದರ ಮುಖ್ಯ ಉದ್ದೇಶ. ಈ ಕಾರಣಕ್ಕಾಗಿಯೇ ಯಾವುದೇ ಧರ್ಮವನ್ನಾಗಲೀ, ಜಾತಿಯನ್ನಾಗಲೀ ಅವಹೇಳನ ಮಾಡುವ ಉದ್ದೇಶವಿರುವ ಅಥವ ಯಾವುದೇ ವ್ಯಕ್ತಿಯ ಮತ್ತು ಸಮುದಾಯಕ್ಕೆ ನೋವುಂಟುಮಾಡುವ ಉದ್ದೇಶವಿರುವ ಜನರಿಗಾಗಲೀ ಅಥವಾ ಅವರ ಕೃತಿಗಳಿಗಾಗಲೀ ಅಲ್ಲಿ ಅವಕಾಶವಿಲ್ಲ. ಈತನಕ ಅಂತಹ ಘಟನೆಗಳೂ ನಡೆದಿಲ್ಲ, ಇತ್ತೀಚೆಗಂತೂ ಈ ಜಾಗ ಎಷ್ಟೊಂದು ಪ್ರಸಿದ್ಧಿ ಪಡೆದಿತ್ತು ಎಂದರೆ ಸಮಾನ ಮನಸ್ಕ ಸಂಘಸಂಸ್ಥೆಗಳ, ರಾಜಕಾರಣಿಗಳ, ಬುದ್ಧಿಜೀವಿಗಳ, ಕಲಾವಿದರ, ವಿದ್ಯಾರ್ಥಿಗಳ ಮತ್ತು ಸಾಮಾಜಿಕ ಕಾರ್ಯಕರ್ತರ ಚರ್ಚಾಕೇಂದ್ರವಾಗಿ ಮಾರ್ಪಟ್ಟಿದೆ. ಈ ರೀತಿಯಲ್ಲಿ ಜಾತ್ಯತೀತ ಮತ್ತು ಪ್ರಗತಿಪರಶಕ್ತಿಗಳು ಸಂಘಟಿತಗೊಳ್ಳುತ್ತಿರುವುದನ್ನು ಸಂಘಪರಿವಾರಿಗಳು ಗಮನಿಸಿ ಇದನ್ನು ಹೇಗಾದರೂ ತಡೆಯಬೇಕೆಂದು ತೆರೆಮರೆಯಲ್ಲಿ ಪ್ರಯತ್ನ ನಡೆಸಿದ್ದರು.

ಮೊನ್ನೆ ಕೋಮುವಾದಿಗಳ ಅಟ್ಟಹಾಸದಿಂದಾಗಿ ಇಡೀ ರಾಜ್ಯವೇ ತಲ್ಲಣಗೊಂಡಿದ್ದಾಗ ಬಾದಲ್ ಅಲಿಯಾಸ್ ನಂಜುಂಡಸ್ವಾಮಿ ಎಂಬ ಯುವ ಕಲಾವಿದ ಒಂದು ಕಲಾಕೃತಿಯನ್ನು ರಚಿಸಿ ಭಿತ್ತಿ ಪತ್ರದ ರೂಪದಲ್ಲಿ ಅಲ್ಲಿ ಅಂಟಿಸಿದ್ದ. ತ್ರಿಶೂಲಗಳಿಂದಲೇ ರಚಿತವಾದ ಶಿಲುಬೆಯಲ್ಲಿ ಯೇಸು ನೇತಾಡುತ್ತಿರುವಂತೆ ಈ ಕಲಾಕೃತಿಯಲ್ಲಿ ಆತ ತೋರಿಸಿದ್ದ. ಪಕ್ಕದಲ್ಲಿ "ಅನ್ಯ ಧರ್ಮೋ ರಕ್ಷತಿ ರಕ್ಷಿತಃ" ಹಾಗೂ "ಹಿಂದುತ್ವ ಕೈಬಿಡಿ ಶಾಂತಿಯಿಂದ ಬದುಕೋಣ" ಎಂಬ ಎರಡು ಹಿತವಚನಗಳನ್ನು ಬರೆದಿದ್ದ. ಕುಕ್ಕರಹಳ್ಳಿಯ ಸೆಕ್ಯೂಲರ್ ಟ್ರೆಡಿಶನ್‌ನಂತೆ ಈತನ ಕಲಾಕೃತಿಯಲ್ಲಿ ಕೋಮುವಾದಿ ಶಕ್ತಿಗಳಿಂದ ಈ ದೇಶದ ಜಾತ್ಯತೀತ ಮತ್ತು ಅಲ್ಪಸಂಖ್ಯಾತ ಮನಸ್ಸುಗಳಿಗೆ ಹೇಗೆ ಧಕ್ಕೆಯಾಗುತ್ತಿದೆ ಎಂಬುದು ಎದ್ದು ಕಾಣುತ್ತಿತ್ತು. ಇದನ್ನು ಕುಕ್ಕರಹಳ್ಳಿಯಲ್ಲಿ ಅಂಟಿಸಿದ ತಕ್ಷಣವೇ ಸಂಘಪರಿವಾರಿಗಳು ಅದನ್ನು ತೆಗೆದುಹಾಕುವುದಕ್ಕೆ ಪೊಲೀಸರಿಗೆ ಆದೇಶಿಸಿದರು. ಇಂತಹ ಒಂದು ಆದೇಶಕ್ಕಾಗಿಯೇ ಮೈಸೂರಿನ ಪೊಲೀಸರು ಕಾಯುತ್ತಿದ್ದರೋ ಏನೋ? ಮೊನ್ನೆ ಸೆಪ್ಟೆಂಬರ್ 26ರ ಬೆಳಗ್ಗೆ ಎಸಿಪಿ ಜಯರಾಮ್ ಅದೇನೋ ದೊಡ್ಡ ಸಾಹಸ ಮಾಡಲು ಹೊರಟಿದ್ದಾರೇನೋ ಎಂಬ ರಾಜಠೀವಿಯಲ್ಲಿ ಇಬ್ಬರು ಇನ್ಸ್‌ಪೆಕ್ಟರ್, ಎಂಟು ಡಜನ್ ಪೊಲೀಸರನ್ನು ಕಟ್ಟಿಕೊಂಡು ಬಾದಲ್ ರಚಿಸಿದ ಭಿತ್ತಿ ಚಿತ್ರವನ್ನು ತೆಗೆದುಹಾಕಲು ಬಂದ. ಅಲ್ಲಿಯೇ ಇದ್ದ ಕೆಲ ಯುವಕರು "ಯಾಕೆ ಕೀಳ್ತಿದ್ದೀರಾ? ಅದರಿಂದೇನು ತೊಂದರೆಯಾಗಿದೆ?" ಎಂದು ಎರಡು ಪುಟ್ಟ ಪ್ರಶ್ನೆಗಳನ್ನು ಕೇಳಿದ್ದೇ ಬಂತು, "ಎಸಿಪಿಗೇ ಎದುರಾಡ್ತೀರಾ?" ಅಂತ ಆ ಹುಡುಗರನ್ನು ಒದ್ದು ಠಾಣೆಗೆ ಎಳೆದೊಯ್ದಿದ್ದಾನೆ.

ಅಸಲಿಗೆ ಆ ಹುಡುಗರು ಕೇಳಿದ ಪ್ರಶ್ನೆಗೆ ಎಸಿಪಿ ಜಯರಾಮ್ ಹತ್ತಿರ ಉತ್ತರವಿರಲಿಲ್ಲ, ಸಂಘಪರಿವಾರಿಗಳು ಆದೇಶ ಮಾಡಿದ್ದಾರೆ ಎಂದು ಸತ್ಯ ಹೇಳುವ ಗಡುಸುತನ ಆತನಿಗೆಲ್ಲಿದೆ? ತಾನು ಬದ್ಧನಾಗಿರುವುದು ಈ ದೇಶದ ಸಂವಿಧಾನಕ್ಕಲ್ಲ, ಬದಲಾಗಿ ಸಂಘಪರಿವಾರಿಗಳಿಗೆ ಅನ್ನೊ ಸತ್ಯ ಹೊರಬಿದ್ದರೆ ಜನ ಕ್ಯಾಕರಿಸಿ ಉಗೀತಾರೆ ಅನ್ನೋ ಭಯ ಕೂಡ ಆತನಿಗಿಲ್ಲದಿಲ್ಲ. ಹಾಗಾಗಿ, ಆ ಹುಡುಗರು ತನ್ನಂಥ ಮಹಾನ್ ಎಸಿಪಿಗೇ ಪ್ರಶ್ನೆ ಕೇಳುವಷ್ಟರಮಟ್ಟಿಗೆ ಬೆಳೆದುಬಿಟ್ಟರೆ ಎಂದು ಅಹಮ್ಮಿನಿಂದ ಅವರನ್ನು ಠಾಣೆಗೆ ಎಳೆದೊಯ್ದಿದ್ದಾನೆ. ಕೊನೆಗೆ ಈ ಸುದ್ದಿ ಮೈಸೂರಿನ ಪ್ರಗತಿಪರರ ನಡುವೆ ಬಹುಬೇಗನೇ ಹರಡಿ ಎಲ್ಲರೂ ಪೊಲೀಸ್ ಕಮೀಷನರ್ ಪರಶಿವ ಮೂರ್ತಿಗೆ ಅಟಕಾಯಿಸಿಕೊಂಡಿದ್ದಾರೆ. ಹೆಚ್ಚುತ್ತಿರುವ ಒತ್ತಡ ನೋಡಿ ಸಂಜೆಯ ಹೊತ್ತಿಗೆ ಜಯರಾಮ್ ಆ ಹುಡುಗರಿಂದ ಮುಚ್ಚಳಿಕೆ ಪತ್ರ ಬರೆಸಿಕೊಂಡು ಬಿಟ್ಟಿದ್ದಾನೆ.

ಈ ಕಲಾಕೃತಿಯಿಂದ ಕೋಮು ಸಾಮರಸ್ಯಕ್ಕೆ ಧಕ್ಕೆಯಾಗುತ್ತದೆ, ಅದು ಪ್ರಚೋದನಾಕಾರಿಯಾಗಿದೆ ಎಂಬ ಭಂಡ ವಾದವನ್ನು ಎಸಿಪಿ ಜಯರಾಮ್ ಮುಂದಿಡುತ್ತಾನೆ. ಅಲ್ಲಿ ಕರಾವಳಿಯಲ್ಲಿ, ಇಲ್ಲಿ ಬೆಂಗಳೂರಿನಲ್ಲಿ ಭಜರಂಗಿ ಗೂಂಡಾ ಪಡೆ ಚರ್ಚುಗಳ ಮೇಲೆ ದಾಳಿ ಮಾಡಿ ಏಸುವಿನ ಮೂರ್ತಿಯನ್ನು ಒಡೆದು ಹಾಕಿದರೆ, ಮುಸ್ಲಿಮರ ಮೇಲೆ ದಾಳಿ ಮಾಡಿ ಮಕ್ಕಳು ಮರಿಗಳೆನ್ನದೆ ಅತ್ಯಾಚಾರ, ಕೊಲೆ, ಸುಲಿಗೆಗಳನ್ನು ನಡೆಸಿದರೆ, ಸದಾ ಅಲ್ಪಸಂಖ್ಯಾತ ಮುಸ್ಲಿಮ್, ಕ್ರಿಶ್ಚಿಯನ್ನರ ವಿರುದ್ಧ ವಿಷವನ್ನೇ ಕಕ್ಕಿದರೆ ಜಯರಾಮ್ ಅಂಥ ನಿಷ್ಠಾವಂತ ಪೊಲೀಸ್ ಅಧಿಕಾರಿಗಳಿಗೆ ಅದು ಬೇರೆ ಧರ್ಮದ ಸಮುದಾಯಗಳಿಗೆ ನೋವುಂಟು ಮಾಡುತ್ತದೆ ಎನ್ನಿಸುವುದಿಲ್ಲ; ಕೋಮು ಸಾಮರಸ್ಯಕ್ಕೆ ಧಕ್ಕೆ ತರುತ್ತದೆ ಎನ್ನಿಸುವುದಿಲ್ಲ; ಪ್ರಚೋದನಾಕಾರಿಯಾಗಿದೆ ಎನ್ನಿಸುವುದಿಲ್ಲ. ಬಾದಲ್ ಥರದ ಕಲಾವಿದರು ತಮ್ಮ ಜಾತ್ಯತೀತ, ಧರ್ಮನಿರಪೇಕ್ಷ ಮತ್ತು ಕೋಮುಸಾಮರಸ್ಯದ ಭಾವನೆಗಳಿಗೆ ಕಲಾಕೃತಿಗಳ ಮೂಲಕ ಅಭಿವ್ಯಕ್ತಿ ಕೊಟ್ಟಾಗ ಮಾತ್ರ ಕೋಮುಸಾಮರಸ್ಯಕ್ಕೆ ಧಕ್ಕೆ ತರುತ್ತದೆ, ಪ್ರಚೋದನಾಕಾರಿಯಾಗಿರುತ್ತದೆ. ಇಂಥ ಭಂಡರಿಗೆ ಇನ್ನೇನು ಹೇಳಬೇಕು?

ಇಬ್ಬರೂ ದಲಿತರೆ!

ಇನ್ನೊಂದು ನಾಚಿಕೆಗೇಡಿನ ವಿಚಾರ ಎಂದರೆ ಪೊಲೀಸ್ ಕಮೀಷನರ್ ಪರಶಿವಮೂರ್ತಿ ಮತ್ತು ಎಸಿಪಿ ಜಯರಾಮ್ ಇಬ್ಬರೂ ದಲಿತರಾಗಿದ್ದರೂ ಕೂಡ ದಲಿತವಿರೋಧಿ, ಬ್ರಾಹ್ಮಣವಾದಿ ಸಂಘಪರಿವಾರಿಗಳೊಂದಿಗೆ ಕೈಜೋಡಿಸುತ್ತಿರುವುದು; ಶತಶತಮಾನಗಳಿಂದ ದಲಿತರನ್ನು ಕಾಲಿನ ಕಸಕ್ಕಿಂತ ಕೀಳಾಗಿ ಕಂಡ, ದಲಿತರ ಮೇಲೆ ಹೇಳತೀರದ ದೌರ್ಜನ್ಯಗಳನ್ನು ನಡೆಸಿದ, ದಲಿತರೆಂದರೆ ಪ್ರಾಣಿಗಳಿಗಿಂತ ಕೀಳೆಂದು ಭಾವಿಸಿದ ಅದೇ ಬ್ರಾಹ್ಮಣಶಾಹಿಯ ಕಾಲು ನೆಕ್ಕುತ್ತಿರುವುದು.

ಅದರಲ್ಲೂ ಜಯರಾಮ್ ಅಂತೂ ಅದೆಷ್ಟರ ಮಟ್ಟಿಗೆ ಕುಲಗೆಟ್ಟು ಹೋಗಿದ್ದಾನೆ ಎಂದರೆ ದಲಿತರು ತಮ್ಮ ನೋವುಗಳನ್ನು ತೋಡಿಕೊಳ್ಳಲು, ತಮ್ಮ ಮೇಲೆ ದೌರ್ಜನ್ಯವೆಸಗಿದ ಮೇಲ್ಜಾತಿ ಜನರ ವಿರುದ್ಧ ದೂರು ಕೊಡಲು ಬಂದರೆ ಅವರ ಮೇಲೆಯೇ ಕೇಸು ಜಡಿಯುವಷ್ಟು ಕ್ರೂರಿಯಾಗಿ ಹೋಗಿದ್ದಾನೆ. ಆತನಿಗೆ ತನ್ನ ಸಮುದಾಯ ಅನುಭವಿಸುತ್ತಿರುವ ಕಷ್ಟ ಕಾರ್ಪಣ್ಯಗಳಿಗಿಂತ ತಾನು ದುಡ್ಡು ಮಾಡಿಕೊಳ್ಳುವುದೇ ಪ್ರಮುಖವಾಗಿಬಿಟ್ಟಿದೆ. ಬ್ರಾಹ್ಮಣರಿರಲಿ, ಒಕ್ಕಲಿಗರಿರಲಿ, ಮತ್ತಿನ್ಯಾರೇ ಇರಲಿ ದುಡ್ಡು ಕೊಟ್ಟರೆ ಸಾಕು ಅವರ ಮನೆಕಾಯುವ ನಾಯಿಯಂತಾಗಿ ಬಿಡುತ್ತಾನೆ. ದಲಿತರು ದುಡ್ಡು ಕೊಟ್ಟರೆ ಅವರ ಪರವಾಗಿಯೂ ನಿಲ್ಲುತ್ತಿದ್ದನೋ ಏನೋ? ಆದರೆ, ಈ ಹೊಟ್ಟೆಬಾಕನಿಗೆ ತಿನ್ನಿಸುವಷ್ಟು ದುಡ್ಡು ಆ ಬಡದಲಿತರಲ್ಲೆಲ್ಲಿದೆ?

ಈತನಿಗೆ ಅದೆಷ್ಟು ದುಡ್ಡಿನ ಹಸಿವಿದೆ ಎಂದರೆ ಪೊಲೀಸ್ ಇಲಾಖೆಯಲ್ಲಿ ಸಿಗುತ್ತಿರುವ ಆಮದನಿ ಸಾಕಾಗುತ್ತಿಲ್ಲ. ಅದಕ್ಕಾಗಿಯೇ ಮೈಸೂರಿನ ಲ್ಯಾಂಡ್ ಡೀಲ್‌ಗಳಿಗೆ ಕೈಹಾಕಿದ್ದಾನೆ. ಎಷ್ಟರಮಟ್ಟಿಗೆ ಎಂದರೆ ಈತ ಪೊಲೀಸ್ ಇಲಾಖೆಯಲ್ಲಿ ಎಸಿಪಿಯೋ ಅಥವ ಲ್ಯಾಂಡ್ ಡೀಲರ್‍ರೋ ಎಂಬ ಅನುಮಾನ ಕೂಡ ಮೈಸೂರಿನ ಜನರನ್ನು ಕಾಡುತ್ತಿದೆ. ಈತನ ದಗಲ್ಬಾಜಿಗಳ ಕಾರಣಕ್ಕೇನೇ ಇಲ್ಲಿಂದ ಈ ಹಿಂದೆ ಎತ್ತಂಗಡಿಯಾಗಿದ್ದ. ಆದರೆ, ಮೈಸೂರು ಎಂಬ ಹುಲುಸಾಗಿ ಬೆಳೆದಿರುವ ಹುಲ್ಲುಗಾವಲನ್ನು ಬಿಟ್ಟು ಹೋಗಲು ಆತನಿಗೆ ಮನಸ್ಸಿರಲಿಲ್ಲ. ಮೇಲಿನವರಿಗೆಲ್ಲಾ ಚೆನ್ನಾಗಿ ಮೇಯಿಸಿ ಮತ್ತೆ ಇಲ್ಲಿಗೆ ವಕ್ಕರಿಸಿಕೊಂಡಿದ್ದಾನೆ. ಈಗ ಸಂಘಪರಿವಾರಿಗಳ ಸೇವೆ ಬೇರೆ ಮಾಡುತ್ತಿರುವುದರಿಂದ ತಾನು ಮೈಸೂರಿನಲ್ಲೇ ನಿವೃತ್ತಿ ಹೊಂದುವವರೆಗೂ ಗೂಟ ಹೊಡೆದುಕೊಂಡು ಕುಳಿತಿರಬಹುದು ಎಂದು ಲೆಕ್ಕ ಹಾಕುತ್ತಿದ್ದಾನೆ. ■


ಕುವೆಂಪು ವಿವಿ:
ಭ್ರಷ್ಟಾಚಾರಿಗಳ ತಾಣ



ರಾಷ್ಟ್ರಕವಿ ಕುವೆಂಪು ಹೆಸರಿನ ವಿಶ್ವವಿದ್ಯಾಲಯ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಕೂಪವಾಗಿ ಮಾರ್ಪಟ್ಟಿದೆ. ಇದುವರೆಗೆ ಕೆಲ ಕೆಲಸಕ್ಕೆ ಬಾರದವರು, ಭ್ರಷ್ಟರು ಈ ವಿವಿಗೆ ಕುಲಪತಿಗಳಾಗಿ 'ಹೆಸರು' ಮಾಡಿದ್ದರು. ಅಂತಹವರ ಪಟ್ಟಿಗೆ ತಮ್ಮ ಹೆಸರನ್ನು ಸೇರಿಸಿಕೊಳ್ಳಲು ಹಾಲಿ ಕುಲಪತಿ ಪ್ರೊ. ಶೇರಿಗಾರ್ ಬಹಳ ಉತ್ಸುಕರಾಗಿರುವುದು ಒಂದು ದುರಂತ.

ವಿವಿಯ ಆಡಳಿತವನ್ನು ಸಂಪೂರ್ಣವಾಗಿ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ವಿಫಲರಾಗಿರುವ ಶೇರಿಗಾರ್, ಭ್ರಷ್ಟ ಅಧಿಕಾರಿಗಳನ್ನು ತಮ್ಮ ಸುತ್ತಮುತ್ತ ಇಟ್ಟುಕೊಂಡು ಅವರು ಹೇಳಿದಂತೆ ಮಾಡುತ್ತಿದ್ದಾರೆ. ಹೀಗಾಗಿ ವಿವಿಯಲ್ಲಿ ದಿನಕ್ಕೊಂದು ಅವಾಂತರ ಸಾಮಾನ್ಯವೆಂಬಂತಾಗಿದೆ.

ವಿವಿಗಿದ್ದ ಒಂದಿಷ್ಟು ಮರ್ಯಾದೆಯನ್ನು ಕಳೆಯುವಲ್ಲಿ ಈಗ ಎಲ್ಲರೂ ಪೈಪೋಟಿಗಿಳಿದಿದ್ದಾರೆಯೇ ಹೊರತು ದೂರದೃಷ್ಟಿಯಿಂದ ವಿವಿಯನ್ನು ಕಟ್ಟುವ ಬಗ್ಗೆ ಯಾರೂ ಆಸ್ಥೆ ವಹಿಸುತ್ತಿಲ್ಲ. ಈ ಹಿಂದೆ ಪ್ರಗತಿಪರ ವಲಯದಲ್ಲಿ ಹೆಸರು ಮಾಡಿದ್ದ ವಿವಿಯ ಬುದ್ಧಿಜೀವಿಗಳೆಲ್ಲಾ ಈಗ ಸುಸ್ತಾದವರಂತೆ ಮೂಲೆ ಸೇರಿದ್ದಾರೆ. ಚೆಡ್ಡಿಗಳು ದಿನಕ್ಕೊಂದು ವಿಭಾಗದ ಮೇಲೆ ಹಿಡಿತ ಸಾಧಿಸುತ್ತಾ ಕುವೆಂಪು ಸಾರಿದ ಆದರ್ಶಕ್ಕೆ ಮಸಿ ಬಳಿಯುತ್ತಿದ್ದಾರೆ. ಇದೆಲ್ಲವನ್ನು ನೋಡಿಕೊಂಡು ಸುಮ್ಮನಿರುವ ಶೇರಿಗಾರ್ ಮಾತ್ರ ಭ್ರಷ್ಟರನ್ನು ಬೆಂಬಲಿಸುವುದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡಿದ್ದಾರೆ. ಇದು ಹೊಸ ವಿವಿಯಾಗಿರುವುದರಿಂದ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಇದನ್ನೇ ತಮ್ಮ ಭ್ರಷ್ಟಾಚಾರಕ್ಕೆ ಮಾರ್ಗವನ್ನಾಗಿ ಕೆಲವರು ಮಾಡಿಕೊಳ್ಳುತ್ತಿದ್ದಾರೆ.



ಮಹಾದೇವನ್

ಇಲ್ಲಿನ ಆಡಳಿತವಂತೂ 'ತೊಘಲಕ್' ಆಡಳಿತದಂತಿದೆ. ವಿವಿಗೆ ಸೇರಿದ ಕಾಲೇಜುಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ದಿನ ಪರೀಕ್ಷೆ ನಡೆಸಲಾಗುತ್ತಿದೆ. ಆದರೆ ನೀಡುವುದು ಮಾತ್ರ ಒಂದೇ ಪ್ರಶ್ನೆ ಪತ್ರಿಕೆ. ಇದು ಬೆಳಕಿಗೆ ಬಂದು ಗಲಾಟೆ ನಡೆದರೆ ಮತ್ತೊಂದು ದಿನ ಪರೀಕ್ಷೆ. ಮೌಲ್ಯಮಾಪನದ ಕಥೆ ಕೇಳುವುದೇ ಬೇಡ. ರಾಸಾಯನ ಶಾಸ್ತ್ರದ ಉಪನ್ಯಾಸಕರು 'ಗ್ರಂಥಾಲಯ ಮತ್ತು ಮಾಹಿತಿ' ಅಧ್ಯಯನ ವಿಭಾಗದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುತ್ತಾರೆ. ಇಂತಹ ವಿಚಿತ್ರಗಳು ಕುವೆಂಪು ವಿವಿಯಲ್ಲಿ ಮಾತ್ರ ಸಾಧ್ಯ!

ಕರ್ನಾಟಕ ರಾಜ್ಯ ವಿವಿ ಕಾಯ್ದೆ 73 ಹಾಗೂ 74 ಕೆಎಸ್‌ಇಎ ಸಂಖ್ಯೆ 4 ಸೆಕ್ಷನ್ 27ರ ಅನ್ವಯ ಈ ರೀತಿ ಮಾಡುವುದು ಶಿಕ್ಷಾರ್ಹ ಅಪರಾಧ. ಆದರೆ ಕುಲಪತಿಗಳು, ಬೇರೆ ವಿಭಾಗದ ಪ್ರಶ್ನೆ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿದ ಉಪನ್ಯಾಸಕ ಕೆ.ಎಂ. ಮಹಾದೇವನ್‌ಗೆ ಕೇವಲ 500ರೂ ದಂಡ ವಿಧಿಸಿ ಪ್ರಕರಣಕ್ಕೆ ತೆರೆ ಎಳೆದಿದ್ದಾರೆ. ಎಕ್ಸ್‌ಟರ್ನಲ್ ಎಕ್ಸಾಮಿನರ್ ಆಗಿದ್ದ ಮೈಸೂರು ವಿವಿಯ ಶಶಿಕಾಂತ್ ಕೂಡ ಬಚಾವಾಗಿದ್ದಾನೆ. ಇವರು ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಬರೆದಿದ್ದ 125 ವಿದ್ಯಾರ್ಥಿಗಳ ಭವಿಷ್ಯವೇನು ಎಂಬುದನ್ನು ಶೇರಿಗಾರರೇ ಹೇಳಬೇಕು.

ಮಹಾದೇವನ್ ತಾನು ದೊಡ್ಡ 'ರೌಡಿ'ಎಂಬಂತೆ ವಿವಿಯಲ್ಲಿ ವಿದ್ಯಾರ್ಥಿಗಳನ್ನು ಹೆದರಿಸಿಕೊಂಡು ಓಡಾಡುತ್ತಿದ್ದು, ಶೇರಿಗಾರ್‌ರನ್ನೂ ಹೆದರಿಸಿ ಈ ಪ್ರಕರಣದಿಂದ ಬಚಾವಾಗಿರಬಹುದೆಂದು ವಿದ್ಯಾರ್ಥಿಗಳು ಮಾತನಾಡಿಕೊಳ್ಳುತ್ತಿದ್ದಾರೆ. ಇನ್ನು ಅನಗತ್ಯವಾಗಿ ಉತ್ತರ ಪತ್ರಿಕೆಗಳ ಪುಟಗಳ ಸಂಖ್ಯೆಯನ್ನು 20 ರಿಂದ 40ಕ್ಕೆ ಏರಿಸಿ, ವಿವಿಗೆ ಸುಮಾರು 70 ಲಕ್ಷ ನಷ್ಟವನ್ನುಂಟುಮಾಡಲಾಗಿದೆ. ಇಂತಹದ್ದನ್ನೆಲ್ಲ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ ಎಂಬಂತ ಸ್ಥಿತಿ ನಿರ್ಮಾಣವಾಗಿದೆ. ಇನ್ನು ಶುಲ್ಕ ವಸೂಲಾತಿಯಲ್ಲೂ ವಿವಿ ದರೋಡೆಕೋರರ ತಂಡದಂತೆಯೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಉದಾಹರಣೆಗೆ ಫಾರ್ಮಸೆಟಿಕಲ್ ಕೆಮಿಸ್ಟ್ರಿಗೆ 62 ಸಾವಿರ ಶುಲ್ಕ ಫಿಕ್ಸ್ ಮಾಡಲಾಗಿದೆ. ಬೇರೆ ವಿವಿಗಳಲ್ಲಿ ಈ ಶುಲ್ಕ ಕೇವಲ 31 ಸಾವಿರ. ಕುವೆಂಪು ವಿವಿಯಲ್ಲಿ ಬಡ ವಿದ್ಯಾರ್ಥಿಗಳು ದುಪ್ಪಟ್ಟು ಶುಲ್ಕ ನೀಡಿ ಓದಬೇಕಂತೆ.

ಗೋಲ್‌ಮಾಲ್ ಗೋಪಾಲ!

ಕುಲಸಚಿವರ ಆಪ್ತರಾಗಿರುವ ದಾಸ್ತಾನು ಖರೀದಿ ವಿಭಾಗದ ಉಪಕುಲಸಚಿವ ಕೆ.ಎಸ್. ಗೋಪಾಲಕೃಷ್ಣ ತಿನ್ನುವುದನ್ನೇ ಕಾಯಕಮಾಡಿಕೊಂಡಿದ್ದಾನೆ. ಈ ವಿವಿಯಲ್ಲಿಯೇ ಕೆಲಸ ಮಾಡಿರುವ ಶೇರಿಗಾರ್‌ಗೆ ತಾನು ಯಾರೊಂದಿಗೆ ಇರಬೇಕು, ಏನು ಕೆಲಸ ಮಾಡಬೇಕು ಎಂಬುದು ಗೊತ್ತಿರದ ವಿಷಯವೇನೂ ಅಲ್ಲ. ಅದರೂ ಅವರೇಕೆ ಹೀಗೆ ವರ್ತಿಸುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ.

'ಗೋಲ್‌ಮಾಲ್' ಗೋಪಾಲಕೃಷ್ಣ ಬಿಲ್‌ಗಳನ್ನು ನೇರವಾಗಿ ವಿಲೇವಾರಿ ಮಾಡುತ್ತಿದ್ದು, ವಿವಿಯ ನಿಯಮಾವಳಿಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರುತ್ತಿದ್ದಾನೆ. ದಾವಣಗೆರೆ ಸ್ನಾತಕೋತ್ತರ ಕೇಂದ್ರಕ್ಕೆಂದು ವಸ್ತುಗಳನ್ನು ಖರೀದಿಸಿದ್ದರಿಂದ ಹಿಡಿದು, ಸಾಫ್ಟ್‌ವೇರ್‌ಗಳ ಖರೀದಿ, ಉತ್ತರ ಪತ್ರಿಕೆಗಳ ಟೆಂಡರ್ ಹೀಗೆ ಎಲ್ಲದರಲ್ಲಿಯೂ ಅವ್ಯವಹಾರ ನಡೆದಿದೆ. ಟೆಂಡರ್ ಕರೆಯದೇ ಕೋಟ್ಯಂತರ ರೂ. ಖರೀದಿ ನಡೆಸಲಾಗಿದೆ. ಲೆಕ್ಕ ಕೇಳುವ ಅಧೀಕ್ಷಕ ಕೃಷ್ಣಮೂರ್ತಿಗೆ ಕಿರುಕುಳ ನೀಡಿ, ಬಾಯಿ ಮುಚ್ಚಿಸುವ ಪ್ರಯತ್ನ ನಡೆಯುತ್ತಿದೆ.

ಅನುದಾನದ ಲೂಟಿ

ವಿವಿಗೆ ನೀಡಲಾಗುತ್ತಿರುವ ವಿವಿಧ ಅನುದಾನವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಇದಕ್ಕೆ ಉದಾಹರಣೆ ಎಂದರೆ ದಾವಣಗೆರೆಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಟೆಕ್ವಿಪ್ ಅನುದಾನ ದುರ್ಬಳಕೆಯಾಗಿರುವುದು. ಸುಮಾರು 9 ಕೋಟಿ ರೂ ವೆಚ್ಚದ, ಈ ವಿಶ್ವಬ್ಯಾಂಕ್ ಸಹಾಯದ ಯೋಜನೆಯ ಅನುಷ್ಠಾನದಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ. ಜೆರಾಕ್ಸ್ ಯಂತ್ರ, ಪ್ರಿಂಟರ್, ಲ್ಯಾಪ್‌ಟಾಪ್ ಇತ್ಯಾದಿಗಳನ್ನು ಬೇಕಾಬಿಟ್ಟಿಯಾಗಿ ಖರೀದಿ ಮಾಡಲಾಗಿದೆ. ಗುಣಮಟ್ಟವಿಲ್ಲದ ಲ್ಯಾಪ್‌ಟಾಪ್‌ಗಳನ್ನು 58 ಸಾವಿರ ರೂ. ನೀಡಿ ಖರೀದಿಸಲಾಗಿದ್ದು ಮಾರುಕಟ್ಟೆಯ ಬೆಲೆ ಗೊತ್ತಿದ್ದವರ ಪ್ರಕಾರ ಒಂದು ಲ್ಯಾಪ್‌ಟಾಪ್‌ಗೆ 15ರಿಂದ 20 ಸಾವಿರ ಹೆಚ್ಚು ದುಡ್ಡು ನೀಡಲಾಗಿದೆ. ಇಂತಹ 49 ಲ್ಯಾಪ್‌ಟಾಪ್ ಖರೀದಿಸಲಾಗಿದೆ ಎಂದು ಸರ್ಕಾರಿ ಲೆಕ್ಕ ಪರಿಶೋಧಕರ ವಿಶೇಷ ತನಿಖಾ ತಂಡವೇ ಹೇಳಿದೆ. ಖರೀದಿ ನಿಯಮ ಉಲ್ಲಂಘಿಸಿರುವುದನ್ನು ತನಿಖಾ ತಂಡ ಸಾಬೀತುಪಡಿಸಿದೆ. ಇನ್ನು ವಾಹನಗಳನ್ನು ಬಾಡಿಗೆಗೆ ತೆಗೆದುಕೊಂಡು ಲೂಟಿ ಮಾಡಲಾಗಿದೆ. ಇಲ್ಲಿ ಒಬ್ಬನೇ ವ್ಯಕ್ತಿ ಏಕಕಾಲದಲ್ಲಿ ಎರಡು ವಾಹನಗಳನ್ನು ಬಳಸಿ 'ಸಾಧನೆ'ಯನ್ನೂ ಮಾಡಿದ್ದಾನೆ.

ಬಿದ್ದೀತೆ ವಿವಿಗೆ ಬೀಗ?

ಈ ವಿವಿಯ ಕ್ಯಾಂಪಸ್ ಇರುವುದು ಭದ್ರಾ ಅಭಯಾರಣ್ಯ ಪ್ರದೇಶದಲ್ಲಿ. ಕೇಂದ್ರದ ವನ್ಯಜೀವಿ ಮಂಡಳಿಯ ಷರತ್ತಿನಂತೆ ವಿವಿಗೆ ಜಾಗ ನೀಡಲಾಗಿತ್ತು. ಆದರೆ ವಿವಿಯ ಆಡಳಿತ ಮಂಡಳಿ ಈ ಷರತ್ತನ್ನೆಲ್ಲಾ ಉಲ್ಲಂಘಿಸುತ್ತಲೇ ಬಂದಿದೆ. ಅಭಿವೃದ್ಧಿಯ ಹೆಸರಿನಲ್ಲಿ ಬೇಕಾಬಿಟ್ಟಿಯಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಕಳೆದ ಒಂಬತ್ತು ವರ್ಷಗಳಿಂದ ಗುತ್ತಿಗೆಯನ್ನು ನವೀಕರಿಸಿಕೊಳ್ಳಲಾಗಿಲ್ಲ. ಎರಡು ಕೋಟಿ ರೂ. ನೆಲಬಾಡಿಗೆಯನ್ನು ಕಟ್ಟಬೇಕಾಗಿದೆ. ವನ್ಯಜೀವಿ ಕಾಯ್ದೆ ಜಾರಿಗೆ ಈಗ ಅಂತಾರಾಷ್ಟ್ರೀಯ ಒತ್ತಡವಿದೆ. ಈ ಹಿನ್ನೆಲೆಯಲ್ಲಿ ವನ್ಯಜೀವಿ ಮಂಡಳಿಯೇನಾದರೂ ಕಠಿಣ ಕ್ರಮ ತೆಗೆದುಕೊಂಡರೆ ವಿವಿಗೆ ಬೀಗ ಬೀಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಜ್ವಲಂತ ಸಮಸ್ಯೆಯ ಬಗ್ಗೆ ವಿವಿ ತಲೆಕೆಡಿಸಿಕೊಳ್ಳದೆ, ಹಣ ಬರುವ ಅಭಿವೃದ್ಧಿ ಮಂತ್ರವನ್ನು ಮಾತ್ರ ಜಪಿಸುತ್ತಿದೆ.

ಇದೆಲ್ಲಾ ವಿವಿಯಲ್ಲಿನ ಆಡಳಿತದ ಅವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಕುವೆಂಪು ವಿಚಾರಧಾರೆಗೆ ಮಸಿ ಬಳಿಯುತ್ತಾ ವೈಚಾರಿಕವಾಗಿ ಅಧಃಪತನದತ್ತ ಸಾಗುತ್ತಿರುವ ಕುವೆಂಪು ವಿವಿ ಈಗ ಭ್ರಷ್ಟರ, ಅವಕಾಶವಾದಿಗಳ ತಾಣವಾಗಿರುವುದು ದುರಾದೃಷ್ಟಕರ.

■ ಕುಮಾರ್ ಬುರಡಿಕಟ್ಟಿ



ಕಲಬುರ್ಗಿ: ಮಹಾನರಕ ಪಾಲಿಕೆಯ ಹಂದಿಗಳು

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಯ ಕುರಿತು ಸುಖಾಸುಮ್ಮನೆ ಬೊಂಬಡಾ ಬಜಾಯಿಸುವವರು ಒಂದು ಸಲ ಕಲಬುರ್ಗಿ ಮಹಾನಗರ ಪಾಲಿಕೆಯನ್ನು ಗಮನಿಸಬೇಕು. ಈ ಪಾಲಿಕೆಗೆ ಹೆಗ್ಗಣದಂತೆ ಗಂಟುಬಿದ್ದು ಇಲ್ಲಿರುವ ಎಲ್ಲವನ್ನೂ ತಿಂದು ಗೂಳಿಯಂತೆ ಗುಟುರು ಹಾಕುತ್ತಿರುವವನೇ ಎಸ್.ಸಿ.ಮುಧೋಳ ಎಂಬ ಪಾಲಿಕೆಯ ಆಯುಕ್ತ.

2004 - 2005 ರ ಸಾಲಿನ ಸಿ.ಎಂ ಪ್ಯಾಕೇಜ್ ಹಾಗೂ ರಾಜ್ಯ ಹಣಕಾಸು ಆಯೋಗದಿಂದ ಬಂದ ಒಟ್ಟು ಹತ್ತು ಕೋಟಿ ಹಣದಲ್ಲಿ ಅಲ್ಲಲ್ಲಿ ತಿಪ್ಪೆ ಸಾರಿಸಿದ್ದು ಬಿಟ್ಟರೆ ನಿಮಗೆ ಏನೊಂದು ಕಾಣಸಿಗುವುದಿಲ್ಲ. ನಗರದ ನಲವತ್ತಾರು ರೋಡುಗಳು, 2 ಸಿ.ಸಿ. ರಸ್ತೆಗಳು, 11 ಫುಟ್‌ಪಾತ್, 24 ಕಡೆ ಹೈಮಾಸ್ಟ್ ದೀಪ, 5 ದೊಡ್ಡ ಗಟಾರದ ನಾಲೆಗಳು ರಿಪೇರಿ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದೆಲ್ಲ ಕಾಗದದಲ್ಲಿ ಮಾತ್ರ. ವಾಸ್ತವವಾಗಿ ಎಲ್ಲೂ ಸಮರ್ಪಕವಾಗಿ ಕೆಲಸಗಳೇ ನಡೆದಿಲ್ಲ.



ರಾಜ್ಯ ಹಣಕಾಸು ಆಯೋಗದ ಹಣವಾಗಲಿ, ಮುಖ್ಯಮಂತ್ರಿ ಪ್ಯಾಕೇಜಿನ ಹಣವಾಗಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಮುಖಾಂತರ ನೇರವಾಗಿ ಬರುವುದರಿಂದ ಕಲಬುರ್ಗಿಯ ಆಗಿನ ಜಿಲ್ಲಾಧಿಕಾರಿ ಭ್ರಷ್ಟ ಅಂಜುಮ್ ಪರ್ವೇಜ್‌ನ ಮೂಲಕವೇ ಈ ಎಲ್ಲಾ ಅವ್ಯವಹಾರಗಳು ನಡೆದಿವೆ.

ಈ ಬಗ್ಗೆ ಅತ್ಯಂತ ಸಮರ್ಪಕ ದಾಖಲೆಗಳ ಸಮೇತ ರಾಜು ಕುಳಗೇರಿ ಎಂಬ ಸಾಮಾಜಿಕ ಕಾರ್ಯಕರ್ತ ಹೋರಾಟಕ್ಕೆ ಇಳಿದಿದ್ದಾನೆ. ಕೋಟ್ಯಂತರ ಹಣದ ದುರುಪಯೋಗದ ಭ್ರಷ್ಟ ವಹಿವಾಟನ್ನು ಕುರಿತು ತನಿಖೆ ನಡೆಸುವಂತೆ ಸಂಬಂಧಿಸಿದವರನ್ನು ಒತ್ತಾಯಿಸುತ್ತಲೆ ಬಂದಿದ್ದಾನೆ. ಆದರೆ ಸರಕಾರದ ಎಲ್ಲಾ ಆಯಕಟ್ಟಿನ ಜಾಗಗಳಲ್ಲಿ ಭ್ರಷ್ಟರ ಕೂಟವೆ ಇರುವುದರಿಂದ ಅವೆಲ್ಲವೂ ವ್ಯರ್ಥ ಪ್ರಯತ್ನಗಳಾಗಿವೆ.

ಆದರೆ ಪಂಕಜಕುಮಾರ ಪಾಂಡೆ ಎಂಬ ಕನಿಷ್ಠ ಜವಾಬ್ದಾರಿ ಅರಿತ ಜಿಲ್ಲಾಧಿಕಾರಿ ಗುಲಬರ್ಗಾಕ್ಕೆ ಬಂದ ತರುವಾಯ ಮೇಲಿನ ಎಲ್ಲಾ ಕಾಮಗಾರಿಗಳ ತನಿಖೆ ನಡೆಸಲಾಗಿದೆ. ಕಲಬುರ್ಗಿಯ ನಗರಪಾಲಿಕೆಗೆ ಕಮೀಷನರ್‌ಗಳಾಗಿದ್ದ ತಿಪ್ಪೇಶಿ, ಮಹ್ಮದ ಸೈಯದ ಅಫಜಲ, ಎಸ್.ಸಿ. ಮುಧೋಳ, ಎ.ಎಸ್.ರೈಕರ್ ಹಾಗೂ ಪಾಲಿಕೆಯ ಇಂಜಿನಿಯರ್‌ಗಳಾದ ಬಂಡೆಪ್ಪ ಆಕಳ, ವಿ. ಮೋಹನ, ಮಹ್ಮದ ಶಂಸುದ್ದೀನ್, ಎಂ.ಎ. ಮಾಜೀದ, ಮಲ್ಲಿಕಾರ್ಜುನ ಅಲ್ಲಿಪುರ ಮತ್ತು ಕಿರಿಯ ಅಭಿಯಂತರರುಗಳಾದ ಕೆ. ರಾಜಕುಮಾರ, ಆರ್.ಪಿ.ಜಾಧವ, ಎಂ.ಹಾಜಿ ಮತ್ತು ಗೋಪಾಲ ಎಂಬ 14 ಜನ ಭ್ರಷ್ಟರ ವಿರುದ್ಧ ಪಾಂಡೆಯವರು ಕರುಡು ಆರೋಪ ಪಟ್ಟಿ (ಕ್ರ.ಸಂ4.ಜಿನಕೋ/ಯೋಜನೆ /163/ 2007-08/8270/1 Date : .22-2-2008) ಸಲ್ಲಿಸಿದ್ದಾರೆ.

ಆದರೆ ಭ್ರಷ್ಟ ವಹಿವಾಟೆ ಸರಕಾರದ ಮೂಲ ನೀತಿ ಎಂದು ತಿಳಿದುಕೊಂಡಿರುವ ನಾಮರ್ಧ ರಾಜಕಾರಣಿಗಳಾಗಲಿ, ದಪ್ಪ ಚರ್ಮದ ಅಧಿಕಾರಿಗಳಾಗಲಿ ಈವರೆಗೂ ದೋಷಾರೋಪ ಪಟ್ಟಿಯಲ್ಲಿರುವವರ ವಿರುದ್ಧ ಒಂದು ಸಣ್ಣ ಕ್ರಮವನ್ನೂ ಕೈಗೊಂಡಿಲ್ಲ. ಬದಲಾಗಿ ಸಂಬಂಧಿಸಿದ ಭ್ರಷ್ಟ ಅಧಿಕಾರಿಗಳೆಲ್ಲ ಮತ್ತೆ ಮತ್ತೆ ಪುಷ್ಕಳವಾಗಿ ಮೇಯಲು ಉನ್ನತ ದರ್ಜೆಯ ಹುದ್ದೆಗೆ ಬಡ್ತಿ ಪಡೆಯುತ್ತಿದ್ದಾರೆ.




ಚಂದ್ರಶೇಖರ ಪಾಟೀಲ ರೇವೂರ

ತಮಾಷೆ ಎಂಥದೆಂದರೆ ಯಾವ ಕಮೀಷನರ್ ಈ ಇಡೀ ಭ್ರಷ್ಟ ವಹಿವಾಟಿನ ಮುಖ್ಯಸ್ಥನೆಂದು ಆರೋಪ ಪಟ್ಟಿ ಸಲ್ಲಿಸಲಾಗಿದೆಯೋ ಅದೇ ಎಸ್. ಸಿ.ಮುಧೋಳ ಮತ್ತೆ ಬಂದು ಕಲಬುರ್ಗಿ ಮಹಾನಗರ ಪಾಲಿಕೆಗೆ ವಕ್ಕರಿಸಿಕೊಂಡಿದ್ದಾನೆ. ಕಾಲಾನುಕಾಲದಿಂದಲೂ ಇಂಜನಿಯರುಗಳು ಇಲ್ಲೇ ಬೀಡುಬಿಟ್ಟಿದ್ದಾರೆ. ಯಾವುದೇ ಸರಕಾರ ಬಂದರೂ ಗೂಟ ಹೊಡಕೊಂಡವರಂತೆ ಕುಳಿತುಕೊಂಡಿದ್ದಾರೆ. ಇವರೆಲ್ಲರ ಬೆನ್ನ ಹಿಂದಿನ ಬೆಳಕಾಗಿ ಬಿಜೆಪಿಯ ಸ್ಥಳೀಯ ಶಾಸಕ ಚಂದ್ರಶೇಖರ ಪಾಟೀಲ ರೇವೂರ ಎಂಬ ಹಬಡ ಹೆಬ್ಬಂಡೆಯಾಗಿ ನಿಂತಿದ್ದಾನೆ. ಮುಧೋಳ ತಿಂದ ಅಮೇಧ್ಯದ ಚೂರು ರೇವೂರ ಬಾಯಿಗೂ ಅಂಟಕೊಂಡಿದೆ ಎಂಬುದು ಇದರಿಂದ ನಿಚ್ಚಳವಾಗುತ್ತದೆ.

ಮಾತೆತ್ತಿದರೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಯಾಗಿಲ್ಲ ಎಂದು ಪತ್ರಿಕಾ ಹೇಳಿಕೆ ನೀಡುವ ವೈಜನಾಥ ಪಾಟೀಲರಾಗಲಿ, ಹೈದ್ರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಲಕ್ಷ್ಮಣ ದಸ್ತಿಯಾಗಲಿ ಇತ್ತ ಕಣ್ಣೆತ್ತಿಯೂ ನೋಡಿಲ್ಲ. ಸರಕಾರದಿಂದ ಹಣ ಬಿಡುಗಡೆ ಮಾಡಿಸುವುದೆ ಮುಖ್ಯ ಕೆಲಸವಾಗದೆ, ಸರಕಾರದಿಂದ ಬಿಡುಗಡೆಯಾದ ಹಣ ಸದ್ಬಳಕೆಯಾಗುತ್ತಿದೆಯೆ ಎಂದು ನೋಡುವ ಚಿಕಿತ್ಸಕ ದೃಷ್ಟಿಯೂ ಬೇಕಾಗುತ್ತದೆ. ಇಲ್ಲದೆ ಹೋದರೆ ಈ ಹೈದ್ರಾಬಾದ್ ಕರ್ನಾಟಕಕ್ಕೆ ಹಣ ಕೊಟ್ಟ ವ್ಯಕ್ತಿ ಕೋಡಂಗಿ, ಅದನ್ನೆಲ್ಲ ತಿಂದು ಅರಗಿಸಿ ಕೊಂಡವನೇ ವೀರಭದ್ರ ಎಂಬಂತಾಗುತ್ತದೆ.

■ ವಿಶ್ವಾರಾಧ್ಯ ಸತ್ಯಂಪೇಟೆ



ಪಾಂಡವಪುರ: ಶಾಸಕ ಪುಟ್ಟರಾಜು ಫ್ಯಾಮಿಲಿಯ ಗೂಂಡಾಗಿರಿ!

ಇತ್ತೀಚೆಗೆ ರಾಜಕಾರಣವೇ ಒಂದು ದಂಧೆಯಾಗಿದೆ. ಒಬ್ಬ ರಾಜಕಾರಣಿಯ ಹಿಂದೆ ಒಂದೊಂದು ಅಕ್ರಮ ದಂಧೆ ಇದ್ದೇ ಇರುತ್ತದೆ. ಮೇಲುಕೋಟೆ (ಪಾಂಡವಪುರ) ಶಾಸಕ ಪುಟ್ಟರಾಜು ಮತ್ತು ಆತನ ಫ್ಯಾಮಿಲಿಯು ಕಲ್ಲು ಕ್ವಾರಿಯ ದಂಧೆಯನ್ನು ಮಾಡುತ್ತಿದೆ. ಬರೀ ಅಷ್ಟೇ ಆಗಿದ್ದರೆ ಮಂಡ್ಯದ ಜನ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಈ ಕ್ವಾರಿ ಕೆಲಸದಿಂದ ಮಂಡ್ಯದ ಜೀವನಾಡಿ ಕೆಆರ್‌ಎಸ್ ಡ್ಯಾಂನ ಬುಡಕ್ಕೇ ಡೈನಾಮೆಟ್ ಇಟ್ಟಂತಾಗಿರುವುದು ಮಾತ್ರ ಮಂಡ್ಯ ಜಿಲ್ಲೆಯ ಜನರ ಎದೆ ಝಲ್ ಎನಿಸಿದೆ.

ಕೊಲೆ ಬೆದರಿಕೆ!

ಕೆಆರ್‌ಎಸ್ ಕಟ್ಟಿದಾಗ ಎತ್ತಂಗಡಿಯಾದ ಜನಕ್ಕೆ ಪುನರ್ವಸತಿಯನ್ನು ಬೇರೆ ಬೇರೆ ಕಡೆ ಕಲ್ಪಿಸಿ ಅವರೆಲ್ಲ ಈಗ ಸೆಟ್ಲ್ ಆಗಿದ್ದಾರೆ. ಆದರೆ ಕೆಆರ್‌ಎಸ್ ಡ್ಯಾಂ ಕಟ್ಟಲು ಕಲ್ಲು ಹೊಡೆದುಕೊಟ್ಟಿದ್ದ ಬಡ ಜನರಿಗೆ ಡ್ಯಾಂ ಪಕ್ಕದಲ್ಲೇ ಇರುವ ಅಮೃತಮಹಲ್ ಕಾವಲ್ ಭೂಮಿಯಲ್ಲಿ ಮೈಸೂರು ಮಹಾರಾಜರು ಕಾವೇರಿಪುರ ಎಂಬ ಊರು ಮಾಡಿಕೊಟ್ಟಿದ್ದರು. ಇವತ್ತು ಈ ಕಾವೇರಿಪುರದಲ್ಲಿ 200 ಬಡ ಕುಟುಂಬಗಳಿದ್ದು ಸುಮಾರು 2000 ಜನಸಂಖ್ಯೆ ಇದೆ.

ಮೂಲತಃ ಬೋವಿ ಜನಾಂಗದವರಾದ ಈ ಜನರು ಸಣ್ಣ ಕ್ವಾರಿಗಳಿಂದ ಜಲ್ಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ಗಾಂಧಿವಾದಿ ಹಲಗೇಗೌಡ, ಕಟ್ಟೇರಿ ರಾಜಗೋಪಾಲ್, ಕೆಂಪೇಗೌಡ ಮತ್ತು ಪುಟ್ಟಣ್ಣಯ್ಯರಂತಹ ಸಜ್ಜನರು ಈ ಹಿಂದೆ ಪಾಂಡವಪುರ ಕ್ಷೇತ್ರದಿಂದ ಶಾಸಕರಾದಾಗ ಇವರಿಗೆ ಯಾವುದೇ ತೊಂದರೆ ಇರಲಿಲ್ಲ. ಹಿಂದಿನಿಂದಲೂ ಜೋಪಡಿಗಳಲ್ಲಿ ವಾಸಿಸುತ್ತಿದ್ದ ಇವರುಗಳಿಗೆ ಶಾಸಕ ಕೆಂಪೇಗೌಡರ ಕಾಲದಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಮನೆ ಕಟ್ಟಿಸಿ ಕೊಟ್ಟಿದ್ದರು.

ಆದರೆ ಚಿನಕುರಳಿ ಪುಟ್ಟರಾಜು ಎಂಎಲ್‌ಎ ಆದ ಮೇಲೆ ತಮ್ಮ ಆವಾಸವನ್ನು ತೊರೆಯುವ ಪರಿಸ್ಥಿತಿ ಇಲ್ಲಿನ ಜನರಿಗೆ ಬಂದಿದೆ. ಅನಾಥವಾಗಿ ಬಿದ್ದಿದ್ದ ಅಮೃತಮಹಲ್ ಕಾವಲ್ ಭೂಮಿಯಲ್ಲಿ ಸಣ್ಣ ಕ್ವಾರೆ ಮಾಡುತ್ತಾ ಕೈಯಿಂದ ಕಲ್ಲು ಹೊಡೆಯುತ್ತಿದ್ದವರನ್ನು ನೋಡಿದ ಪುಟ್ಟರಾಜು ಫ್ಯಾಮಿಲಿ ಅಲ್ಲಿ ದುಡ್ಡಿನ ಗಣಿಯನ್ನು ಕಂಡಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅವರ ಅಣ್ಣನ ಮಕ್ಕಳಾದ ಅಶೋಕ ಮತ್ತು ಕುಮಾರರ ಹೆಸರಿನಲ್ಲಿ ಲೈಸೆನ್ಸ್ ತೆಗೆದುಕೊಂಡಿದ್ದಾರೆ. ನಂತರ ಯಂತ್ರಗಳ ಮೂಲಕ ಕ್ವಾರಿ ನಡೆಸಲು ಆರಂಭಿಸಿದ್ದಾರೆ.

ಪಿತ್ರಾರ್ಜಿತ ಆಸ್ತೀನಾ?

ಕಾವೇರಿಪುರದ ಅಮೃತಮಹಲ್ ಕಾವಲ್‌ನ ಇಡೀ 1,094 ಎಕರೆ ಭೂಮಿ ತಮ್ಮ ವಶಕ್ಕೆ ಬರಬೇಕಾದರೆ ಅಲ್ಲಿನ ಕಲ್ಲು ಒಡ್ಡರನ್ನು ಓಡಿಸಿದರೆ ಮಾತ್ರ ಸಾಧ್ಯ ಎಂಬುದು ಅವರ ಲೆಕ್ಕಾಚಾರ. ಲೈಸೆನ್ಸ್ ಪಡೆದ ಪ್ರಾರಂಭದಲ್ಲಿ ಸಣ್ಣ ಸಣ್ಣ ಕ್ವಾರಿಗಳನ್ನು ಮಾಡಿಕೊಂಡಿದ್ದ ದಲಿತ ಬೋವಿ ಜನಾಂಗದವರನ್ನು 10-12 ಸಾವಿರ ಕೊಟ್ಟು ಜಾಗ ಖಾಲಿ ಮಾಡಿಸಿದರು. ನಂತರದಲ್ಲಿ ಪುಟ್ಟರಾಜು ಎರಡನೆ ಬಾರಿ ಶಾಸಕ ಆದ ಮೇಲೆ ಬಡವರು ಸಣ್ಣಪುಟ್ಟ ಕ್ವಾರಿಗಳನ್ನು ಹೊಂದುವುದೇ. ಅಪರಾಧವೆಂಬಂತಾಗಿದೆ. ತಮ್ಮ ಜಾಗಗಳನ್ನು ಎಂಎಲ್‌ಎ ಫ್ಯಾಮಿಲಿಗೆ ಬಿಟ್ಟುಕೊಡದೆ ಉಳಿಗಾಲವಿಲ್ಲ ಎಂಬ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ.


ಇಲ್ಲಿ ಜನರ ಬಗ್ಗೆ ಕಾಳಜಿಗಳನ್ನಿಟ್ಟುಕೊಂಡು ರಾಜಕೀಯ ಮಾಡುತ್ತಿದ್ದವರು ದಿವಂಗತರಾಗಿ ಬಹಳಷ್ಟು ವರ್ಷಗಳಾಗಿವೆ. ರೈತ ಚಳವಳಿಯ ನಾಯಕರನ್ನು ಹೇಗೂ ಚುನಾವಣೆಯಲ್ಲಿ ಸೋಲಿಸಿಯಾಗಿದೆ. ಇನ್ನು ಯಾರಿಗೆ ತಾನೇ ಹೆದರಬೇಕು ಎಂಬ ಇರಾದೆ ಪುಟ್ಟರಾಜುವಿನದ್ದು. ಕಾವೇರಿಪುರದ ಕೃಷ್ಣ, ವಾಸುದೇವ, ಈಶ್ವರ, ಶಂಕರ್, ಧನೇಂದ್ರ ಎಂಬ ದಲಿತ ಬೋವಿ ಜನಾಂಗದವರು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ತಲಾ 1 ಎಕರೆ 30 ಗುಂಟೆಗೆ ಲೈಸೆನ್ಸ್ ಮಾಡಿಸಿಕೊಂಡು ಕೆಲಸ ಶುರು ಮಾಡಲು ಹೋದರು. ಆದರೆ ಪುಟ್ಟರಾಜುವಿನ ಅಣ್ಣನ ಮಕ್ಕಳಾದ ಅಶೋಕ ಮತ್ತು ಕುಮಾರ್ ಎಂಬ ಪುಂಡರು ತಮ್ಮ ಗೌಡಿಕೆಯ ಗತ್ತಿನಿಂದ "ಬಡ್ಡಿ ಮಕ್ಕಳಾ, ನಮ್ಮ ಮನೇಲಿ ಜೀತ ಮಾಡೋ ಜಾತೀವು. ನಮ್ಮ ಸಮ ಕ್ವಾರೆ ನಡೆಸುತ್ತೀರಾ? ಕಾವೇರಿಪುರದಿಂದ ಎಲ್ಲರೂ ಗಂಟು ಮೂಟೆಕಟ್ಟದರೆ ಬದುಕುತ್ತೀರಾ. ಇಲ್ಲವಾದರೆ ಏನು ಮಾಡಬೇಕೆಂದು ನಮಗೆ ಗೊತ್ತು?" ಎಂದಿದ್ದಾರೆ. ಹಿಟಾಚಿ ಯಂತ್ರ ತಂದು ನಿಮ್ಮ ಮೇಲೆ ಬಿಡುತ್ತೇವೆ ಎಂದು ಓಡಾಡಿಸಿದ್ದಾರೆ. ಪ್ರತಿದಿನ ಜಲೆಟಿನ್ ಕಡ್ಡಿ ಹಾಕಿ ಬಂಡೆ ಸ್ಫೋಟಿಸುವ ಇವರು ಏನು ಬೇಕಾದರೂ ಮಾಡಿಯಾರು ಎಂದು ಜನ ಹೆದರಿದ್ದಾರೆ.



ಗುರುಪ್ರಸಾದ್

ಎಂಎಲ್‌ಎ ಬೆಂಬಲಕ್ಕೆ ಪೊಲೀಸರು

ಸಹಜವಾಗಿಯೇ ಇಲ್ಲಿನ ಜನರು ರೈತಸಂಘದ ಪುಟ್ಟಣ್ಣಯ್ಯನವರ ಹತ್ತಿರ ಹೋಗಿ ಸಹಾಯ ಬೇಡಿದ್ದಾರೆ. ಹುಂಗರಹಳ್ಳಿ ಜೀತ ಪ್ರಕರಣವನ್ನು ಹೊರಜಗತ್ತಿಗೆ ಪರಿಚಯಿಸಿದ್ದ ರೈತಸಂಘದವರು ಈ ವಿಷಯವನ್ನು ಕೈಗೆತ್ತಿಕೊಂಡಿದ್ದಾರೆ. ಇಲ್ಲಿ ಎಂಎಲ್‌ಎ ಮನೆಯವರ ಗೂಂಡಾಗಿರಿಗೆ ಬಲಿಯಾದವರು ಅದೆಷ್ಟೋ ಜನ. ಆದರೆ ಪುಟ್ಟಣ್ಣಯ್ಯ ಮತ್ತು ದಸಂಸ ನಾಯಕ ಗುರುಪ್ರಸಾದ್ ಕೆರಗೋಡು ಅವರ ಬೆಂಬಲವಿದ್ದುದರಿಂದ ಮಾತ್ರ ಈ ಜನ ಪೊಲೀಸ್ ಸ್ಟೇಷನ್ ಮೆಟ್ಟಲು ಹತ್ತಿದ್ದಾರೆ. ಕೊಲೆ ಬೆದರಿಕೆ, ಅಟ್ರಾಸಿಟಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಕೇಸು ಬುಕ್ ಮಾಡುವ ಬದಲು ಸರ್ಕಲ್ ಇನ್ಸ್‌ಪೆಕ್ಟರ್ ನರಸಿಂಹಯ್ಯನೆಂಬ ವ್ಯಕ್ತಿ ಸೀದಾ ಪುಟ್ಟರಾಜುವಿಗೆ ಫೋನ್ ಮಾಡಿದ್ದಾರೆ. ಇಂದು ಅಶೋಕ ಮತ್ತು ಕುಮಾರರೇ ಸ್ಟೇಷನ್‌ಗೆ ಬಂದು ಅಮೇದ್ಯವನ್ನು ನರಸಿಂಹಯ್ಯನ ಜೇಬಿಗಿಳಿಸಿದ್ದಾರೆ.



ಶ್ರೀನಿವಾಸ್

ಸರ್ಕಲ್ ಇನ್ಸ್‌ಪೆಕ್ಟರ್ ನರಸಿಂಹಯ್ಯ ಖಾಕಿ ತೊಟ್ಟುಕೊಂಡಿದ್ದರೂ ಪುಟ್ಟರಾಜುವಿನ ಚೇಲಾಗಿರಿ ಮಾಡಿಕೊಂಡಿರುವುದಂತೂ ಸತ್ಯ. ಈ ವ್ಯಕ್ತಿ ಉಂಡ ಮನೆಗೆ ದ್ರೋಹ ಬಗೆಯುತ್ತಾನೆಯೇ? ಆದರೆ ರೈತಸಂಘ ಮತ್ತು ದಸಂಸದ ಒತ್ತಾಸೆ ಈ ಕೇಸಿನ ಹಿಂದೆ ಇದೆಯೆಂದು ಗೊತ್ತಿದ್ದುದರಿಂದ ಅನಿವಾರ್ಯವಾಗಿ ಎಫ್‌ಐಆರ್ ಹಾಕಿದ್ದಾರೆ. ಆದರೆ ಅಟ್ರಾಸಿಟಿ ಕೇಸು ಕುರಿತಂತೆ ಎಫ್‌ಐಆರ್ ದಾಖಲಿಸಿಕೊಂಡಿದ್ದರೂ ಅವರುಗಳನ್ನು ಬಂಧಿಸುವ ಉಸಾಬರಿಗೆ ಇಲ್ಲಿಯತನಕ ಹೋಗಿಲ್ಲ.

ಲಾರಿ ಡ್ರೈವರ್ ಕುಬೇರನಾದದ್ದು

ನೋಡಲು ಪುಟ್ಟರಾಜು ಬಹಳ ಸಭ್ಯನಂತೆ ಪೋಸು ಕೊಡುತ್ತಾರೆ. ಸಾಹಿತಿಗಳು, ಕಲಾವಿದರು ಮತ್ತು ಪತ್ರಕರ್ತರನ್ನು ಕರೆಸಿ ಕಾರ್ಯಕ್ರಮಗಳನ್ನು ನಡೆಸುವುದರಿಂದ ಈತ ಸಜ್ಜನ ಎಂದೇ ಬಹಳಷ್ಟು ಜನ ಭಾವಿಸಿದ್ದಾರೆ. ಆದರೆ ಪುಟ್ಟರಾಜುವಿನ ಅಣ್ಣನ ಮಕ್ಕಳು "ತಾಕತ್ತಿದ್ದರೆ ನಮ್ಮನ್ನು ಬಂಧಿಸಿ" ಎಂದು ಪೊಲೀಸರಿಗೇ ಹೇಳುತ್ತಾರೆಂದರೆ ಅವರಿಗೆ ಆ ಗಮ್ಮತ್ತು ಬಂದಿರುವುದೇ ಪುಟ್ಟರಾಜುವಿನಿಂದು ಎಂಬುದು ಸ್ಪಷ್ಟವಾಗುತ್ತದೆ.

ಹಿಂದೊಮ್ಮೆ ಸಾಮಾನ್ಯ ಲಾರಿ ಡ್ರೈವರ್ ಆಗಿದ್ದ ಪುಟ್ಟರಾಜು ಇಂದು ತ್ರಿಪುರ ಸುಂದರಿ ಥಿಯೇಟರ್, ಚಿನಕುರಳಿಯ ಪೆಟ್ರೋಲ್ ಬ್ಯಾಂಕ್, ಮೈಸೂರಿನ ವಿಜಯನಗರದಲ್ಲಿ ಸೈಟುಗಳು, ಸಂಬಂಧಿಕರಿಗೆ ಕೊಡಿಸಿರುವ ದುಬಾರಿ ಕಾರುಗಳು ಇತ್ಯಾದಿಗಳು ಬೆವರು ಸುರಿಸಿ ದುಡಿದ ದುಡ್ಡಿನಿಂದ ಬಂದದ್ದಲ್ಲ. ಇವರು ಶಾಸಕರಾದ ಮೇಲೆ ಪಾಂಡವಪುರ ಅಭಿವೃದ್ಧಿ ಕಾಣದಿದ್ದರೂ, ಪುಟ್ಟರಾಜು ಫ್ಯಾಮಿಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಇವತ್ತು ಸಂಪತ್ತಿನಲ್ಲಿ ಪ್ರಭಾವಿ ಸಚಿವರಾಗಿದ್ದ ಚೆಲುವರಾಯಸ್ವಾಮಿಗೇ ಪುಟ್ಟರಾಜು ಸೆಡ್ಡು ಹೊಡೆಯುತ್ತಾರೆ ಎಂದು ಬಲ್ಲವರು ಹೇಳುತ್ತಾರೆ.

ಕಾವೇರಿಪುರ ಕ್ವಾರಿಯಿಂದ ಪ್ರತಿ ದಿನ 120ರಿಂದ 130 ಲಾರಿ ಲೋಡು ಜಲ್ಲಿ ಮಾರಾಟವಾಗುತ್ತದೆ. ಇದೊಂದರಿಂದಲೇ ತಿಂಗಳಿಗೆ ಕೋಟಿಗಳ ಲೆಕ್ಕದಲ್ಲಿ ಹಣ ಬರುತ್ತದೆ. ಇಂತಹ ಹಡಬೆ ಸಂಪಾದನೆಗಳೆಲ್ಲವೂ ಸೇರಿ ಪುಟ್ಟರಾಜು ಫ್ಯಾಮಿಲಿಯ ಒಟ್ಟು ಸಂಪತ್ತು 500 ಕೋಟಿಗಳಷ್ಟಾಗುತ್ತದೆ ಎನ್ನುವುದು ಅವರ ಆಪ್ತವಲಯದ ಗುಸುಗುಸು. ಮೇಲುಕೋಟೆಯಿಂದ ಕನ್ನಂಬಾಡಿ



ಪುತ್ತೂರಿನಲ್ಲಿ ಚಡ್ಡಿ ಪೈಲ್ವಾನರು ಆಡಿದ್ದೇ ಆಟ

ಉಪ್ಪಿನಂಗಡಿಯ ಸೌಹಾರ್ದ ಬಾಳ್ವೆಗೆ ಮುಕುಟ ಮಣಿಯಂತಿರುವುದು ಸರಕಾರಿ ಪದವಿಪೂರ್ವ ಕಾಲೇಜು. ಹಿಂದೂ-ಮುಸ್ಲಿಮರು ಸಹೋದರತೆಯಿಂದಲೇ ವಿದ್ಯಾಭ್ಯಾಸ ಕಲಿಯುತ್ತಿರುವ ಈ ಕಾಲೇಜಿನಲ್ಲಿ ಇದೀಗ ಇಡೀ ಉಪ್ಪಿನಂಗಡಿಯ ಕೋಮು ಸೌಹಾರ್ದತೆಯ ಮಧುರ ವಾತಾವರಣಕ್ಕೆ ಹುಳಿ ಹಿಂಡುವ ಹುನ್ನಾರವೊಂದಕ್ಕೆ ವೇದಿಕೆ ಸಿದ್ಧವಾಗುತ್ತಿದೆ.

ಪುತ್ತೂರು ತಾಲ್ಲೂಕಿನಲ್ಲಿ ನೇತ್ರಾವತಿ ಮತ್ತು ಕುಮಾರಧಾರಾ ನದಿಗಳು ಬೆರೆತು ಒಂದಾಗುವ ಸಂಗಮ ಕ್ಷೇತ್ರ ಉಪ್ಪಿನಂಗಡಿ. ಇದು ದಕ್ಷಿಣದ ಕಾಶಿ ಎಂಬ ಹೆಗ್ಗಳಿಕೆ ಪಡೆದಿದ್ದು ಜಾತಿ, ಮತ, ಭೇದವಿಲ್ಲದ ಸೌಹಾರ್ದ ತಾಣವೆಂಬ ಹಿರಿಮೆಗೂ ಪಾತ್ರವಾಗಿದೆ. ಬಾಬರಿ ಮಸೀದಿ ಪ್ರಕರಣದ ನಂತರದ ಗಲಭೆಯಿರಲಿ, ಕರಾವಳಿಯಲ್ಲಿ ಇತ್ತೀಚಿನ ದಿನಗಳಲ್ಲಿ ನಿತ್ಯ ನಿರಂತರವಾಗಿರುವ ನಡೆಯುತ್ತಿರುವ ಕೋಮುಗಲಭೆಗಳಿರಲಿ, ಇದ್ಯಾವುದೂ ತಮಗೆ ಸಂಬಂಧಪಟ್ಟೇ ಇಲ್ಲವೆಂಬಂತೆ ತಣ್ಣಗಿದ್ದು ಹಿಂದೂ-ಮುಸ್ಲಿಂ ಭಾಯಿ ಭಾಯಿಗೆ ದಿಟ್ಟ ನಿದರ್ಶನವಾಗಿದ್ದ ಊರು ಉಪ್ಪಿನಂಗಡಿ.

ಇಂತಹ ಉಪ್ಪಿನಂಗಡಿಯ ಸೌಹಾರ್ದ ಬಾಳ್ವೆಗೆ ಮುಕುಟ ಮಣಿಯಂತಿರುವುದು ಸರಕಾರಿ ಪದವಿ ಪೂರ್ವ ಕಾಲೇಜು. ಈ ಪದವಿ ಪೂರ್ವ ಕಾಲೇಜಿಗೆ ಪತ್ರಕರ್ತರ ಕಾರ್ಖಾನೆ ಎಂಬ ಹೆಗ್ಗಳಿಕೆಯೂ ಇದೆ. ಇವತ್ತು ನಾಡಿನ ವಿವಿಧ ಪತ್ರಿಕೆಗಳಲ್ಲಿ ದುಡಿಯುತ್ತಿರುವ ಪತ್ರಕರ್ತರ ಪೈಕಿ ಲೆಕ್ಕಹಾಕಿದರೆ ಉಪ್ಪಿನಂಗಡಿಯ ದೊಡ್ಡ ಹಿಂಡೇ ಇದೆ. ಹಿಂದೂ-ಮುಸ್ಲಿಮರು ಸಹೋದರತೆಯಿಂದಲೇ ವಿದ್ಯಾಭ್ಯಾಸ ಕಲಿಯುತ್ತಿರುವ ಈ ಕಾಲೇಜಿನಲ್ಲಿ ಇದೀಗ ಇಡೀ ಉಪ್ಪಿನಂಗಡಿಯ ಕೋಮು ಸೌಹಾರ್ದತೆಯ ಮಧುರ ವಾತಾವರಣಕ್ಕೆ ಹುಳಿ ಹಿಂಡುವ ಹುನ್ನಾರವೊಂದಕ್ಕೆ ವೇದಿಕೆ ಸಿದ್ಧವಾಗುತ್ತಿದೆ.

ಸ್ಥಳೀಯ ಗಣ್ಯರಾದ ದಿ|| ವೇಣುಗೋಪಾಲ ರಾಮನಾಯ್ಕ, ಕೃಷ್ಣರಾಜ ಶೆಣೈಯಂತಹ ಹಿರಿಯರ ಪರಿಶ್ರಮದಿಂದ ಸಾಕಾರಗೊಂಡ ಉಪ್ಪಿನಂಗಡಿ ಪ.ಪೂ. ಕಾಲೇಜು ಕಳೆದ ವರ್ಷವಷ್ಟೇ ಸುವರ್ಣ ಮಹೋತ್ಸವವನ್ನು ಆಚರಿಸಿತ್ತು. ಅಂದು ಸ್ಥಾಪಿಸಲಾದ ಕಾಲೇಜು ಅಭಿವೃದ್ಧಿ ಸಮಿತಿ ಇವತ್ತು ಬಿಜೆಪಿ ಬೆಟರ್‌ಮೆಂಟ್ ಕಮಿಟಿಯಂತಾಗಿ ಹೋಗಿದೆ. ಹಿಂದೂ-ಮುಸ್ಲಿಂ-ಕ್ರೈಸ್ತರೆನ್ನದೆ ನಮ್ಮ ಊರಿನ ಕಾಲೇಜು ಎಂಬ ಅಭಿಮಾನ ದಿಂದ ಜನರಿದ್ದರೆ, ಅವರ ನಡುವಿನ ಈ ಸಲುಗೆ ಮತ್ತು ಉಪ್ಪಿನಂಗಡಿಯ ಈ ಸೌಹಾರ್ದತೆಯನ್ನು ಸಹಿಸಲಾಗದ ದ.ಕ.ಜಿಲ್ಲೆಯ ಚಡ್ಡಿ ಪಟಾಲಂ ಈಗ ಈ ಸರಕಾರಿ ಕಾಲೇಜನ್ನೇ ಆರೆಸ್ಸೆಸ್ ಆಡುಂಬೋಲ ಮಾಡಲು ಹೊರಟಿ ದ್ದಾರೆ.

ಅವರು ಯೋಜಿಸಿರುವಂತೆಯೇ ಎಲ್ಲವೂ ನಡೆದರೆ ಬರುವ ಅಕ್ಟೋಬರ್ 10 ರಂದು (ಅಂದರೆ ಪಿಯುಸಿ ಮಧ್ಯಂತರ ಪರೀಕ್ಷೆ ಮುಗಿದ ಮರುದಿನದಿಂದ) 10 ದಿನದ ಆರೆಸ್ಸೆಸ್‌ನ ಬೈಠಕ್ ಕ್ಯಾಂಪ್ ಈ ಕಾಲೇಜಿನ ಆವರಣದಲ್ಲೇ ನಡೆಯಲಿದೆ. ಈಗಾಗಲೇ ಅದಕ್ಕೆ ಬೇಕಾದ ಎಲ್ಲಾ ಪೂರ್ವ ತಯಾರಿಗಳು ನಡೆದಿವೆ. ಬೆಟರ್‌ಮೆಂಟ್ ಕಮಿಟಿಯ ಅಧ್ಯಕ್ಷರು ಮತ್ತು ಶಾಸಕರು ರಾಷ್ಟ್ರೀಯ ಸ್ವಯಂ ಸೇವಾಸಂಘದ ಬೈಠಕ್‌ಗೆ ಸ್ಥಳಾವಕಾಶ ಕೋರಿ ಡಿಡಿಪಿಐಗೆ ಕೊಟ್ಟ ಅರ್ಜಿಗೆ ಅನುಮತಿಯೂ ಸಿಕ್ಕಿದೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ದಕ್ಷಿಣಕನ್ನಡ ಜಿಲ್ಲೆಯ ಅನಧಿಕೃತ ಉಸ್ತುವಾರಿ ಮಂತ್ರಿಯೇ ಆಗಿರುವ ಕಲ್ಲಡ್ಕ ಪ್ರಭಾಕರ ಭಟ್ಟ ಎಂಬ ಚಡ್ಡಿಯ ನೇತೃತ್ವದಲ್ಲಿ ಈಗ ಪ್ರತಿನಿತ್ಯ ಸಂಜೆ 7 ಗಂಟೆಯ ನಂತರ ಕಾಲೇಜಿನ ಆವರಣದಲ್ಲೇ ಬೈಠಕ್‌ನ ಪೂರ್ವ ಸಿದ್ಧತೆಗಳನ್ನು ಕುರಿತ ಮೀಟಿಂಗುಗಳು ಭರದಿಂದ ನಡೆಯುತ್ತಿವೆ. ಸಾವಿರಾರು ಆರೆಸ್ಸೆಸ್ ಕಾಲಾಳುಗಳು ಸೇರಿ ನಡೆಯಲಿರುವ ಈ ಹತ್ತು ದಿನದ ಬೈಠಕ್ ಸಂದರ್ಭದಲ್ಲಿ ಕಾಲೇಜಿನ ಪ್ರಿನ್ಸಿಪಾಲರೂ ಅತ್ತಕಡೆ ಸುಳಿಯುವಂತಿಲ್ಲ. ಸದರಿ ಕಾಲೇಜಿನಲ್ಲಿ ಈ ಹಿಂದೆ ಶಾಂತಿ ಸಂಘವಿತ್ತು ಎಂಬುವವರು



ಯುವರೆಗೂ ಒಂದೇ ಸೀಟ್ (ಬಂಡೆ) ತೊಂಬಿರುವ ತೆಯ ನಾಲಕ್ಕು ಪುಟ್ಟರಾಜು ಫ್ಯಾಮಿಲಿ ಹಿಡಿದಿದೆ. ಬಂಡೆಗೆ 70-80 ಅಡಿ ರಿಗ್ ಮಾಡಿ ಬಾಂಬಿಟ್ಟು ಸ್ಟ್ ಮಾಡಿದರೆ ಅಕ್ಕಪಕ್ಕದ ಊರುಗಳಿಂದ ಹಿಡಿದು ತ್ತುಮುತ್ತಲಿನ ಸುಮಾರು 20 ಊರುಗಳು ನಡುಗುತ್ತವಂತೆ. ಶೇಷವಾಗಿ ಈ ಕ್ವಾರಿಯಿಂದ ಕೆಆರ್‌ಎಸ್ ಡ್ಯಾಮಿಗೆ ರುವ ದೂರ ಕೇವಲ 3 ಕಿ.ಮೀ ಮಾತ್ರ. ಇಂತಹ ಪಾಯವಿದ್ದರೂ, ಗಣಿ ಮತ್ತು ಭೂ ವಿಜ್ಞಾನ ಲಾಖೆಯವರೇನು ಕತ್ತೆ ಕಾಯುತ್ತಿದ್ದಾರಾ?

ಇಂತಹ ಶಾಸಕನ ದರ್ಬಾರಿನ ಮುಂದೆ ಕಾವೇರಿ ಂಥ ಸಾಮಾನ್ಯ ಬೋವಿಗಳು ಯಾವ ಲೆಕ್ಕ? ಹಾಗಾಗಿ ಲೋಕ ಮತ್ತು ಕುಮಾರರನ್ನು ಪೊಲೀಸರು ಇವತ್ತಿಗೂ ಂಧಿಸಿಲ್ಲ, ಕೇಳಿದರೆ "ಇನ್ನೂ ವಿಚಾರಣೆ ಮಾಡಬೇಕು" ಂದು ತಿಪ್ಪೆ ಸಾರಿಸುತ್ತಿದ್ದಾರೆ. ರೈತಸಂಘದ ನೇತೃತ್ವದಲ್ಲಿ ವರಿಬ್ಬರನ್ನು ಬಂಧಿಸಬೇಕು" ಎಂದು ಪ್ರತಿಭಟನೆ ಮಾಡ ಯಿತು. ಆದರಿಂದ ಏನೂ ಪ್ರಯೋಜನವಾಗಲಿಲ್ಲ. ವಲಿಗೆ ಜನತಾದಳದ ಕಾರ್ಯಕರ್ತರನ್ನು ಕರೆತಂದು ತಿ ಪ್ರತಿಭಟನೆ ನಡೆಸಲಾಯಿತು. "ಜಾತಿ ನಿಂದನೆಯೇ ಡೆದಿಲ್ಲ, ಯಾರನ್ನೂ ಬಂಧಿಸಬೇಕಾಗಿಲ್ಲ" ಎಂಬುದು ಪ್ರತಿ ಪ್ರತಿಭಟನಾಕಾರರ ಒತ್ತಾಯವಾಗಿತ್ತು.

ಇಲ್ಲಿನ ದಲಿತರ ಪರಿಸ್ಥಿತಿ ಹೀಗೆ ಆಗುವಲ್ಲಿ ದಲಿತ ಮುಖಂಡರ ಕೊಡುಗೆಯೂ ಇದೆ. 'ಪುಟ್ರಾಜಣ್ಣ' ಎಂದು ವರ ಹಿಂದೆ ಮುಂದೆ ಓಡಾಡಿಕೊಂಡಿರುವ .ಬಿ.ಶ್ರೀನಿವಾಸ್, ಅದಕ್ಕಾಗಿ ಜಿಲ್ಲಾ ದಲಿತ ಸಂಘರ್ಷ ಮಿತಿಯನ್ನೇ ಹೋಳು ಮಾಡಿದರು. ಒಂದೆಡೆ ಪೂರ್ಣವಾಗಿ ಜಾತ್ಯತೀತ ಜನತಾದಳದ ಕಾರ್ಯಕರ್ತರೇ ಗಿರುವ ಶ್ರೀನಿವಾಸ್, ಇನ್ನೊಂದೆಡೆ ದಸಂಸ ಬ್ಯಾನರ್ ಪ ಇಟ್ಟುಕೊಂಡಿದ್ದಾರೆ. ಈಗಲಾದರೂ ದಲಿತ ಬೋವಿ ನಾಂಗದ ಬದುಕಿಗೆ ಕೊಳ್ಳಿ ಇಡುತ್ತಿರುವ ಪುಟ್ಟರಾಜುವಿನ ಂದೆ ಇರುವುದರ ಬಗ್ಗೆ ಅವರು ಆತ್ಮಪರೀಕ್ಷೆ ಮಾಡಿಕೊಳ್ಳುವುದು ಒಳಿತು.

ಪುಟ್ಟರಾಜು ಪಾಠ ಕಲಿಯಬೇಕಿದೆ

ತಾನು ಎಲ್ಲಿಂದ ಹೇಗೆ ಇಲ್ಲಿಯವರೆಗೆ ಬಂದೆ ಎಂಬುದನ್ನು ಪುಟ್ಟರಾಜು ನೋಡಿಕೊಳ್ಳಬೇಕು. ಹಣದ ಮದದಲ್ಲಿ ತನ್ನ ಕುಟುಂಬ ಏನು ಮಾಡಿದರೂ ನಡೆಯುತ್ತದೆ ಎಂದು ಅಟ್ಟಹಾಸ ಮೆರೆಯಬಾರದು. ಪುಟ್ಟಣ್ಣಯ್ಯನವರ ವಿರುದ್ಧ ತಾನು ಮತ್ತು ತನ್ನ ಬೆಂಬಲಿಗರು ಆಗಾಗ ಬಾಯಿಗೆ ಬಂದದ್ದನ್ನು ಮಾತಾಡುವುದನ್ನೇ ಕಾಯಕ ಮಾಡಿಕೊಂಡಿರುವುದನ್ನು ಬಿಟ್ಟು, ತನ್ನ ಅಣ್ಣನ ಮಕ್ಕಳಿಗೆ ಲಗಾಮು ಹಾಕುವುದನ್ನು ಮೊದಲು ಮಾಡಲಿ. ಅನ್ಯಾಯಕ್ಕೆ ಬಲಿಯಾಗಿರುವ ಇಲ್ಲಿನ ಬೋವಿ ಜನಾಂಗದವರ ಪರವಾಗಿ ಜಿಲ್ಲಾಡಳಿತ ಕೂಡಲೇ ನ್ಯಾಯ ದೊರಕಿಸಿಕೊಳ್ಳಬೇಕಿದೆ.

■ ವರದಿಗಾರ



ಬೂದನಗುಡ್ಡದ ಬಸವಣ್ಣನ ಸನ್ನಿಧಿಯಲ್ಲಿ ಇಸ್ಮಾಯಿಲ್ ಆರುಂಧತಿ ಬಂಧಿ

ಹುಬ್ಬಳ್ಳಿ ಜಿಟ್ಸ್

ಒಂದೆಡೆ ಸಂಘಪರಿವಾರದ ಚೆಡ್ಡಿಗಳು ಇಡೀ ರಾಜ್ಯಕ್ಕೇ ಕೋಮು ದಳ್ಳುರಿ ಹಚ್ಚಿ ಚಳಿ ಕಾಯಿಸಿಕೊಳ್ಳುತ್ತಿದ್ದರೆ ಅತ್ತ ಧಾರವಾಡದಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಆರುಂಧತಿ ಮತ್ತು ಮುಸ್ಲಿಮ್ ಧರ್ಮಕ್ಕೆ ಸೇರಿದ ಇಸ್ಮಾಯಿಲ್ ಎಂಬ ಯುವಜೋಡಿ ಜಾತಿ, ಧರ್ಮಗಳ ಗಡಿಗಳನ್ನು ದಾಟಿ ಅಂತರ್‌ಧರ್ಮೀಯ ವಿವಾಹವಾಗುವುದರ ಮೂಲಕ ಕೋಮುದ್ವೇಷಕ್ಕೆ ಜಾತ್ಯತೀತ ಮೌಲ್ಯಗಳನ್ನು ಮುಖಾಮುಖಿಯಾಗಿಟ್ಟಿದ್ದಾರೆ. ಕೋಮುದ್ವೇಷವೇ ರಾಜ್ಯವಾಳುತ್ತಿರುವ ಈ ಹೊತ್ತಿನ ಸಂದರ್ಭದಲ್ಲಿ ಇಂತಹ ಆದರ್ಶ ವಿವಾಹಗಳು ಹಿಂದೆಂದಿಗಿಂತಲೂ ಹೆಚ್ಚು ಅವಶ್ಯವಿರುವುದೇನೋ ನಿಜ.

ಆದರೆ, ಇಂತಹ ವಿವಾಹಗಳನ್ನು ಪ್ರೋತ್ಸಾಹಿಸಬೇಕಾದ ಸರ್ಕಾರ, ಪೊಲೀಸರು ಈಗ ಈ ಜೋಡಿಯ ಹಿಂದೆ ಬಿದ್ದು ಶತಾಗತಾಯವಾಗಿ ಅವರನ್ನು ಬೇರ್ಪಡಿಸುವುದಕ್ಕೆ ಪ್ರಯತ್ನಿಸುತ್ತಿರುವುದು, ಹುಡುಗನ ಮೇಲೆ ಕಿಡ್ನಾಪ್ ಕೇಸ್ ದಾಖಲಿಸಿ ಜೈಲಿಗಟ್ಟಲು ಸಂಚು ರೂಪಿಸುತ್ತಿರುವುದು, ರಕ್ಷಣೆ ಕೊಡಬೇಕಾದ ಪೊಲೀಸರೇ ತಿರುಗಿ ಬಿದ್ದಿರುವುದರಿಂದ ಅವರಿಂದ ಬಚಾವಾಗಲು ಈ ಜೋಡಿ ಕಳ್ಳರಂತೆ ತಲೆಮರೆಸಿಕೊಂಡು ಓಡಾಡುವ ಅನಿವಾರ್ಯತೆಗೆ ದೂಡಲ್ಪಟ್ಟಿರುವುದು ಒಂದು ದುರಂತವೇ ಸರಿ.

ನಡೆದಿದ್ದಿಷ್ಟು:

ಹುಬ್ಬಳ್ಳಿಯ ಸರ್ಕಾರಿ ಐಟಿಐನಲ್ಲಿ ಜೆಟಿಓ ಆಗಿ ಕಾರ್ಯನಿರ್ವಹಿಸುತ್ತಿರುವ ಸವದತ್ತಿ ಮೂಲದ ಮುಸ್ಲಿಮ್ ಯುವಕ ಇಸ್ಮಾಯಿಲ್ ಹಾಗೂ ಇವರ ಮನೆಯ ಪಕ್ಕದಲ್ಲಿಯೇ ಇರುವ ಹಿಂದೂ ಯುವತಿ ಅರುಂಧತಿಯ ನಡುವೆ ಐದಾರು ವರ್ಷಗಳ ಹಿಂದೆಯೇ ಪ್ರೇಮಾಂಕುರವಾಗಿತ್ತು. ಇಸ್ಮಾಯಿಲ್‌ಗೆ ಸರ್ಕಾರಿ ಉದ್ಯೋಗದ ಭದ್ರತೆಯಿದ್ದರೆ ಆರುಂಧತಿಯು ಬಿಕಾಂ ಮುಗಿಸಿರುವುದರಿಂದ ಎಲ್ಲಾದರೂ ಕೆಲಸ ಸಿಗುವ ಭರವಸೆಯಿದೆ. ತಮ್ಮ ಆರು ವರ್ಷಗಳ ಸುದೀರ್ಘ ಪ್ರೇಮಕ್ಕೆ ಮದುವೆಯ ಮೂಲಕ ಒಂದು ಅರ್ಥಪೂರ್ಣ ತಿರುವು ಕೊಡವುದಕ್ಕೆ ಅವರಿಬ್ಬರು ನಿರ್ಧರಿಸಿದರು.

ಇಬ್ಬರೂ ಬೇರೆ ಬೇರೆ ಧರ್ಮೀಯರಾಗಿದ್ದುದರಿಂದ ಇಬ್ಬರ ಮನೆಯಲ್ಲೂ ಸಹಜವಾಗಿ ಈ ಮದುವೆಗೆ ವಿರೋಧ ವ್ಯಕ್ತವಾಯಿತು. ಆದರೆ, ಜಾತಿ, ಧರ್ಮಗಳ ಕಟ್ಟುಪಾಡುಗಳನ್ನು ಧಿಕ್ಕರಿಸಿಯಾದರೂ ಸರಿ ಮದುವೆಯಾಗಲೇಬೇಕೆಂದು ನಿರ್ಧರಿಸಿದ್ದ ಈ ಜೋಡಿ ಬೂದನ ಗುಡ್ಡದ ಬಸವಣ್ಣನ ಸನ್ನಿಧಿಯಲ್ಲಿ ಮದುವೆಯಾಗಿಯೇಬಿಟ್ಟರು. ಹನ್ನೆರಡನೇ ಶತಮಾನದಲ್ಲಿ ಜಾತಿ-ಧರ್ಮಗಳ ಕಟ್ಟುಪಾಡುಗಳನ್ನು ಧಿಕ್ಕರಿಸಿ ಜಾತ್ಯತೀತ ಮೌಲ್ಯಗಳ ಬುನಾದಿಯ ಮೇಲೆ ವೈಚಾರಿಕ ಕ್ರಾಂತಿಯನ್ನೇ ನಡೆಸಿದ ಕ್ರಾಂತಿಯೋಗಿ ಬಸವಣ್ಣನ ಸನ್ನಿಧಿಯಲ್ಲಿಯೇ ಇವರ ಮದುವೆ ಸಮಾರಂಭ ನಡೆದದ್ದು ಅರ್ಥಪೂರ್ಣವಾಗಿತ್ತು.

ಇಸ್ಮಾಯಿಲ್ ಮನೆಯವರಿಗೆ ಈ ಮದುವೆ ಇಷ್ಟವಿಲ್ಲದಿದ್ದರೂ ಮದುವೆಯಾದ ಮೇಲೆ ಅಷ್ಟೊಂದು ವಿರೋಧ ವ್ಯಕ್ತಪಡಿಸದೇ ಸುಮ್ಮನಾದರು. ಕಾಲ ಕ್ರಮೇಣ ಆರುಂಧತಿಯ ಮನೆಯವರೂ ಈ ಮದುವೆಯನ್ನು ಒಪ್ಪಿಕೊಳ್ಳುತ್ತಿದ್ದರೋ ಏನೋ! ಅಥವಾ ಒಪ್ಪಿಗೆಯಿಲ್ಲದಿದ್ದರೂ ಮಗಳು-ಅಳಿಯ ನೆಮ್ಮದಿಯಿಂದಿದ್ದರೆ ಸಾಕು, ಅವರ ತಂಟೆಗೆ ಹೋಗುವುದಿಲ್ಲ ಎಂದುಕೊಂಡು ಸುಮ್ಮನಾದರೂ ಇರುತ್ತಿದ್ದರೋ ಏನೋ? ಆದರೆ ಇಂತಹ ಘಟನೆಗಳಿಗೇ ಚಾತಕಪಕ್ಷಿಗಳಂತೆ ಕಾಯುತ್ತಾ ಕುಳಿತಿರುವ ಹುಬ್ಬಳ್ಳಿಯ ಸಂಘಪರಿವಾರಿಗಳು ಆರುಂಧತಿಯ ಮನೆಯವರ ಕಿವಿಯೂದಿದರು. ಮಗಳು ಕಾಣೆಯಾಗಿದ್ದಾಳೆಂದೂ, ಅವಳನ್ನು ಇಸ್ಮಾಯಿಲ್ ಅಪಹರಿಸಿದ್ದಾನೆಂದೂ ದೂರು ಕೊಡಲು ಪ್ರಚೋದಿಸಿದರು. ಅಂತೆಯೇ ಆರುಂಧತಿಯ ತಂದೆ ಸವದತ್ತಿಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಬಿಟ್ಟರು. ಆಗ ಮದುವೆಯ ಸಂಭ್ರಮದಲ್ಲಿರಬೇಕಿದ್ದ ಈ ಯುವಜೋಡಿಯ ಅಜ್ಞಾತವಾಸ ಅನಿವಾರ್ಯವಾಗಿ ಪ್ರಾರಂಭವಾಯಿತು.

ಈ ಜೋಡಿ ತಮ್ಮ ಮದುವೆಯನ್ನು ನೊಂದಣಿ ಮಾಡುವುದಕ್ಕಾಗಿ ಹುಬ್ಬಳ್ಳಿಯ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಅರ್ಜಿ ಸಲ್ಲಿಸಿದ್ದಾರಾದರೂ ಅಲ್ಲಿಯೂ ಆರುಂಧತಿಯ ತಂದೆ ತಕರಾರು ಅರ್ಜಿ ಸಲ್ಲಿಸಿದ್ದರಾದರೂ ಅಂತರ್ಜಾತಿ ವಿವಾಹದ ನೋಂದಣಿ ಅಧಿಕೃತಗೊಳ್ಳಲು ಮೂರು ತಿಂಗಳು ಹಿಡಿಯುತ್ತದೆ. ಅಷ್ಟರೊಳಗೆ ಏನಾದರೂ ಮಾಡಿ ಅವರನ್ನು ಬೇರ್ಪಡಿಸಲು ಸಂಘಪರಿವಾರದ ಕಮಂಗಿಗಳು ಆರುಂಧತಿಯ ತಂದೆಯನ್ನು ಮುಂದಿಟ್ಟುಕೊಂಡು ಪ್ರಯತ್ನಿಸುತ್ತಿದ್ದಾರೆ. ರಕ್ಷಣೆ ಕೋರಿ ಪೊಲೀಸ್ ಠಾಣೆಗೆ ಹೋದರೆ ಎಲ್ಲಿ ಕೇಸು ಜಡಿದು ಜೈಲಿಗಟ್ಟುತ್ತಾರೋ ಎಂಬ ಭಯದಿಂದ ಇಸ್ಮಾಯಿಲ್ ಮತ್ತು ಆರುಂಧತಿ ಇಬ್ಬರೂ ತಲೆತಪ್ಪಿಸಿಕೊಂಡು ತಿರುಗಾಡುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಇಸ್ಮಾಯಿಲ್ ಕಳೆದ ಒಂದು ತಿಂಗಳಿಂದ ಕೆಲಸಕ್ಕೆ ಹಾಜರಾಗದೇ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಇಸ್ಮಾಯಿಲ್ ಮತ್ತು ಆರುಂಧತಿ ಇಬ್ಬರೂ ಓದುಬರಹ ತಿಳಿಯದ ಮುಗ್ಧರೇನಲ್ಲ, ಇಬ್ಬರೂ ಚೆನ್ನಾಗಿ ಓದಿಕೊಂಡಿರುವ ವಿದ್ಯಾವಂತರೆ. ಇಂಥವರಿಗೇ ಈ ಗತಿಯಾದರೆ ಇನ್ನು ಪ್ರೀತಿಸಿ ಅಂತರ್ಜಾತಿ, ಅಂತರ್‌ಧರ್ಮೀಯ ಮದುವೆಯಾಗುವ ಸಾಮಾನ್ಯ ಅಮಾಯಕರ ಪಾಡೇನು? ಇದಕ್ಕೆ ಮುಖ್ಯಮಂತ್ರಿ ಯಡ್ಡಿ ಏನಂತಾರೆ?

■ ಹುಬ್ಬಳ್ಳಿಯಾಂವ

ಪ್ರಿನ್ಸಿಪಾಲರಾಗಿದ್ದಾಗ ಕಾಲೇಜು ಮೈದಾನದಲ್ಲಿ ಆರೆಸ್ಸೆಸ್‌ನವರು ಪಥಸಂಚಲನ ನಡೆಸಿದ್ದಕ್ಕೆ ಚಡ್ಡಿಗಳನ್ನು ದೊಣ್ಣೆ ಸಮೇತ ತೆಗೆದುಕೊಂಡು ಓಡಿಸಿದ್ದರು. ಅಂದು ಆ ಪ್ರಿನ್ಸಿಪಾಲರಿಗಿದ್ದ ಗಟ್ಸ್ ಇದೀಗ ಪ್ರಭಾರ ಪ್ರಿನ್ಸಿಪಾಲರಾಗಿರುವ ಗೋಪಾಲ ಗೌಡರಿಗೆ ಇಲ್ಲದಂತಾಗಿದೆ.

ಕಾಲೇಜು ಆವರಣದಲ್ಲಿ ಒಂದು ಟೆಂಟ್ ನಾಟಕ ಪ್ರದರ್ಶನಕ್ಕೂ ಈ ಹಿಂದೆ ಬೆಟರ್‌ಮೆಂಟ್ ಕಮಿಟಿಯು ಪರ್ಮಿಷನಿಲ್ಲದೆ ಅವಕಾಶ ಕೊಟ್ಟ ನಿದರ್ಶನವಿಲ್ಲ. ಅಂತಹುದರಲ್ಲಿ ಇದೀಗ ಆರೆಸ್ಸೆಸ್‌ನ 10 ದಿನದ ಜಾರಿ ಬೈಠಕ್‌ಗೆ ಅವಕಾಶ ಕೊಡುವ ಬಗ್ಗೆ ಬೆಟರ್‌ಮೆಂಟ್ ಕಮಿಟಿಯಲ್ಲಿರುವ ಮೂವರು ಮೈನಾರಿಟಿ ಕ್ಯಾಂಡಿಡೇಟ್‌ಗಳ ಗಮನಕ್ಕೆ ಈ ಚೆಡ್ಡಿಗಳು ತಂದಿಲ್ಲ. ಮೊನ್ನೆಯ ಚರ್ಚ್ ಮೇಲಿನ ಸರಣಿ ದಾಳಿಯ ಬಳಿಕ ಇಡೀ ಕ್ರೈಸ್ತ ಸಮುದಾಯ ಆತಂಕಗೊಂಡಿರುವುದು, ಕಾಲೇಜಿನಿಂದ 200 ಮೀ. ಅಂತರದಲ್ಲಿಯೇ ಉಪ್ಪಿನಂಗಡಿ ಚರ್ಚ್ ಕೂಡಾ ಇರುವುದರ ಬಗ್ಗೆ ಎಲ್ಲರೂ ದಿವ್ಯ ನಿರ್ಲಕ್ಷ್ಯ ತಾಳಿದಿರುವಂತಿದೆ. ಬೇಲಿಯೇ ಹೊಲ ಮೇಯುತ್ತಿರುವಾಗ ಇದೆಲ್ಲಾ ಮಾಮೂಲಿ ಎನ್ನುವಂತಾಗಿದೆ.

ಇತ್ತೀಚೆಗೆ ಕಂಧಮಾಲ್‌ನಲ್ಲಿ ಕ್ರೈಸ್ತರ ಮೇಲೆ ನಡೆದ ದೌರ್ಜನ್ಯ ವಿರೋಧಿಸಿ ಒಂದು ದಿನ ರಾಜ್ಯದ ಖಾಸಗೀ ಶಿಕ್ಷಣ ಸಂಸ್ಥೆಗಳು ಬಂದ್ ಆಚರಿಸಿದ್ದಕ್ಕೆ ಶಿಕ್ಷಣ ಮಂತ್ರಿ ವಿಶ್ವೇಶ್ವರ ಹೆಗ್ಗಡೆ ಕಾಗೇರಿ ಆ ಸಂಸ್ಥೆಗಳ ವಿರುದ್ಧ ಗುರಾಯಿಸಿ ನೋಟೀಸು ಜಾರಿ ಮಾಡಿದ್ದರು. ಆದರೆ ಸರ್ಕಾರಿ ಕಾಲೇಜನ್ನೇ ಚಡ್ಡಿಗಳ ತಾಲೀಮು ಕೇಂದ್ರವಾಗಿ ಮಾಡಹೊರಟಿರುವುದನ್ನು ಕೇಳುವವರೇ ಇಲ್ಲವಾಗಿದೆ. ಇದೆಂತಹ ನ್ಯಾಯ?

■ ವರದಿಗಾರ



ಪುತ್ತೂರಿನ ಲಿಪ್‌ಸ್ಟಿಕ್ ಶಾಸಕಿ

ಪುತ್ತೂರಿನ ಶಾಸಕರು ಯಾರು ಅಂತ ಕೇಳಿದರೆ ಮುಗ್ಧ ಜನರು ಇವತ್ತಿಗೂ ಶಕುಂತಲಾ ಶೆಟ್ಟಿ ಎಂದೇ ಉತ್ತರಿಸುತ್ತಾರೆ. ಸ್ವಂತ ಶಕ್ತಿಯಿಂದಲೇ ಬೆಳೆದು ಶೈನ್ ಆದ ಶಕುಂತಲಾ ಶೆಟ್ಟಿಯನ್ನು ಮೂಲೆಗುಂಪು ಮಾಡಲೆಂದೇ ಡಾ. ಪ್ರಸಾದ್ ಭಂಡಾರಿ ಎಂಬ ಹಾರ್ಡ್‌ಕೋರ್ ಚಡ್ಡಿಯ ಹೆಂಡತಿ ಮಲ್ಲಿಕಾ ಪ್ರಸಾದ್ ಭಂಡಾರಿ ಎಂಬ ಬಂಟಿಯನ್ನು ಚುನಾವಣೆಗೆ ಇಳಿಸುವಲ್ಲಿ ಚಡ್ಡಿ ಅಧ್ಯಕ್ಷ ಡಿ.ವಿ.ಸದಾನಂದ ಗೌಡರು ಯಶಸ್ವಿಯಾಗಿದ್ದರು.

ಈ ಮಲ್ಲಿಕಾ ಪ್ರಸಾದ್ ಎಂಬ ಪೆದ್ದು ಶಿಖಾಮಣಿಯನ್ನು ಗೆಲ್ಲಿಸಿದ ಕೀರ್ತಿ ಪುತ್ತೂರಿನ ಅವಿವೇಕಿ ಕಾಂಗ್ರೆಸ್ ಮುಖಂಡರಿಗೆ ಸಲ್ಲುತ್ತದೆ. ಈಕೆ ಎಂತಹ ಮಹಿಳೆಯೆಂದರೆ ಜನಸಾಮಾನ್ಯರ ಕಣ್ಣಿಗೂ ಬೀಳದೆ, ಕಷ್ಟದಲ್ಲಿರುವವರಿಗೆ ಫೋನಿಗೂ ಸಿಗದೆ, ಬಚ್ಚಿಟ್ಟುಕೊಂಡಿರುತ್ತಾಳೆ. ಆದರೆ ಶುಭ ಸಮಾರಂಭಗಳಿಗೆ ಮಾತ್ರ ದಿವಿನಾಗಿ ಲಿಪ್ಟಿಕ್ ಬಳಿದುಕೊಂಡು, ನೀಟಾಗಿ ಡ್ರೆಸ್ ಮಾಡಿ ಹಾಜರಾಗುತ್ತಾಳೆ. ಇದನ್ನೇ ಈಕೆ ಕ್ಷೇತ್ರದ ಸೇವೆ ಅಂದುಕೊಂಡಿರುವಂತಿದೆ. ಇಂತಹ 'ಮಲ್ಲಿಕ ಅಮ್ಮ'ನೆಂಬ ಉತ್ಸವಮೂರ್ತಿಯ ಶಾಸಕಗಿರಿಯಲ್ಲಿ ಪುರಸಭಾ ಅಧ್ಯಕ್ಷ ರಾಜೇಶ್ ಬನ್ನೂರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ತಿಮ್ಮಪ್ಪಶೆಟ್ಟಿ ಮತ್ತು ಉಪ್ಪಿನಂಗಡಿಯ ಡಿ.ವಿ.ಶಿಷ್ಯ ಸಂಜೀವ ಮಠಂದೂರುಗಳೆಂಬ ಚಡ್ಡಿ ಪೈಲ್ವಾನ್‌ಗಳದ್ದೇ ಕಾರುಬಾರು, ಅವರು ಆಡಿದ್ದೇ ಆಟ ಎಂಬಂತಾಗಿದೆ.

ಬಿಜೆಪಿಗೆ ಅಧಿಕಾರ ಸಿಕ್ಕಿದ್ದೇ ತಡ, ಸದಾನಂದ ಗೌಡರು ಬಂಟರು ಮಸಲತ್ತು ಮಾಡುತ್ತಾ ಶಕುಂತಲಾ ಶೆಟ್ಟಿಯನ್ನು ಇನ್ನಿಲ್ಲದಂತೆ ಖರಾಬ್ ಮಾಡುವುದನ್ನೇ ಅಜೆಂಡಾ ಮಾಡಿಕೊಂಡಿದ್ದಾರೆ. ತಾಲ್ಲೂಕಿನ ಅಧಿಕಾರಿಗಣದಲ್ಲಂತೂ ಶಕುಂತಲಾ ಶೆಟ್ಟಿ ಕಡೆ ಕತ್ತೆತ್ತಿ ನೋಡಿದರೂ ವರ್ಗಾವಣೆ ಶಿಕ್ಷೆ ಖಚಿತ ಎಂಬಂತಹ ಪರಿಸ್ಥಿತಿ ಸೃಷ್ಟಿಯಾಗಿದೆ.

ಡಿ.ವಿ.ಯಂತಹ ಡಿ.ವಿ.ಗೇ ಸೆಡ್ಡುಹೊಡೆದು ತನ್ನ ದಕ್ಷತೆಯನ್ನು ಮೆರೆದಿದ್ದ ಎ.ಸಿ. ವಸಂತಕುಮಾರ್ ಅವರಿಗೆ ಹೊಸ ಖಾತೆಯನ್ನು ತೋರಿಸದೇ ಇಲ್ಲಿಂದ ಓಡಿಸಲಾಯಿತು. ಇದೀಗ ತಹಶೀಲ್ದಾರ್ ವೆಂಕಟೇಶಯ್ಯನವರು ಶಕುಂತಲಾ ಶೆಟ್ಟಿ ಜೊತೆ ಆಪ್ತವಾಗಿರುವುದು ಚಡ್ಡಿಗಳ ಚಡ್ಡಿಯೊಳಗೇ ಇರುವೆ ಸೇರಿದಂತೆ ಕಿರಿಕಿರಿಯಾಗಿದೆ. ಇತ್ತೀಚೆಗೆ ಚನಿಲ ತಿಮ್ಮಯ್ಯಶೆಟ್ಟಿ ಸೇರಿದಂತೆ ಕೆಲವು ಪುಢಾರಿಗಳು ನಡೆಸುವ ಕೆಂಪುಕಲ್ಲಿನ ಅಕ್ರಮ ಗಣಿಗಾರಿಕೆ ಮೇಲೆ ವೆಂಕಟೇಶಯ್ಯ ದಾಳಿ ಮಾಡಿದ್ದು ಬೆಂಕಿಗೆ ತುಪ್ಪ ಸುರಿದಂತಾಗಿದ್ದು ವೆಂಕಟೇಶಯ್ಯನನ್ನು ವರ್ಗಾವಣೆ ಶಿಕ್ಷೆಗೆ ಗುರಿಪಡಿಸಲಾಗಿದೆ. ಉಪ್ಪಿನಂಗಡಿಯ ಖಡಕ್ ಎಸ್.ಐ. ಮಾರುತಿ ನಾಯಕ್ ಅವರು ಚಡ್ಡಿಗಳೊಂದಿಗೆ ಸಹಕರಿಸದ ಕಾರಣಕ್ಕೆ ಅವರಿಗೂ ಇಲ್ಲಿಂದ ವರ್ಗಾವಣೆ ಶಿಕ್ಷೆ ಕಾದಿದೆ.

ಉಪ್ಪಿನಂಗಡಿಯಲ್ಲಿ ಭಜರಂಗದಳ ಅಸ್ತಿತ್ವದಲ್ಲಿಲ್ಲದಿದ್ದರೂ ಹಿಂದೂ ಜಾಗರಣಾ ವೇದಿಕೆಯೊಂದು ನಾಮಕಾವಸ್ಥೆಗಿತ್ತು. ಅದ್ಯಾವತ್ತೂ ಹದ್ದುಮೀರಿ ವರ್ತಿಸಿದ ಉದಾಹರಣೆ ಇರಲಿಲ್ಲ. ಅದರ ಅಧ್ಯಕ್ಷ ಮಹೇಂದ್ರ ವರ್ಮನಿಗೆ ಮುಸ್ಲಿಮರ ಜತೆಗಿದ್ದ ಗೆಳೆತನ ಮತ್ತು ಸಾಫ್ಟ್ ನಿಲುವುಗಳ ಬಗ್ಗೆ ಕಟ್ಟರ್ ಚಡ್ಡಿಗಳಿಗೇ ಅಸಮಾಧಾನವಿತ್ತು. ಆದಾಗ್ಯೂ ಈತನನ್ನು ಕಿತ್ತುಹಾಕುವ ಧೈರ್ಯ ಮಾಡಿರಲಿಲ್ಲ. ಯಾವಾಗ ಶಕುಂತಲಾ ಶೆಟ್ಟಿಯ ಜತೆ ಕಳೆದ ಚುನಾವಣೆಯಲ್ಲಿ ಮಹೇಂದ್ರ ಓಡಾಡಿದನೋ ಆತನಿಗೆ ಮುಳುಗು ನೀರು ಬಂತು. ಈಗ ಅವನನ್ನು ಆ ಸ್ಥಾನದಿಂದ ಕಿತ್ತುಹಾಕಲಾಗಿದೆ.

ಅಂತೂ ಪುತ್ತೂರಿನಲ್ಲಿ ಮಲ್ಲಿಕಾ ಪ್ರಸಾದ್ ಎಂಬ ಲಿಪ್‌ಸ್ಟಿಕ್ ಶಾಸಕಿಯನ್ನು ಮುಂದಿಟ್ಟುಕೊಂಡು ಚಡ್ಡಿ ಪೈಲ್ವಾನರು ಆಡಿದ್ದೇ ಆಟವಾಗಿದೆ. ■

ಎಡೂರಪ್ಪನ ಸವುರನೂ ಬ್ಯಾಡ ಅವುನ ಸವಾಸನೂ ಬ್ಯಾಡ

ಅಮವಾಸೆ ದಿನ ಪಿತೃಪಕ್ಷ. ಅದಕ್ಕಾಗಿ ತಯಾರಿ ನಡೆಯುತ್ತಿದ್ದವು. ಜುಮ್ಮಿ ಐದಾರು ತಿಂಗಳ ಹಿಂದೆ ಹೋತನನ್ನು ತೆಗೆದುಬಿಟ್ಟಿದ್ದಳು. ಖರೀದಿ ಮಾಡಿದಾಗ ಸುಮಾರು ಹದಿನೈದು ಕೆ.ಜಿ. ತೂಗುತ್ತಿದ್ದ ಹೋತ ಈಗ ಇಪ್ಪತ್ತು ಕೆ.ಜಿ. ತೂಕ ಬಂದಿತ್ತು. ಪಂಚಾಯ್ತಿ ಮೆಂಬರಾದ ಕಾರಣ ಅದೂ ಸಾಲದೆ ಇನ್ನೈದು ಕೆ.ಜಿ. ತೆಗೆದುಕೊಳ್ಳುವ ತೀರ್ಮಾನದಲ್ಲಿದ್ದಳು.

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ನಿನ್ನ ಮನೆಲಿ ಏನು ಕುಯ್ತಿರೊ ಮಾವ?" ಎಂದಳು.

"ತಗುರು ಕುಯ್ತಿವಿ ಕಂಡ್ಯ. ಕೈ ಪಾಕ ಮಾಡಿಕಂಡು ಚೆನ್ನಾಗಿ ಸಾಕ್ಯವುರೆ. ಏನಿಲ್ಲ ಅಂದ್ರು ಇಪ್ಪತ್ತೆರಡ ಕೆ.ಜಿ. ಮ್ಯಾಲೆ ಬತ್ತದೆ" ಎಂದು ಕಾಳಮಾವ ತನ್ನ ಮನೆ ಬಲಿಯ ವಿವರಕೊಟ್ಟ.

"ನೀನೇನು ಕೂದಿಯೋ ಚಿಕ್ಕಣ್ಣ?" ಎಂದಳು ಜುಮ್ಮಿ.

"ಅವುನು ಯಲಕ್ಸನ್ ಟೇಮಲ್ಲೆ ಒಂದು ಮರಿ ತಗುದು ಬುಟ್ಟವುನೆ ಕಣೆ. ಅದೇನಿಲ್ಲ ಅಂದ್ರು ಹನ್ನೆರಡು ಕೆ.ಜಿ. ಬತ್ತದೆ" ಎಂದ ಉಗ್ರಿ.

"ಅಂಗರಿನ್ನ ಮೊಗಳು ಮರಿ ಅನ್ನು."

"ಅಂಗೇನುಯಿಲ್ಲ. ಇವುನು ತಗಳುವಾಗ್ಲೆ ಗ್ಯಂಡ್ಯಾಯ್ಕಂಡಿತ್ತು. ಈಗ ಚನಾಗ್ಯದೆ ಅಲವೇನೊ?" ಎಂದ ಉಗ್ರಿ.

"ಊ ಚನಾಗ್ಯದೆ. ಯಲಕ್ಸನ್ನಲ್ಲಿ ಕೊಟ್ಟ ದುಡ್ಡಿಗೆ ಒಂದು ಮರಿ ತಗುದು ಬುಟ್ಟದ್ದೆ" ಎಂದ ಚಿಕ್ಕ.

"ಯಲಕ್ಸನ್ನಲಿಲ್ಯಾರು ದುಡ್ಡು ಕೊಟ್ಟದ್ರೊ?" ಎಂದಳು ಜುಮ್ಮಿ.

"ಕಾಂಗ್ರೆಸ್ಸಿನೋರು, ದಳದೋರು ಇಬ್ರೂ ಕೊಟ್ಟದ್ರು."

"ಎಟು ಕೊಟ್ಟದ್ರು?"

"ಕಾಂಗ್ರೆಸಿನೋರು ಒಂದೋಟಿಗಿನ್ನೂರು ಅಂತ ನಾನೂರು ಕೊಟ್ಟದ್ರು. ದಳದೋರು ಮುನ್ನೂರು ಅಂತ ಆರುನೂರು ಕೊಟ್ರು. ಅದ ಖರ್ಚು ಮಾಡಬ್ಯಾಡ ಅಂತ ನನ್ನೆದ್ದಿ ಆಡುಮರಿ ತರಿಸಿದ್ಲು. ಒಂದು ಸವುರುರುಪಾಯಿಗೆ ತಂದೆ. ಅದೀಗ ಯರಡು ಸವುರುಕೋಯ್ತದೆ."

"ಅಂತೂ ಯಲಕ್ಸನ್ ದುಡ್ನಲಿ ಪಕ್ಸ ಮಾಡ್ತಾಯಿದ್ದಿ ಅನ್ನು?"

"ನಾನ್ವಬ್ಬನೆ ಏನೊ? ಬೇಕಾದೋಟು ಜನ ಅಂಗೆ ಮಾಡ್ತ ಅವುರೆ."

"ನಿಜ ಕಣೊ ಚಿಕ್ಕಣ್ಣ, ಹಂಚಕ್ಕೆ ಅಂತ ದುಡ್ಡೀಸಗಂಡು ಬಂದೋರು ತಾವು ಮಡಿಕಳದೆ ಪೂರಾ ಕೊಟ್ಟದ್ದರೆ?" ಎಂದ ಉಗ್ರಿ.

"ಜೇನು ಬಿಚ್ಚೋರು ಕೈ ನೆಕ್ಕದಿಲವೇನ್ಲ?" ಎಂದ ಸೀರ.

"ಹೋಗ್ಲಿ ಬುಡು. ಓಟು ಮಾಡಕ್ಕೆ ಅಂತ ಈಸಗಂಡು ದುಡ್ನಲ್ಲಿ ಮರಿಕೂದು, ಜನ ಕರದು ಬಾಡಾಕ್ತಿಯಲ್ಲ ಅದೂ ಜನಸೇವೆನೆ ಅಲವೇ? ಕ್ಯರೆ ನೀರ ಕ್ಯರಿಗೆ ಚೆಲ್ಲಿದಂಗಾಯ್ತದೆ."

"ಇಲ್ಲಿಗಂಟ ಯಾವನ ದುಡ್ಡನೂ ತಿಂದಿಲ್ಲ ನಾನು. ಅಂಗೆ ತಿಂದಿದ್ರೆ ಈ ಹೋಟ್ಲು ಮನಿಗೆ ಹಂಚಾಕ್ಸಿ ಗಾರೆಹಾಕ್ತಿದ್ದೆ ಕಣೊ" ಎಂದ ಚಿಕ್ಕಣ್ಣ.

"ಎಡೂರಪ್ಪೇನೊ ರೈತರಿಗೆ ಒಂದು ಸವುರ ಕೊಟ್ಟನಂತೆ? ಅದ್ನಾರ ಈಸಗಂಡು ಈ ಗುಡ್ಲು ಸರಿ ಮಾಡೊ" ಎಂದ ಉಗ್ರಿ.

"ಎಡೂರಪ್ಪ ಸವುರ ಕೊಡ್ತನೆ ಸರಿ. ಹೋಗ್ಯವುನತ್ರ ಕಿತಗಂಡು ಬರಬೇಕಲ್ಲ? ಆ ಶ್ರಮ ಯೇಳ್ಕಾ" ಎಂದ ಸೀರ.

"ಆ ಶ್ರಮ ಯಾರಿಗೂ ಬ್ಯಾಡ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ನೀನೆಲ್ಲಿ ತಗಳಕ್ಕೋಗಿದ್ಲ?"

"ನಾನು ತಗಂಡಿಲ್ಲ ಕಣಕ್ಕ. ತಗಳೋರ ಪರದಾಟ ನೋಡಿ ಸರ್ಕಾರಕ್ಕೆ ಒಂದು ಸವುರ ಬುಟ್ಟುಕೊಟ್ಟೆ ಅತ್ಲಾಗೆ."

"ಎಡೂರಪ್ಪನೆ ತಿನ್ನಕಳ್ಳಿ ಬುಡು" ಎಂದಳು ಜುಮ್ಮಿ.

"ಸರ್ಕಾರದ ದುಡ್ಡು ತಗಳಕ್ಕೂ ನ್ಯಾಕ್ ಬೇಕು ಕಣೊ" ಎಂದ ಉಗ್ರಿ.

"ನ್ಯಾಕು ಇಲ್ಲ ಪೀಕ್ಕು ಇಲ್ಲ, ಲಾಳಿನಕ್ಕರೆ ದೇವರಾಜ ಹೇಳದು ನೋಡಿದ್ರೆ ಎಡೂರಪ್ಪನ ಮ್ಯಾಲೆ ಸಿಟ್ಟು ಬತ್ತದೆ."

"ಎಡೂರಪ್ಪನ ಕಂಡ್ರೆ ಯಲ್ಲ ಅಂಗುತಿರಲ್ಲ, ಅಂತದ್ದೇನು ಮಾಡಿದ್ದನಯ್ಯ ಅವುನು?"

"ಅವುನೇನು ಮಾಡದಂಗಿದ್ರೆನೆ ಚಂದ ಕಣೊ ಉಗ್ರಿ. ಇವುನೇನೋ ಬಡ ರೈತರಿಗೆ ಒಂದು ಸವುರ ಮನೆತಕ್ಕೆ ಬತ್ತದೆ ಅಂದ. ಅಂಗಂತ ಎಂಕ್ವಯಿರಿ ಮಾಡುಸ ಅಂತ ಸೆಕೆಟ್ರಿತಕ್ಕೋದ್ರೆ, ಅವುನು ವಿ.ಎ. ಅತ್ರುಕ್ಕೋಗಿ, ಖಾತೆಪೋಡು, ವಂಶವೃಕ್ಷ ತಗಂಡು ಬಾ ಅಂದನಂತೆ. ಅದಾದಮ್ಯಾಲೆ ಪೋಟಾ ತಗಸಬೇಕು. ಯಲ್ಲ ಮುಗದ ಮ್ಯಾಲೆ ಬ್ಯಾಂಕಲ್ಲಿ ಹೋಗಿ ಖಾತೆ ತಗಿಬೇಕು. ಖಾತೆ ಮಾಡಸಕ್ಕೆ ಕನಿಷ್ಟ ಐನೂರುರುಪಾಯಿ ಬ್ಯಾಂಕಲ್ಲಿಡಬೇಕು."



"ತಗಳಪ್ಪ, ಸವುರುರುಪಾಯಿಗೆ ಐನೂರು ಕಳಕಬೇಕು ಅನ್ನ."

"ಇರು ಚಿಗಪ್ಪ, ಆತ್ರ ಮಾಡಬ್ಯಾಡ. ದೀಟೈಲಾಗಿ ಹೇಳ್ತಿನಿ. ಲಾಳನಕ್ಕರೆ ದೇವರಾಜನಿಗೆ ಬರೋಬರಿ ಎಂಟುನೂರುರುಪಾಯಿ ಖರ್ಚಾಗ್ಯದೆ, ಯಾಕೇಳು?"

"ನೀನೆ ಹೇಳ್ಳ."

"ಈಗ ಬಸ್ಸಿಲ್ಲ. ಒಂದೂರಿಗೆ ಮೂರಾಟೊಗಳಾಗಿ ಬಸ್ಸಲ್ಲ ನಿಂತೋಗ್ಯವೆ. ಆದ್ರಿಂದ ತಾಲೂಕಿಗೆ ಹೋಗಬೇಕು ಅಂದ್ರೆ ಮೂರು ಆಟೋ ಹಿಡಿಬೇಕು. ಒಂದು ಸತಿ ಹೋಗಿ ಬಂದ್ರೆ ಮುವ್ವತ್ತು ಆಟೋಗಾಯ್ತು, ಇನ್ನತ್ತು ಪ್ಲೇಟ್ ಮೀಲ್ಸಿಗಾಯ್ತು. ಯಂಗಿದ್ರು ಸಾವುರುಪಾಯಿ ಸಿಗತದೆ ಅಂತ ಕೈಸಾಲ ಮಾಡಿದ್ರೆ ಕಡಿಗೇನು ಸಿಗತದೆ?"

"ಬರಿಕೈಯಾಗಿ ಮನಿಗೆ ಬರದೆಯಾ ಅನ್ನು?"

"ಬರಿ ಕೈಯಾಗಿ ಬಂದ್ರೆ ಅದೊಂತರ ಚಿಗಪ್ಪ, ಇನ್ನೂ ಸಾಲ ಮಾಡಿಕಂಡು ಬಂದವುರಲ್ಲ ಹೇಳು?"

"ಯಾರ್ಲ ಮಾಡಿಕಂಡಿರೋರು?"

"ಯಾರ್ಯಾರು ಎಡೂರಪ್ಪನ ಸವುರ ಹುಡಿಕ್ಯಂಡೋದ್ರೊ ಅವುರ್ಯಲ್ಲ ಇವತ್ತು ಕನಿಷ್ಠ ಐನೂರುಪಾಯಿ ಸಾಲಗಾರ್ರು ಕಣಕ್ಕ. ದಿಸೀಸ್ ರಿಯಲಿ ಸೇಂ ಟು ಎಡೂರಪ್ಪ, ಬಿಕಾಸ್...." ಎಂದ ವಾಟಿಸ್ಸೆ ಮುಂದೇನನ್ನೋ ಹೇಳಲು ಯತ್ನಿಸುತ್ತ ಸುಮ್ಮನಾದ. ಆಗ ಉಗ್ರಿ,

"ಸಾವುರುಪಾಯಿ ಕೊಡಬೇಕಾದ್ರೆ ಕಾನೂನು ರೀತಿ ಕೊಡಬೇಕಾಯ್ತದೆ ಕಣೊ. ಇಲ್ಲ ಅಂದ್ರೆ ಯಾರ್ಯಾರೊ ತಿನ್ನಕತ್ತರೆ" ಎಂದ.

"ಮಿಸ್ಟರ ಉಗ್ರಿ ಅದು ನನಿಗೂ ಗೊತ್ತು, ಕಾರ್ಯಕ್ರಮ ಕೊಡೊ ಮುನ್ನ ಯೋಚನೆ ಮಾಡಬೇಕು ಕಣೊ. ಪಾಪ ರೈತರು ಒಂದುಸವುರ ತಗಳಕ್ಕೆ ಕನಿಷ್ಟ ಏಳುನೂರು ಖರ್ಚು ಮಾಡಿಕಂಡವುರೆ. ಲಾಳಿನಕ್ಕರೆ ದೇವರಾಜನಂತೂ ಸಾವುರದ ಮ್ಯಾಲೆ ಮಾಡ್ಯವುನಂತೆ. ಅದ್ಕೆ ಸ್ವಲುಪ ನನ್ನಂಗೆ ಮಾತಾಡ್ತ ಅವುನೆ."

"ಸರ್ಕಾರ ಜನರನ್ನ ಭಿಕ್ಷುಕರು ಮಾಡಿಬುಡ್ತು ಬುಡ್ಳ" ಎಂದ ಕಾಳಮಾವ.

ಗಣೇಶನಿಗೆ ಎಡೆ ಇಟ್ರೆ ಮಜಾ ಅಲ್ವಾ ಸಾ

ಕ್ಯಾತ ಬಂದ. 'ಈ ಸಮಯ ಆನಂದಮಯ' ಅನ್ನುವ ಸ್ಥಿತಿಯಲ್ಲಿದ್ದ.

'ಏನೋ ಕ್ಯಾತ ಬಲೇ ದಿಲ್‌ದಾರಾಗಿದ್ದಿ' ಕೇಳಿದೆ.

'ಗಣೇಸ ವೆಜ್ಜೋ ನಾನ್‌ವೆಜ್ಜೋ ಸಾ' ಕೇಳಿದ.

'ಯಾವ ಗಣೇಶ?' ಅಂದೆ.

'ಇನ್ನಾರು ಸಾ, ಲಾರ್ಡ್ ಗಣೇಸ' ಅಂದ.

ಇವನದ್ದು ಇಂತಹವೇ ಪ್ರಶ್ನೆಗಳು. ಎಂತೆಂತಹವೋ ಗಣೇಶನ ಹೆಸರು ಕೇಳಿದ್ದೆ. ಆದರೆ ಈ ಇದು?

'ಯಾಕೋ?' ಕೇಳಿದೆ.

'ಹೇಳಿ ಸಾ' ಅಂದ.

ಬಾಲ್ಯಕ್ಕೆ ಬಿದ್ದೆ.

ಗಣೇಶ ಬಂದ.

ಕಾಯ್ಕಡುಬು ತಿಂದ

ಹೊಟ್ಟೆ ಮೇಲೆ ಗಂಧ

ಚಿಕ್ಕೆರೇಲಿ ಬಿದ್ದ

ದೊಡ್ಡೆರೇಲಿ ಎದ್ದ

ಎನ್ನುತ್ತಾ ಹಾಡಿಕೊಂಡು ಕುಣಿದು ಕುಪ್ಪಳಿಸುತ್ತಿದ್ದುದು ನೆನಪಾಯಿತು.

ಈಗಿನ ಖದರು ಆಗ ಇರಲಿಲ್ಲ. ತೊಪ್ಪೆಯ ಉಂಡೆಯಲ್ಲಿ ತೂತು ಕೊರೆದು ಗರಿಕೆ ಸಿಕ್ಕಿಸಿದರೆ ಮುಗಿಯಿತು. ಅದೇ ನಮ್ಮ ಗಣಪತಿ!

ಕಾಲ ಬದಲಾಗಿದೆ.

ಹಳ್ಳಿ ಹಳ್ಳಿಗಳಲ್ಲೂ ಬಣ್ಣಬಣ್ಣದ ವೈವಿಧ್ಯಮಯ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ.

'ಆ ಊರಲಿ ಸಾಕಡಿ ಗಣೇಶನ್ನ ಇಟ್ಟವ್ರೆ. ನಾವು ಐದು ಅಡಿದಾದ್ರು ಇಡ್ಬೇಕು' ಹಳ್ಳಿಯ ಯುವಕರ ಅಚಲ ನಿರ್ಧಾರ.

ಯಾಕೆ ಈ ಹುಚ್ಚು?

ಎತ್ತರದ ಗಣಪತಿ ಇರುವುದು ಊರಿನ ಪ್ರತಿಷ್ಠೆಯ ಪ್ರತೀಕ!

ಆಯಿತು. ಎತ್ತರದ ಗಣಪತಿ ಇಟ್ಟರೆ ಸಾಕೆ?

ಸಾಲದು. ಆಗಬೇಕಲ್ಲ ಪ್ರತಿ ರಾತ್ರಿಯ ಮನರಂಜನೆ?

ನಡೆಯಲಿ ಆರ್ಕೆಸ್ಟ್ರಾ. ಕರೆಸಿರಿ ಫಿಲಂ ಸ್ಟಾರ್ಸ್!



ಇದಕ್ಕೆಲ್ಲ ಹಣ?

ಅದರ ಚಿಂತೆ ಇಲ್ಲ. ಇದ್ದಾರಲ್ಲ ರಾಜಕಾರಣಿಗಳು. ಪ್ರಜಾಪ್ರಭುತ್ವ ಉಳಿಸಲು ಚುನಾವಣೆಯಲ್ಲಿ ಯುವಕರ ಸಹಾಯ ಬೇಕಲ್ಲಾ... ಧಾರಾಳವಾಗಿ ಹಣ ನೀಡುವುದರ ಮೂಲಕ ತಮ್ಮ ಗಣೇಶ ಭಕ್ತಿ ಪ್ರದರ್ಶನಕ್ಕೆ ಅವರು ಸದಾ ಸಿದ್ಧ!

ಗಣೇಶನ ವಿಸರ್ಜನೆ ಅದ್ದೂರಿ ಸಮಾರಂಭ.

ಊರಿಗೆ ಊರೇ ರಂಗೇರಿರುತ್ತದೆ. ಅಮಲುದು ಮಾಲು ಮಾಡಿಕೊಂಡ ಯುವಕರ ಕುಣಿತ ಕಣ್ಣಿಗೆ ಹಬ್ಬ! ಗಣೇಶ ಕುಡುಕನೋ ಅಲ್ಲವೋ. ಭಕ್ತರ ಭಕ್ತಿ ಉತ್ತುಂಗಕ್ಕೇರಬೇಕಾದರೆ ಅವರಿಗೆ ಇದರ ಅವಶ್ಯಕತೆಯಂತೂ ಇದ್ದೇ ಇದೆ. ಅಮ್ಮ ಒಳಸೇರಿದ ನಂತರ ಖಂಡಾನೂ ಇದ್ದರೆ ಅದರ ಮದವೇ ಬೇರೆ. ಇದು ಭಕ್ತರು ಭಕ್ತಿ ತೋರುವ ಪರಿ. ಆದರೆ ಗಣೇಶ?

'ವೆಜ್ಜು' ಅಂದೆ.

ಉತ್ತರ ಕೇಳಿ ಗೊಳ್ಳೆಂದ.

'ಇದ್ಯೇಯ ನೀವು ಮಿಸ್ಟು ಅನ್ನೋದು' ಅಂದ.

ಮುಖ ಮುಖ ನೋಡಿದೆ.

'ನಾನ್ ವೆಜ್ಜು ಸಾ' ಅಂದ!

ಕೆದಕಿದೆ.

ಉತ್ತರ ಕರ್ನಾಟಕದ ಯಾವುದೋ ಊರಿನಲ್ಲಿ ಮಾಂಸದ ವಿವಿಧ ಭಕ್ಷ್ಯಗಳನ್ನು ಮಾಡಿ ಮದ್ಯದ ಸೀಸ ಇಟ್ಟು ಗಣೇಶನಿಗೆ ನೈವೇದ್ಯ ಮಾಡುತ್ತಾರಂತೆ. ಇದನ್ನು ವಿವರಿಸುವಾಗ ವಿಶೇಷಭೋಜನ ಕನಸು ಅವನ ಕಣ್ಣುಗಳಲ್ಲಿ ಧೀಂಗುಡುತ್ತಿತ್ತು.

'ಗಣೇಸನ ಹಬ್ಬ ಹಿಂಗೆ ಎಡೆಇಟ್ರೆ ಮಜ ಅಲ್ವೆ ಸಾ' ಅಂದ!

ನಿಜ ಅನ್ನಿಸಿತು. ಹೆಂಡ ಖಂಡದ ಗಣೇಶನ ಪೂಜೆ ಇನ್ನು ಮುಂದೆ ಹದಿಹರೆಯದವರಿಗೆ ಇನ್ನೂ ಆಕರ್ಷಕವಾಗಿರಬಹುದು!

ಗಣೇಶನಿಗೆ?

ತಿಥಿ!

ಸತ್ತವರಿಗೆ ತಾನೆ ಎಡೆ ಇಡೋದು!

ನಿಷ್ಠುರ ನ್ಯಾಯ!

ಭಜರಂಗಿಗಳು ಏನು?

'ಭಯೋತ್ಪಾದಕರು' ಹಿಂದೂ ಧರ್ಮ ಪಾತಕಿಗಳ ದೃಷ್ಟಿ ಇದು.

ಆದರೆ ಅವರು ಅದಲ್ಲ!

ಹಾಗಾದರೆ ಅವರು ಏನು?

ದೇಶಭಕ್ತರು! ರಾಷ್ಟ್ರಪ್ರೇಮಿಗಳು!

ಯಾರು ಈ ಸರ್ಟಿಫಿಕೇಟ್ ನೀಡಿದ್ದು?

ರಾಜ್ಯದ ಗೃಹ ಸಚಿವರು!

ಅಣಕ

ಎಚ್.ಎಲ್. ಕೇಶವಮೂರ್ತಿ

ಇನ್ನೂ ಅನುಮಾನವೆ? ವಿಶ್ವಹಿಂದೂ ಪರಿಷತ್ತಿನ ವಿಭಾಗ ಸಂಚಾಲಕರನ್ನು ಕೇಳಿ. ಅವರು ನುಡಿಯುತ್ತಾರೆ- 'ವಿಶ್ವ ಹಿಂದೂ ಪರಿಷತ್ತು ನೋಂದಾಯಿತ ಸಾರ್ವಜನಿಕ ಸಂಸ್ಥೆ. ಭಜರಂಗದಳ ಯಾವುದೇ ದುಷ್ಕೃತ್ಯದಲ್ಲಿ ಭಾಗಿಯಾಗಿರಲು ಸಾಧ್ಯವೇ ಇಲ್ಲ!'

ಭಜರಂಗದಳದ ರಾಜ್ಯ ಸಂಚಾಲಕನೇ ಕ್ರೈಸ್ತ ಪ್ರಾರ್ಥನಾ ಮಂದಿರಗಳ ದಾಳಿ ಹೊತ್ತಿದ್ದಾನಲ್ಲ ಎಂಬ ಸಂಶಯ ಬೇಡ. ಅವರು ಹೀಗೆ ಹೇಳಿದ್ದು ಹಿಂದೂ ದೇವತೆಗಳ ಅಪಮಾನಗೊಳಿಸಿದ್ದನ್ನು ಕಂಡು ಉದ್ವೇಗಕ್ಕೆ ಒಳಗಾಗಿ!

ಇನ್ನೂ ಅನುಮಾನವೆ?

ನಗರಾಭಿವೃದ್ಧಿ ಸಚಿವರನ್ನು ಕೇಳಿ ನೋಡಿ.

'ಗೂಂಡಾ ಕಾಯ್ದೆಯನ್ವಯ ದಾಳಿಕೋರರನ್ನು ಶಿಕ್ಷೆಗೆ ಗುರಿ ಮಾಡುತ್ತೇವೆ' ಆಹಾ! ಎಂತಹ ತೀರ್ಮಾನ! ಹಾಗಾದರೆ ಭಜರಂಗಿಗಳು ಕಂಬ ಎಣಿಸುತ್ತಾ ಭಜನೆ ಮಾಡುತ್ತಿರುತ್ತಾರೆ!

ಸ್ವಲ್ಪ ನಿಧಾನಿಸಿ. ಎಲ್ಲರನ್ನೂ ಶಿಕ್ಷೆಗೆ ಒಳಪಡಿಸುವುದಿಲ್ಲ! ಗೂಂಡಾ ಕಾಯ್ದೆ ಜಾರಿಗೊಳಿಸಲು ಮಂತ್ರಿಮಂಡಲದ ತೀರ್ಮಾನ ತೆಗೆದುಕೊಂಡ ನಂತರದ ಘಟನೆಗಳಿಗೆ ಮಾತ್ರ ಇದರ ಅನ್ವಯ!

"ಭಿಕ್ಷುಕರ ಮಾಡದು ಸುಲಭ ದ್ವದಪ್ಪ ಆದ್ರೆ ಮುಂದೆ ಅವ್ರುರ ಮೆಂಟೇನ್ ಾಡದ್ಯಂಗೆ ಅಂತ?"

"ಯಂಗೊ ಕಾಲ ಹಾಕ್ತೆ ಬುಡು. ನಾವ್ಗಳ್ಲ ಸರ್ಕಾರ ನಟ್ಟಗುಂಡಿ ಬದುಕಿದ್ವೆ?"

"ನೀನು ಬದುಕಲಿಲ್ಲ, ಆದ್ರೆ ನಮಿಗೆ ಸರ್ಕಾರ ಇಲ್ದೆ ಬದುಕದ್ಯಂಗೆ ್ಯಂಗಾಗ್ಯದೆ. ಆದ್ರೆ ಸರ್ಕಾರ ಯಂಗದಪ್ಪಾ ಅಂದ್ರೇ ಅಲ್ಲಿರೋರಿಗೆ ಎಜುಕೇಶನ್ನ ್ತೀರಿಜು. ಅಂತ ನಾಲೆಡ್ಜ್ ಇಲ್ಲ, ಇನ್ನ ಸರ್ಕಾರ ಯಂಗೆ ನ್ಯದಿತಾಯಿರಬೌದು ೆಕೆ ಲಕ್ಷಸಾಕು."

"ಯಂಗೆ ನ್ಯದಿತಾ ಅದೆ ಅಂತ ಕೇಳ್ತಿಯಾ? ಆಗ್ಲೆ ಎಜುಕೇಷನ್ ಮಿನಿಷ್ಟ ಾಗೊಲುದ್ರು ಭಗವದ್ಗೀತೆ ಓದಂಗೆ ಮಾಡ್ತನಂತೆ" ಎಂದ ಉಗ್ರಿ.

"ಇವತ್ತು ಭಗವದ್ಗೀತೆ ಅಂತನೆ, ನಾಳೆ ಗೋಳವಲಕರ್ ಗೀತೆ ಅಂತನೆ, ಜವಾಗ್ಲು ಇವುರು ವಲ್ಗರ್ ಜನ ಕಣೊ ಉಗ್ರಿ. ಯಂಥಾ ಜನ ತಂದು ೂರಿಸ್ದ ನೋಡು ದ್ಯಾವೇಗೌಡ."

"ತಂದು ಕೂರಿಸ್ದ ಸರಿ. ಈಗ ಡೆಲ್ಲಿಗೋಗಿ ಕುಂತವ್ರುನಲ್ಲ ಹೇಳು?"

"ಅಲ್ಯಾಕೋಗಿದ್ದನೂ?" ಎಂದ ಕಾಳಮಾವ.

"ಗುಡ್ ಕ್ವೆಶ್ಚನ್ ದ್ವದಪ್ಪ, ದ್ಯಾವೇಗೌಡನಿಗೆ ಇದ್ದಕ್ಕಿದ್ದಂಗೆ ರಾಷ್ಟ್ರಪ್ರೇಮ ್ಕಿ ಬಂದದೆ. ಅದ್ಕೆ ಸೀತಾರಾಮ ಯಚೂರಿ ಹಿಂದೆ ತಿರುಗಾಡ್ತಯಿದ್ದನಂತೆ."

"ಎಲ್ಯಾರ ತಿರುಗ್ಲಿಬುಡು, ಅವುನಿನ್ನೇನಾಗಬೇಕು" ಎಂದ ಸೀರ.

"ಅವುನಿನ್ನೇನು ಆಗಬೇಕಾಗಿಲ್ಲ, ಅವುನ ಕತೆ ಮುಗಿತು. ಆದ್ರೆ ಅವುನು ಮ್ಮನಿರದೆ ಏನ್ನಾರ ಮಾಡ್ತನಲ್ಲ, ಅದು ಮುಖ್ಯ ಚಿಗಪ್ಪ. ನೋಡಾಗ್ಲೆ ್ದರಾಮಯ್ಯ ಕಾಂಗ್ರೆಸ್ ಅಧ್ಯಕ್ಷಾಗದಂಗೆ ಮಾಡಿದನಂತೆ."

"ಯಾರೊ ಹೇಳಿದೋರು? ಪಾಪ ಅವುನ್ಯಾಕೆ ಇನ್ನೊಂದು ಪಾರ್ಟಿ ಧ್ಯಕ್ಷಾನ ವಿಷಯದಲ್ಲಿ ಕೈಯಾಡುಸ್ತನೆ?"

"ಮತ್ತದ್ಯಂಗಪ್ಪ ದೇಶಪಾಂಡೆ ಕಾಂಗ್ರೆಸ್ ಅಧ್ಯಕ್ಷಾಯ್ತನೆ?"

"ದೇಶಪಾಂಡೆ ದ್ವಡಕುಳವಂತೆ ಕಣೊ, ದುಡ್ಡು ಖರ್ಚು ಮಾಡಿ ಪಾರ್ಟಿ ಟ್ಟತನಂತೆ."

"ಅಂಗರವುನತ್ರ ದುಡ್ಡದೆ ಅನ್ನು?"

"ಅದೆ ಅಂತ ಕೇಳ್ತಿಯಾ? ಬದ್ದದಂತೆ. ಅವುನು ಭಾಳ ವರ್ಷ ಮಂತ್ರಿಯಾಗಿದ್ದ ಗ್ಯಲ್ಲ ಯಳದು ಯಸಗಂಡು ಗುಡ್ಡೆ ಹಾಯ್ಕಂಡಿದ್ದನಂತೆ. ಅಂಥೋನ್ನ ಾಡದೆ ಬರೀ ಮಾತಾಡೊ ಸಿದ್ದರಾಮಯ್ಯನ್ನ ಮಾಡ್ತರೇನೊ?"

"ಇಲ್ಲ ಬುಡು. ಈ ಟೈಮಲ್ಲಿ ಹಣ ಇರೋನೆ ಅಧ್ಯಕ್ಷಾಗಬೇಕು. ದರಲ್ಲೂ ದೇಶಪಾಂಡೆ ತಕ್ಕಡಿ ಕಡ್ಡಿತರ. ಮಧ್ಯದಲ್ಲಿ ಇದ್ದಕ್ಯಂಡು ಆ ಕಡೆ ಕ್ಕಲಿಗರ ತಟ್ಟೆ, ಈ ಕಡೆ ಲಿಂಗಾಯಿತ್ರ ತಟ್ಟೆ ಬ್ಯಾಲೆನ್ಸ್ ಮಾಡೋ ಗದಲ್ಲಿರೋನು. ಈ ಟೇಮಿಗೆ ಅವುನೆ ಸರಿ. ಆದ್ರು ಕಾಂಗ್ರೆಸ್ ಪಾರ್ಟಿಗೆ ಂದು ಪ್ರೋರ್ಸಿರದಿಲ್ಲ ಕಣೊ. ಈ ಸೂಳೆಮಕ್ಕಳು ಉತ್ತರ ಪ್ರದೇಶದಲ್ಲಾದಂಗೆ ಯ್ತರೆ ನೋ ಡವುಟ್." ■

ಅಂದರೆ ಭಜರಂಗಿಗಳು ಸುರಕ್ಷಿತ!
ಎಂತಹ ನ್ಯಾಯ ನಿಷ್ಠುರತೆ!

ಖಾವಿ ನ್ಯಾಯ!

ಯಡ್ಯೂರಪ್ಪನವರ ತಲೆ ಕೆಟ್ಟು ಗೊಬ್ಬರ ಆಗಿತ್ತು. ಪಾಪ ಆಗದೇ ರುತ್ತೆ. ಯಾರನ್ನು ನೋಡಿದರೂ ಪಿತೂರಿಗಾರನಂತೆ ಕಾಣಿಸುತ್ತಿದ್ದರು. ಾವ ಘಟನೆ ಸಂಭವಿಸಿದರೂ ತಮ್ಮ ವಿರುದ್ಧದ ಸಂಚಾಗಿ ಗೋಚರಿಸುತ್ತಿತ್ತು. ಾನಸಿಕ ಉದ್ವೇಗಕ್ಕೆ ಒಳಗಾಗಿ ಅಸಂಬದ್ಧ ಹೇಳಿಕೆಗಳನ್ನು, ಐಲುಪೈಲು ಡವಳಿಕೆಗಳನ್ನ ಮಾಡ ಹತ್ತಿದರು. ಇದರಿಂದ ಸರ್ವಸಂಘಪರಿತ್ಯಾಗಗಳಲ್ಲಿ ಲವರಿಗೆ ಅಗಾಧವಾದ ನೋವುಂಟಾಯಿತು. ದಡ್ಡಮಕ್ಕಳ ಸಹಾಯಕ್ಕೆ ಲ್ಲುವುದು ಧಾರ್ಮಿಕ ಪರಂಪರೆಯೇ ಆದುದರಿಂದ ಅವರ ನೆರವಿಗೆ ಂದರು. ಧಾರ್ಮಿಕ ಸ್ವಾತಂತ್ರ್ಯ ನೀಡಿರುವ ಸಂವಿಧಾನದ ಬಗ್ಗೆಯೇ ವರಿಗೆ ಅಸಮಾಧಾನ ಮೂಡಿತು. ಅಸಹ್ಯ ತರಿಸಿತು. 'ಮತಾಂತರ ಷೇಧ ಕಾನೂನು ಜಾರಿಗೆ ತನ್ನಿ' ಎಂದು ಕರಾವಳಿ ಮಠಾಧೀಶರ ಕೂಟ ಸರ್ಕಾರವನ್ನು ಒತ್ತಾಯಿಸಿ ತಮ್ಮ ಧರ್ಮ ಪರಂಪರೆಯನ್ನು ುಂದುವರೆಸಿತು.


ಅತ್ತ ವಟುಶ್ರೇಷ್ಠರೆಲ್ಲ ಸರ್ಕಾರದ ವಕಾಲತ್ತು ವಹಿಸುತ್ತಿರಲಾಗಿ ಇತ್ತ ತಿಯ ಕರುಳು ಸಂಬಂಧ ಸಿರಿಗೆರೆ ಮಠಾಧೀಶರಾದ ಡಾ. ಶಿವಕುಮಾರ ಾಚಾರ್ಯ ಅವರನ್ನು ಬಾಧಿಸಿತು. ಬಸವ ಅನುಯಾಯಿ ಆದ ಅವರಿಗೆ ಡ್ಯೂರಪ್ಪ ಅನುಭವಿಸುತ್ತಿರುವ ಹಿಂಸೆ ತೀವ್ರವಾದ ನೋವು ತಂದಿತು. ್ಯಬಳ್ಳಿ ಸಂಬಂಧವನ್ನೇ ಮರೆತು ಕೆಲವು ಶಾಸಕರು ಮುಖ್ಯಮಂತ್ರಿ ಾಗೂ ಅವರ ಸರ್ಕಾರದ ವಿರುದ್ಧ ಬಹಿರಂಗವಾಗಿಯೇ ಿಭಟಸುತ್ತಿರುವುದು ಅನ್ಯಾಯದ ಪರಮಾವಧಿಯಾಗಿ ತೋರಿತು. ಿಗೆರೆಯಲ್ಲಿ ನಡೆದ ಲಿಂಗೈಕ್ಯ ಜಗದ್ಗುರು ಶಿವಕುಮಾರ ಶಿವಾಚಾರ್ಯ ್ವಾಮೀಜಿ ಅವರ ಶ್ರದ್ಧಾಂಜಲಿ ಸಭೆಯೇ ತಮ್ಮ ಅಸಮಾಧಾನ ಹೊರಹಾಕಲು ಕ್ತ ಸಂದರ್ಭ ಎಂದು ಭಾವಿಸಿದರು. ಕಾರ್ಯಕ್ರಮದ ನಡುವೆಯೇ ಸಭಿಗೆ ಮೆಚ್ಚುಗೆ ಆಗುವಂತೆ ಶಾಸಕ ರೇಣುಕಾಚಾರ್ಯರನ್ನು ತಮ್ಮ ಳಿಗೆ ಕರೆದು ಸರ್ಕಾರ ಹಾಗೂ ಮುಖ್ಯಮಂತ್ರಿ ವಿರುದ್ಧ ಅಪಸ್ವರ ೆಯದಂತೆ ಎಚ್ಚರಿಕೆ ನೀಡಿ ವೀರಶೈವ ಧರ್ಮವನ್ನು ಪರಿಪಾಲಿಸಿದ ಾರ್ಥ ಭಾವನೆಯಿಂದ ತೃಪ್ತಿಗೊಂಡರು.

ವೀರಶೈವ ಧರ್ಮವೇನು ಕರ್ನಾಟಕಕ್ಕೆ ಮಾತ್ರ ಸೀಮಿತವೇ. ಆಂಧ್ರ, ಹಾರಾಷ್ಟ್ರಗಳಿಂದಲೂ ಕಾವಿಧಾರಿಗಳು ಬೆಂಗಳೂರಿಗೆ ಚಿತ್ತೈಸಿದರು. ೀರಶೈವ ಧರ್ಮ ಉಳಿಸಲು ಪ್ರತಿಜ್ಞೆ ಮಾಡಿದರು. ನೂರಐವತ್ತು ಮಠದ ಗದ್ಗುರುಗಳು ಸೇರಿ ಮತಾಂತರಿಗಳಿಗೆ ಎಚ್ಚರಿಕೆ ನೀಡಿದ್ದೇವೆ ಎಂದು ಿದರು. ರಾಜ್ಯಪಾಲರಿಗೂ ಮನವಿ ನೀಡಿದರಂತೆ.

ಈ ಅವಾಂತರಕಾರಿಗಳ ನಡುವೆ ಬಸವ ಬದುಕಿದ್ದರೆ ಮುಖ್ಯಮಂತ್ರಿಯ ನವಾಗಿ ಅವನನ್ನು ಗಲ್ಲಿಗೇರಿಸುತ್ತಿದ್ದರೋ ಏನೋ! ■


'ನ್ಯೂ ಕಲ್ಕತ್ತಾ'

ಮರೆಯುವ ಮುನ್ನ



ಪಿ. ಲಂಕೇಶ್ ಡಿಸೆಂಬರ್ 23, 1990

ಮೊನ್ನೆ 'ನ್ಯೂಯಾರ್ಕ್ ಟೈಮ್ಸ್' ಎಂಬ ಪ್ರಖ್ಯಾತ ಅಮೆರಿಕನ್ ಪತ್ರಿಕೆ ನ್ಯೂಯಾರ್ಕ್ ನಗರದ ಅಂದಗೇಡಿತನ, ಕೊಳಕುತನವನ್ನು ವಿವರಿಸಿ ಅಮೆರಿಕನ್ನರನ್ನು ಎಚ್ಚರಿಸಲು 'ಕಲ್ಕತ್ತಾ ಆಗುತ್ತಿರುವ ನ್ಯೂಯಾರ್ಕ್!' ಎಂಬ ಶೀರ್ಷಿಕೆ ಕೊಟ್ಟು ವರದಿ ಮಾಡಿತು. ಇದು ಸಾಲದೆಂಬಂತೆ ಒಂದು ಸಂಪಾದಕೀಯವನ್ನು ಕೂಡ ಬರೆದು 'ನ್ಯೂ ಕಲ್ಕತ್ತಾ' ಎಂದಿತು. ಈ ತರಹದ ದೊಡ್ಡ ಪತ್ರಿಕೆಗಳ ಅಮಲು, ಕೊಬ್ಬು ಮತ್ತು ಆಕರ್ಷಕವಾದ ಶೀರ್ಷಿಕೆಗಾಗಿ ಎಂಥದನ್ನೂ ಬರೆಯಬಲ್ಲ ಪ್ರತಿಷ್ಠೆ-ಎಲ್ಲವನ್ನೂ ನೀವು ಊಹಿಸಬಲ್ಲಿರಿ. ಭಾರತದಲ್ಲಿದ್ದ ಈ ನ್ಯೂಯಾರ್ಕ್ ನಗರದ ವ್ಯಕ್ತಿಯೊಬ್ಬರಿಗೆ ಇದನ್ನು ನೋಡಿ ಸಿಟ್ಟು ಬಂತು. ಆತ ಈ ಪತ್ರಿಕೆಗೆ ಬರೆದರು: "ಈಗಾಗಲೇ ಸಾಕಷ್ಟು ನೊಂದಿರುವ ಕಲ್ಕತ್ತಾ ನಗರವನ್ನು ಹೀಗೆ ಬರೆದು ಇನ್ನಷ್ಟು ಹೀಯಾಳಿಸುವ ಅಗತ್ಯ ಕಾಣುವುದಿಲ್ಲ, ಕಲ್ಕತ್ತಾದಲ್ಲಿ ಬಡತನವಿದೆ, ಕೊಳಚೆ ಇದೆ, ಗಲೀಜಿದೆ ನಿಜ. ಆದರೆ ಕಲ್ಕತ್ತಾದಲ್ಲಿರುವ ಜೀವಂತಿಕೆ ನ್ಯೂಯಾರ್ಕ್‌ನಲ್ಲಿಲ್ಲ; ಇಲ್ಲಿರುವ ಶಾಂತಿ ಮತ್ತು ಅಹಿಂಸೆ ಕೂಡ ಅಲ್ಲಿಲ್ಲ, ನ್ಯೂಯಾರ್ಕ್ ಸಬ್‌ವೇಗಳ ಕ್ರೌರ್ಯ, ರಕ್ತಪಾತ ಕಲ್ಕತ್ತಾದಲ್ಲಿಲ್ಲ, ಅಷ್ಟೇ ಅಲ್ಲ, ಕಲ್ಕತ್ತಾದ ಹೊಸ ಸಬ್‌ವೇಯ ಅರ್ಧದಷ್ಟು ಕೂಡ ನ್ಯೂಯಾರ್ಕ್ ಸಬ್‌ವೇಗಳು ಚೊಕ್ಕಟವಾಗಿಲ್ಲ... ಹೀಗಿದ್ದಾಗ ಒಂದು ಪಟ್ಟಣವನ್ನು ಇನ್ನೊಂದಕ್ಕೆ ಹೋಲಿಸಿ ಅವಮಾನ ಮಾಡುವುದು ತಪ್ಪಲ್ಲವೆ?"



ಈ ದೊಡ್ಡ ಪತ್ರಿಕೆಗಳ ದಡ್ಡತನ ಮತ್ತು ಸ್ವಾರ್ಥ ಇಷ್ಟಕ್ಕೇ ನಿಲ್ಲುವುದಿಲ್ಲ, ಬಹುಪಾಲು ಅಮೆರಿಕನ್ ಪತ್ರಿಕೆಗಳು ಸರ್ಕಾರದ ನಿಲುವನ್ನೇ ತೆಗೆದುಕೊಳ್ಳುತ್ತವೆ. ಸರ್ಕಾರಿ ಕರಪತ್ರಗಳಿಗೂ ಇವಕ್ಕೂ ವ್ಯತ್ಯಾಸವಿರುವುದಿಲ್ಲ, ನಾನು ಓದುವ 'ಟೈಮ್' ಮತ್ತು 'ನ್ಯೂಸ್ ವೀಕ್' ವಾರಪತ್ರಿಕೆಗಳು ನಗೆ ತರಿಸುತ್ತವೆ. ಒಮ್ಮೆ ಖ್ಯಾತ ಸಿನಿಮಾ ನಿರ್ದೇಶಕ ಹಿಚ್‌ಕಾಕ್ ಇಂಗ್ಲೆಂಡಿನ (ನಮ್ಮ 'ಹಿಂದೂ' ತರಹದ) ಶ್ರಿಮದ್‌ಗಾಂಭೀರ್ಯಕ್ಕೆ ಹೆಸರಾದ 'ಟೈಮ್ಸ್' ದಿನಪತ್ರಿಕೆಯ ಬಗ್ಗೆ ಹೇಳಿದ್ದು ನೆನಪಾಗುತ್ತದೆ: "ಟೈಮ್ಸ್ ಒಳ್ಳೇ ಪತ್ರಿಕೆ.... ಅದರ ಗಾಂಭೀರ್ಯ ನಗೆ ಉಕ್ಕಿಸುತ್ತದೆ!"

'ಟೈಮ್' ವಾರಪತ್ರಿಕೆಯಲ್ಲಿ ಯಾವುದೇ ಒಂದು ವಿಷಯ ಕುರಿತು ಓದುಗರ ಪತ್ರ ಅಚ್ಚಿಸುವುದು ತಮಾಷೆಯಾಗಿರುತ್ತದೆ; ಒಂದು ಪರ, ಇನ್ನೊಂದು ವಿರೋಧ, ಸಮತೋಲನ ಸಾಧಿಸುವುದಕ್ಕಾಗಿ ಹೀಗೆ ಮಾಡುತ್ತದೆ. ಅಲ್ಲದೆ ಓದಿಸಿಕೊಳ್ಳುವುದಕ್ಕಾಗಿ ಸದ್ದಾಂ ಹುಸೇನ್ ಪರ, ಅವನ ವಿರೋಧಿಗಳನ್ನೂ ತಣಿಸುವುದಕ್ಕಾಗಿ ಅವನ ವಿರೋಧ..... ಹಾಗೆಯೇ ಯುದ್ಧದ ಭಯ ಹುಟ್ಟಿಸುವುದು, ವಿಯೆಟ್ನಾಂ ಜ್ಞಾಪಿಸುವುದು, ಸೈನಿಕರ ತಂದೆತಾಯಿ, ಪ್ರೇಯಸಿ, ಗೆಳೆಯರ ಪತ್ರ, ಗೋಳು ಪ್ರಕಟಿಸುವುದು.... ಎಲ್ಲವನ್ನೂ ವೈಯಕ್ತಿಕಗೊಳಿಸಿ ವಾಚಕರ ತಂಡ ಹೆಚ್ಚಿಸುವುದು. ಅಮೆರಿಕಾ ವಿಯೆಟ್ನಾಂ ಯುದ್ಧದಲ್ಲಿ ಸೋತದ್ದಕ್ಕೆ ಕಾರಣ ಅಮೆರಿಕನ್ನರಿಗೇ ಗೊತ್ತಿರುವಂತಿಲ್ಲ-ರಣರಂಗವನ್ನು ನಡುಮನೆಗೆ ತಂದರೆ, ಯುದ್ಧ ಮಾಡುವವನಿಗೆ ಕ್ಯಾಮೆರಾ ಹಿಡಿದರೆ ಏನಾಗುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ. ಯುದ್ಧಕ್ಕೆ ದ್ವಿದಳಗೊಳ್ಳದ, ಆಜ್ಞೆಯನ್ನು ಪಾಲಿಸುವಾಗ ಅನುಮಾನವಿಲ್ಲದ ಮನುಷ್ಯ ಬೇಕು. ಅಮೆರಿಕಕ್ಕೆ ಪ್ರಚಾರ ಮತ್ತು ಪತ್ರಿಕಾಪ್ರಸಾರ, ಟಿವಿಯ ಜನಪ್ರಿಯತೆ ಬೇಕು.

ಅಂದಹಾಗೆ, ನಿಮಗೆ ಗೊತ್ತಿರಲಾರದ ಒಂದು ವಿಷಯವಿದೆ. ಹರ್ಸ್ಟ್ ಎಂಬ ಪತ್ರಿಕಾ ಮಾಲೀಕನೊಬ್ಬ ತನ್ನ ಪತ್ರಿಕೆಗಳ ಪ್ರಸಾರ ಹೆಚ್ಚಿಸಲು ಎರಡು ದೇಶಗಳನ್ನು ಯುದ್ಧಕ್ಕೆ ಹಚ್ಚಿದ... ಗುಟ್ಟು ಗೊತ್ತಾದೊಡನೆ ಯುದ್ಧ ನಿಂತಿತು, ಪ್ರಸಾರ ಇಳಿಯಿತು.

ಚಿಲಿಯ ಚಳಿ



ಮೊನ್ನೆ ಒತ್ತಾಯಕ್ಕೆ ಮಣಿದು ಇಂಗ್ಲಿಷ್ ಲೇಖನವೊಂದನ್ನು ಬರೆಯಬೇಕಾಯಿತು- 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ 'ಸಾಹಿತಿಗಳು ಈಚೆಗೆ ಓದಿದ ಪುಸ್ತಕ' ಎಂಬುದು ವಿಷಯ. ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಡಲು ಬೇಜಾರು; ಆದರೆ ಇಡೀ ಒಂದು ಗಂಟೆ ಕೂತು ಬರೆದ ಪುಟ್ಟ ಲೇಖನ ನಮ್ಮ ಓದುಗರ ಗಮನಕ್ಕೆ ಬರಬೇಕೆಂಬ ಆಸೆ. ಆದ್ದರಿಂದ ಈ ಟಿಪ್ಪಣಿ ಬರೆಯುತ್ತಿದ್ದೇನೆ.

ನಾನು ಮೆಚ್ಚಿ ಬರೆದ ಪುಸ್ತಕದ ಹೆಸರು 'ಕ್ಲಾಂಡಸ್ಟೈನ್ ಇನ್ ಚಿಲಿ.' ಪುಸ್ತಕದ ಕರ್ತೃ ಮಾರ್ಕ್ವೆಸ್. ಒಮ್ಮೆ ಈ ಬಗ್ಗೆ ನಾನು ಬರೆದಿದ್ದರೂ ಸರಿಯಾಗಿ ಬರೆದಿರಲಿಲ್ಲ, ನೂರು ಪುಟಗಳ ಈ ಪುಸ್ತಕ ಮಾರ್ಕ್ವೆಸ್‌ನ ಇತರ ಪುಸ್ತಕಗಳಂತಿಲ್ಲ, ಯಾಕೆಂದರೆ ಇದು ಕತೆಯಾಗಲಿ, ಕಾದಂಬರಿಯಾಗಲಿ, ಜೀವನಚರಿತ್ರೆಯಾಗಲಿ ಅಲ್ಲ. 1985ರಲ್ಲಿ ಮ್ಯಾಗ್ಯುಯಲ್ ಲಿಟ್ಟಿನ್ ಎಂಬ ಚಿಲಿಯ ಸಿನಿಮಾ ನಿರ್ದೇಶಕ ತನ್ನ ದೇಶಾಂತರದಿಂದ ಚಿಲಿಗೆ ಗೋಪ್ಯವಾಗಿ ಹೋಗಿ ಒಂದು ಡಾಕ್ಯುಮೆಂಟರಿ ಚಿತ್ರ ಮಾಡಿದ. 1973ರಲ್ಲಿ ಆಯಂಡೆ ಎಂಬ ಸೋಷಲಿಸ್ಟ್ ಅಧ್ಯಕ್ಷನನ್ನು ಕೊಂದು ಅಧಿಕಾರಕ್ಕೆ ಬಂದ ಆಗಸ್ಟೋ ಪಿನೋಶೆಟ್ ಎಂಬ ಸರ್ವಾಧಿಕಾರಿ ಆಗಲೂ ಅಧಿಕಾರದಲ್ಲಿದ್ದ. ಅವನ ದಬ್ಬಾಳಿಕೆ ಮತ್ತು ದಮನ ಮುಂದುವರಿದಿದ್ದವು. ಚಿಲಿ ದೇಶದ ಜನರು ತಮ್ಮ ಭಯ, ಆತಂಕದಲ್ಲಿ ತಮ್ಮ ನೆಚ್ಚಿನ ಕವಿ ಪ್ಯಾಬ್ಲೋ ನೆರೂಡ ಮತ್ತು ತಮ್ಮ ನೆಚ್ಚಿನ ನಾಯಕ ಆಯಂಡೆಯನ್ನು ನೆನೆದು ಬದುಕಿದ್ದರು. ಆಯಂಡೆ ರಾಜಕಾರಣಿ; ನೆರೂಡ ಕವಿ. ಆಯಂಡೆ ಅವರ ಗೆಳೆಯನಂತೆ, ತಂದೆಯಂತೆ; ಆತ ಕುಟುಂಬದ ವೈದ್ಯನಂತೆ ಅವರ ಜೀವನದ ಭಾಗವಾಗಿ ಹೋಗಿದ್ದ. ಕವಿ ನೆರೂಡ ಅವರ ಹೃದಯವನ್ನು ಬೆಚ್ಚಗಿಟ್ಟವನು. ಹನ್ನೆರಡು ವರ್ಷಗಳ ನಿರಂತರ ದಬ್ಬಾಳಿಕೆಯ ಅಡಿಯಲ್ಲೂ ಚಿಲಿಯ ಜನರು ಆಯಂಡೆಯ ನೆನಪುಗಳನ್ನು ಇಟ್ಟುಕೊಂಡದ್ದು, ನೆರೂಡನ ಸಾಲುಗಳನ್ನೂ ಪಠಿಸುತ್ತಿದ್ದುದು ಹೃದಯ ಕರಗಿಸುವಂತಿತ್ತು. ಪಿನೋಶೆಟ್ ಚಿಲಿಯ ಸಂಪತ್ತು ಹೆಚ್ಚಿಸಿದ ಮೇಲೆ ಕೂಡ ಚಿಲಿಯ ಜನ ತಮ್ಮ 'ಇಪ್ಪತ್ತು ಪ್ರೇಮ ಕವನ' ಬರೆದ ನೆರೂಡ ಮತ್ತು ಸಹಸ್ರಾರು ಪ್ರೀತಿಯ ಕ್ರಿಯೆಯಲ್ಲಿ ತೊಡಗಿದ್ದ ಆಯಂಡೆಯನ್ನು ತಮ್ಮ ಸ್ವಾಭಿಮಾನದ, ತಮ್ಮ ಚೈತನ್ಯದ ಕುರುಹಾಗಿ ಅಪ್ಪಿಕೊಂಡಿದ್ದರು. ರೋಮಿನ ಬಿಶಪಿನಂತೆ ನಿಧಾನವಾಗಿ, ಚಿಂತೆಯಲ್ಲಿ ಮುಳುಗಿ ನಡೆಯುತ್ತಿದ್ದ ನೆರೂಡ ಅವರ ದುಗುಡದಂತೆಯೇ ಇದ್ದ.

ಕವಿ ನೆರೂಡನ ಮತ್ತು ಎಲ್ಲ ಎಡಪಂಥೀಯ ನಾಯಕರ ಗೆಳೆಯ ಮಾರ್ಕ್ವೆಸ್. ಎಡಪಂಥ ಕಷ್ಟದಲ್ಲಿದೆ. ಕಮ್ಯುನಿಸ್ಟರು ತಲೆಮರೆಸಿಕೊಂಡು ಓಡಾಡುವಂತಾಗಿದೆ. ಆದರೆ ಕಮ್ಯುನಿಸ್ಟ್ ಅನ್ನಿಸಿಕೆಯ ಆಳದಲ್ಲಿನ ನ್ಯಾಯವಂತಿಕೆ, ಆತ್ಮಾಭಿಮಾನವನ್ನು ಎತ್ತಿತೋರುವುದು ಮಾರ್ಕ್ವೆಸ್ ಮತ್ತಿತರರ ವೈಶಿಷ್ಟ್ಯ.

ಮೌಲ್ಯ


ನಾಣ್ಯದ ಎರಡು ಮುಖಗಳೂ
ಜೊತೆಗಿವೆ
ಯಾವುದು ಜಾಸ್ತಿ?
ಯಾವುದು ಕಡಿಮೆ?

ಎರಡೂ ಒಟ್ಟಿಗಿದ್ದರೇನೇ
ಒಂದು ನಾಣ್ಯ
ಚಲಾವಣೆಗೆ ಎರಡೂ ಮುಖ
ಇರಲೇಬೇಕು.

ಆಟ ಆಡಲು ಬಳಸುವ
ಟಾಸ್ ಮಾತು ಬೇರೆ
ಅದಕ್ಕೆ ಖಚಿತವಾದ
ಒಂದೇ ಮುಖ ಸಾಕು.

ಆದರೆ
ಆಟವಲ್ಲದ ಜೀವನ ಚಲನೆಗೆ
ಇಡೀ ನಾಣ್ಯದ ಮೌಲ್ಯ ಬೇಕು
ಎರಡು ಮುಖ ಬೇಕು.

ಆದರೆ
ಇವು ದ್ರೋಹದ ಎರಡು ತಲೆಗಳಲ್ಲ;
ಸಮದೃಷ್ಟಿಯ ಗಂಡಭೇರುಂಡ!
ಅದನ್ನೂ-ಇದನ್ನೂ
ಸಮನಾಗಿ ತೂಗಿ
ಕೊನೆಗೆ ಒಮ್ಮನ
ನಡೆಯುವ ನಾಣ್ಯ!



■ ಜ್ಯೋತಿ ಗುರುಪ್ರಸಾದ್

‘ನಾನು ಬರೆದಿದ್ದೇ ಫೈನಲ್’

ಕೇಳ ಸೋಮವಾರ ದಾವಣಗೆರೆಗೆ ಹೋಗುತ್ತಾ ನಮ್ಮ ತಂಡ ಚಿತ್ರದುರ್ಗ ತಲುಪಿಕೊಂಡಾಗ ರಾತ್ರಿ ಹತ್ತಾಗಿತ್ತು. ಮಾರನೇ ಬೆಳಗ್ಗೆ ದಾವಣಗೆರೇಲಿ ಚರ್ಚ್ ಮೇಲಿನ ಬಜೆಪಿಗಳ ದಾಳಿ ಖಂಡಿಸಿ ಬೃಹತ್ ಪ್ರತಿಭಟನೆ ನಡೆಯುವುದಿತ್ತು. ದುರ್ಗದಲ್ಲಿ ಊಟಕ್ಕೆಂದು ನಿಂತಾಗ ಪತ್ರಕರ್ತ ಗೆಳೆಯರಾದ ಚಳ್ಳಕೆರೆ ಬಸವರಾಜ್, ಈಟೀವಿಯ ಮಹೇಶ್ ಬಾಬು ಸಿಕ್ಕರು. ಊಟದ ನಡುವೆ ಕೆಲಸ ಬೋಗಸೆಯ ವಿಚಾರ ಬಂದಾಗ

"ಏನ್ ಮಾಡ್ತಿದ್ದಿಯೆಲೇ ಬಸಣ್ಣಾ?" ಅಂದೆ.

"ನಂದೇನಪ್ಪಾ, ಆರಾಮ್‌ಕಿದ್ದೀನಿ... ರಿಪೋರ್ಟ್ ಬರ್ಕಂತಾ" ಅಂದ ಗೆಳೆಯ.

ಬಳ್ಳಾರಿಯಿಂದ ಹೊರಡುವ ಡೈಲಿ ಒಂದರ ರಿಪೋರ್ಟರ್ ಆಗಿರುವ ಮಿತ್ರ ತನ್ನ ಕಸುಬನ್ನು ವಿವರಿಸುತ್ತಾ ಮಾತಿನ ನಡುವೆ "ನಾನೇನ್ ಬರೆದು ಕಳುಸ್ತೀನೊ ಅದೇ ಫೈನಲ್" ಅಂದ.

ಪ್ರಜಾವಾಣಿ

ಪತ್ರಕರ್ತನೊಬ್ಬ 'ನಾನು ಬರೆದಿದ್ದೇ ಅಂತಿಮ' ಅಂದುಕೊಳ್ಳುವುದು ಸರೀನಾ? ಸಂಪಾದಕನೊಬ್ಬ 'ನನ್ನ ತೀರ್ಮಾನವೇ ಕೊನೆ' ಅಂತ ನಂಬಿಕೊಳ್ಳುವುದು ಉಚಿತವಾ ಎಂದು ಯೋಚಿಸುತ್ತಾ ದಾವಣಗೆರೆ ಸಮಾವೇಶ ಮುಗಿಸಿಕೊಂಡು ಬೆಂಗಳೂರಿಗೆ ಬಂದು ಬುಧವಾರ ಬೆಳ್ಳಂಬೆಳಗ್ಗೆ ಪ್ರಜಾವಾಣಿ ತೆರೆದು ನೋಡಿದರೆ

ಸಮಾವೇಶದ ಬಗ್ಗೆ ಒಂದಕ್ಷರದ ವರದಿಯೂ ಇರಲಿಲ್ಲ!

ಸರಿ, ಇಂತಾದ್ದೊಂದು ಸಮಾವೇಶದ ವರದಿ ಪ್ರಜಾವಾಣಿಯ ರಾಜ್ಯಪುಟದಲ್ಲಿ ಪ್ರಕಟವಾಗಕೂಡದೆಂಬ 'ಫೈನಲ್' ತೀರ್ಮಾನ ಹೇಗಾಯಿತೆಂದು ವಿಚಾರಿಸುವ ಕೆಲಸ ಶುರುವಾಯಿತು.

ಗೆಳೆಯನೊಬ್ಬ ಬೇಸರ ತಡೆಯಲಾಗದೆ ಪ್ರಜಾವಾಣಿಯ key posit ion ನಲ್ಲಿರುವ ಹಿರಿಯ ವ್ಯಕ್ತಿಯೊಬ್ಬರಿಗೆ ಫೋನ್ ಮಾಡಿದರೆ 'ಇಂತಾವು ದಿನಾ ನಡೀತಿ ರುತ್ತೆ ಬಿಡಿ' ಎಂಬಂತೆ ಮಾತಾಡಿಬಿಟ್ಟರಂತೆ.

ಬಿಡಿ ಚಿತ್ರಗಳು

• ಈಶ


ನಾವೆಲ್ಲಾ ಕಂಡಂತೆ ಕರ್ನಾಟಕದ ಹತ್ತಾರು ಊರುಗಳಲ್ಲಿ ಚರ್ಚ್‌ಗಳ ಮೇಲೆ ದಾಳಿಗಳಾಗಿ ನೂರಾರು ಕ್ರಿಶ್ಚಿಯನ್ ಜನ ಭಜರಂಗಿಗಳಿಂದ ಹಾಗೂ ಪೊಲೀಸರಿಂದ ಹಲ್ಲೆಗೊಳಗಾದರು. ಇದನ್ನೆಲ್ಲಾ ಪ್ರತಿಭಟಿಸಲು ಪೊಲೀಸರ ಕಿರುಕುಳಗಳ ನಡುವೆಯೂ ದಾವಣಗೆರೆಗೆ ಬಂದವರು ಎರಡೂವರೆ ಸಾವಿರ ಜನ. ಅದೇ ರೀತಿ ಹಲ್ಲೆ-ದಾಳಿಗಳ ಬಗ್ಗೆ ಲಕ್ಷಾಂತರ ಜನರಿಗೆ ಆತಂಕವಿತ್ತು. ಇಂಥ ಸಮಾವೇಶಗಳು, ಅಲ್ಲಿ ವ್ಯಕ್ತವಾಗುವ ಐಕ್ಯತೆ, ಬೆಂಬಲಗಳು ಎಲ್ಲರಲ್ಲೂ ಧೈರ್ಯ ತುಂಬಬಲ್ಲಂತವು. ಆದರೆ ಅದೇ ವರದಿಯಾಗದಿದ್ದರೆ, ಜನರಿಗೆ ತಲುಪದಿದ್ದರೆ? ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕಗಳು ಇಂತಹವನ್ನು ನಿರ್ಲಕ್ಷಿಸಿದರೆ ನಮಗೇನೂ ಆಶ್ಚರ್ಯವಾಗುವುದಿಲ್ಲ ಬಿಡಿ, ಆದರೆ ಪ್ರಗತಿಪರ, ಜನಪರ ಅನಿಸಿಕೊಂಡಿರುವ ಪ್ರಜಾವಾಣಿಯೆ ಇಂತಾ ಸಂದರ್ಭದಲ್ಲಿ Hostile ಆಗಿಬಿಟ್ಟರೆ!

ಪ್ರಜಾವಾಣಿಗೆ ಈ ವರದಿ ಯಾಕೆ ಬೇಡವಾಯಿತೆಂಬುದು ಈಗ ನಿಮ್ಮ ಊಹೆಗೆ ಬಿಟ್ಟ ವಿಚಾರ. ಮತ್ತೆ ಪತ್ರಕರ್ತರ ವಿಚಾರಕ್ಕೇ ಬಂದರೆ 'ನಾನು ಮಾಡಿದ್ದೇ ಸರಿ, ಬರೆದಿದ್ದೇ ಫೈನಲ್' ಅಂತ ಏಕಾಂತದಲ್ಲಿ ಭ್ರಮಿಸಿಕೊಳ್ಳುವುದು ಸಲೀಸು. ಆದರೆ ಪತ್ರಿಕೆಯ ಮತ್ತೊಂದು ತುದಿಯಲ್ಲಿ ಓದುಗ ಅಂತ ಇನ್ನೊಬ್ಬನಿರುತ್ತಾನಲ್ಲ,

ಅವನು ನಿಮ್ಮ ಮಾತಿಗೆ ಕಿವಿ ಕೊಡದೆ ಹೋದರೇನು ಗತಿ? ನಿಮ್ಮ ಉದ್ಧಟತನ ಓದುಗನಲ್ಲಿ ಜಿಗುಪ್ಸೆ ನಿರಾಶೆ ಮೂಡಿಸಿಬಿಟ್ಟರೆ ಅವನು ನಿಮ್ಮ ಪತ್ರಿಕೆಯ ಓದುಗನಾಗಿ ಯಾಕೆ ಉಳಿಯುತ್ತಾನೆ ಹೇಳಿ?

ಪ್ರಜಾವಾಣಿಗೆ ಈ ಪ್ರಶ್ನೆ?

ಬಳ್ಳಾರಿ ರೆಡ್ಡಿಗಳ ಜೊತೆ ಗೌಡರ ಡೀಲು!



ಬಳ್ಳಾರಿಯಲ್ಲೊಂದು ದೀಲು ಕುದುರಿದೆ!

ಗಣಿ ಲೂಟಿಕೋರರಾದ ರೆಡ್ಡಿ ಬ್ರದರ್ಸ್ ದಂಧೆಗೆ ಯಾವುದೇ ಅಡೆತಡೆ ಬರದಂತೆ, ಅವರ ಅಕ್ರಮ ಕೆಲಸಗಳಿಗೆ ಅಭಯಹಸ್ತ ನೀಡುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡರು ವ್ಯವಸ್ಥೆ ಮಾಡಿಕೊಟ್ಟಿರುವ ಡೀಲಿದು.

ವಿಚಾರ ಏನೆಂದರೆ ಕರವೇಯ ಬಳ್ಳಾರಿ ಜಿಲ್ಲಾಧ್ಯಕ್ಷನಾಗಿ ಇದುವರೆಗೂ ಇದ್ದ ಮುನಳ್ಳಿ ಚಂದ್ರಶೇಖರನನ್ನು ಇಳಿಸಿ ರೆಡ್ಡಿಗಳ ನೆಂಟ ಪ್ರತಾಪರೆಡ್ಡಿಯನ್ನು ಈಗ ತಂದು ಕೂರಿಸಲಾಗಿದೆ. ಇದು ಯಾಕೆಂದರೆ ಈಗ್ಗೆ 15 ದಿನಗಳ ಹಿಂದೆ ಬಳ್ಳಾರಿಯ ರಸ್ತೆ ದುರವಸ್ಥೆಗಳ ವಿರುದ್ಧ ಒಂದು ಭಾರಿ ಪ್ರತಿಭಟನೆ ನಡೆಯಿತು. ಅಲ್ಲಿನ ಮೋಕಾ ರೋಡಿನಲ್ಲಿ ದಿನಬೆಳಗಾಗುತ್ತಿದ್ದಂತೆ ಅದಿರು ಲಾರಿಗಳ ಮೆರವಣಿಗೆ ಶುರುವಾಗುತ್ತಿತ್ತು. ಓವರ್ ಲೋಡ್ ಆಗಿರುವ ಈ ಲಾರಿಗಳು ಜನವಸತಿ ಹೆಚ್ಚಾಗಿರುವ ಈ ಏರಿಯಾ ಹಾದುಹೋಗುವಾಗ ಇಡೀ ರಸ್ತೆ, ಅಂಗಡಿ, ಮನೆಯಷ್ಟೇ ಅಲ್ಲ, ಇಡೀ ಜನರ ಮೈಕೈಯೆಲ್ಲಾ ಕೆಂಪುಧೂಳು ಮೆತ್ತಿಕೊಂಡು ಪರದಾಡುವುದೇ ನಿತ್ಯ ಕಾಯಕವಾಗುತ್ತಿತ್ತು. 'ವಸತಿ ಪ್ರದೇಶಗಳ ಬಿಟ್ಟು ಹೈವೇನಲ್ಲಿ ಹೋಗಿ' ಅಂತಾ ಕೇಳಿದರೆ 'ಆ ರೋಡು ಸರಿಯಿಲ್ಲ' ಎಂಬ ರೆಡಿಮೇಡ್ ಉತ್ತರ ಲಾರಿ ಡ್ರೈವರ್‌ಗಳದು... ಇದನ್ನು ನೋಡಿ ನೋಡಿ ಬೇಸತ್ತ ಜನ ಕೊನೆಗೆ ಒಂದು ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ದೂರೂ ಕೊಟ್ಟರು. ಈ ಪ್ರತಿಭಟನೆಯ ನಾಯಕತ್ವ ವಹಿಸಿದ್ದವರು ಬಳ್ಳಾರಿಯ ರಕ್ಷಣಾವೇದಿಕೆ ಘಟಕದವರು.

ಕೇವಲ ಜನಸಾಮಾನ್ಯರು ಗಲಾಟೆ ಮಾಡಿದ್ದರೆ ರೆಡ್ಡಿಗಳು ಕಿಂಚಿತ್ತೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲವೆಂದು ಕಾಣುತ್ತದೆ. ಆದರೆ ಯಾವಾಗ ಕರ್ನಾಟಕ ರಕ್ಷಣಾ ವೇದಿಕೆಯ ಹೆಸರು ಕಾಣಿಸಿತೋ ಆಗಲೇ ಹುಶಾರಾದ ರೆಡ್ಡಿಗಳು ಸೀದಾ ನಾರಾಯಣಗೌಡನೊಂದಿಗೆ ಮಾತನಾಡಿದ್ದಾರೆ. ಇವರಿಬ್ಬರ ಮಧ್ಯೆ ಅದ್ಯಾವ ದೀಲು ಕುದುರಿತೋ ಏನೋ ಈಗ ಬಳ್ಳಾರಿ ಕರವೇ ಜಿಲ್ಲಾಧ್ಯಕ್ಷನಾಗಿ ಗಣಿಧಣಿಗಳ ಭಂಟ ಪ್ರತಾಪ ರೆಡ್ಡಿಯೇ ಬಂದು ವಕ್ಕರಿಸಿಕೊಂಡಿದ್ದಾನೆ.

ಕರ್ನಾಟಕ ನೆಲ-ಜಲ-ರಕ್ಷಣೆಯೇ ನಮ್ಮ ಗುರಿ ಎಂದು ದಿನಬೆಳಗಾದರೆ ಬಡಾಯಿ ಕೊಚ್ಚಿಕೊಳ್ಳುವ ನಾರಾಯಣಗೌಡನಿಗೆ ಗಣಿರೆಡ್ಡಿಗಳ ಅದಿರು ಲೂಟಿಯಲ್ಲಿ ಈಗ ಯಾವ ತಪ್ಪೂ ಕಾಣಿಸುತ್ತಿಲ್ಲ.

ಹೊಗೇನಕಲ್ ಗಡಿ ವಿವಾದದ ಬಗ್ಗೆ ಗಂಟಲು ಕಿತ್ತು ಹೋಗುವಂತೆ ಅರಚುತ್ತಿರುವ ನಾರಾಯಣಗೌಡರು ಅದೇ ಬಳ್ಳಾರಿ ರೆಡ್ಡಿಗಳು ಕರ್ನಾಟಕ-ಆಂಧ್ರಾ ಗಡಿ ನಕ್ಷೆಯನ್ನೇ ಬದಲಾಯಿಸಿ ಲೂಟಿ ನಡೆಸುತ್ತಿದ್ದರೂ ಪ್ರಶ್ನೆ ಕೇಳುವುದಿಲ್ಲ, ಪ್ರತಿಭಟಿಸುವುದಿಲ್ಲ. ಯಾಕೆ ಅಂತ ಈಗ ಗೊತ್ತಾಯಿತಾ?

ಎಲ್ಲಾ ದೀಲಿನ ಮಹಿಮೆ!

ಸರ್ಕಾರದಿಂದ ಸಂಘಪರಿವಾರ ಸಂರಕ್ಷಣೆ?

ಡಿಜಿಪಿ ಶ್ರೀಕುಮಾರ್‌ರವರಿಗೆ ನೀವು ಬರೆದಿರುವ ಬಹಿರಂಗ ಪತ್ರದಲ್ಲಿ "ಪೊಲೀಸ್ ಠಾಣೆಗಳನ್ನು ನಡೆಸುತ್ತಿರುವವರು ನಿಮ್ಮ ಇಲಾಖೆಯ ಜನರಲ್ಲ, ಬದಲಾಗಿ ಸಂಘ ಪರಿವಾರದ ಪುಂಡುಪೋಕರಿಗಳು" ಎಂದಿರುವುದು ಅಕ್ಷರಶಃ ಸತ್ಯ. ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿರುವ ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯತಿ ನೌಕರ ಎಚ್. ವೆಂಕಟಾಚಲಯ್ಯ ನನಗೆ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ನೆಲಮಂಗಲ ಪೊಲೀಸ್ ಠಾಣೆಗೆ ದೂರು ನೀಡಿ (ದಿ.11-08-2008) ನಲವತ್ತು ದಿನಗಳು ಕಳೆದರೂ ಅಲ್ಲಿನ ಪಿಎಸ್‌ಐ ನನ್ನ ದೂರಿನ ಬಗ್ಗೆ ಯಾವುದೇ ಕ್ರಮಕೈಗೊಳ್ಳದ ಕಾರಣ ನೆಲಮಂಗಲದ ಡಿವೈಎಸ್‌ಪಿಯವರನ್ನು ಭೇಟಿಯಾಗಲು ಹೋದಾಗ (ದಿ.22-09-08) ಅಲ್ಲಿ ನಡೆದ ಘಟನೆ ಅಲ್ಲಿದ್ದವರನ್ನೆಲ್ಲ ದಂಗು ಬಡಿಸಿತು.

ಹಣಕಾಸಿನ ಅವ್ಯವಹಾರವೊಂದರ ಬಗ್ಗೆ ದೂರು ನೀಡಲು ಬಂದಿದ್ದ ಮಹಿಳೆಯೊಬ್ಬಳ ಮನವಿಗೆ ಕೂಡಲೇ ಸ್ಪಂದಿಸಿದ ಡಿವೈಎಸ್ಪಿ ಧರಣೇಂದ್ರರವರು, ಅಲ್ಲಿದ್ದ ಎಎಸ್‌ಐಯೊಬ್ಬರಿಂದ ಈ ಆರೋಪಿಗೆ ಫೋನ್ ಮಾಡಿಸಿ ಡಿವೈಎಸ್‌ಪಿ ಕಚೇರಿಗೆ ಬರುವಂತೆ ತಿಳಿಸಿದಾಗ ಸದರಿ ಆರೋಪಿ ತಿಳಿಸಿದ್ದೇನೆಂದರೆ, "ನಾನು ಡಿವೈಎಸ್‌ಪಿ ಕಚೇರಿಗೆ ಬರುವುದಿಲ್ಲ, ನೀವು ಅದೇನು ಮಾಡಿಕೋಂತೀರೋ ಮಾಡಿಕೋ ಹೋಗಿ" ಎಂದು.

ಶ್ರೀ ಹೊಗಳಿಕೆ

ಇದು ಸಾಮಾನ್ಯ ಆರೋಪಿಯೊಬ್ಬ ಹಲವಾರು ಪೊಲೀಸ್ ಠಾಣೆಗಳ ಮುಖ್ಯಸ್ಥರಾದ ಡಿವೈಎಸ್‌ಪಿ ಯವರಿಗೆ ನೀಡುವ ಮರ್ಯಾದೆ. ಇಂತಹ ಪರಿಸ್ಥಿತಿಯಲ್ಲಿ ಬದುಕುತ್ತಿರುವ ನಾವೇ ಧನ್ಯರು! ಪೊಲೀಸ್ ವ್ಯವಸ್ಥೆಯನ್ನು ಈ ಮಟ್ಟಕ್ಕೆ ತಂದ ನಮ್ಮ ರಾಜಕಾರಣಿಗಳಿಗೆ ಅನಂತಾನಂತ ವಂದನೆಗಳು!

-ಎಸ್.ಎಸ್.ವೆಂಕಟೇಶ್, ಸೊಂದೆಕೊಪ್ಪ

ಚರ್ಚ್‌ಗಳ ಮೇಲಿನ ದಾಳಿ ಮಾನವೀಯತೆಯೇ? ಸಮಸ್ತ ಜಗತ್ತಿಗೆಲ್ಲಾ ಒಂದೇ ಧರ್ಮವಿರಬೇಕೆನ್ನುವುದು ಸರಿ ಅಲ್ಲ, ಅಷ್ಟೇ ಅಲ್ಲ, ಅದು ಅಪಾಯಕರ ಕೂಡ. ಸಕಲ ಧಾರ್ಮಿಕ ಭಾವನೆಗಳೂ ಒಂದೇ ಮಟ್ಟದಲ್ಲಿರಬೇಕೆಂದರೆ ಅದು ಧಾರ್ಮಿಕ ಭಾವನೆಗಳ ನಾಶಕ್ಕೆ ದಾರಿಯಾದೀತು. ವಿವಿಧತೆಯೇ ಅದರ ಲಕ್ಷಣ, ವಿವಿಧತೆಯಲ್ಲಿ ಏಕತ್ವ ಕಾಣಬೇಕು. ದುರಾದೃಷ್ಟವಶಾತ್ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದಲ್ಲೇ ಎಷ್ಟರಮಟ್ಟಿಗೆ ಮುಳುಗಿದ್ದಾರೆಂದರೆ ಅವರಿಗೆ ಈ ಜಗತ್ತಿನಲ್ಲಿ ಇನ್ನೇನಿದೆಯೆಂದು ನೋಡುವುದಕ್ಕೂ ಕಣ್ಣಿಲ್ಲವಾಗಿಬಿಟ್ಟಿದೆ. ಅಲ್ಲದೆ ಇತರರೂ ತಮ್ಮದಾರಿಯಲ್ಲೇ ಬರುವಂತೆ ಮಾಡಲು ಹೋರಾಡುತ್ತಾರೆ. ಇತರ ಎಲ್ಲಾ ಧರ್ಮಗಳಿಗೂ ಮನ್ನಣೆಕೊಡುವ ಧರ್ಮವೇ ಶ್ರೇಷ್ಠವಾದ ಧರ್ಮ. ವೇದಾಂತ ಧರ್ಮವು ಇತರೆ ಎಲ್ಲವನ್ನು ತನ್ನೊಳಗೆ ಅಂತರ್ಗತಗೊಳಿಸಿಕೊಂಡಿದೆ. ಇಲ್ಲಿ ಪ್ರತಿಯೊಬ್ಬನಿಗೂ ಅವನವನ ಸ್ವಭಾವಕ್ಕೆ ಅನುಗುಣವಾದ ಮಾರ್ಗ ಅನುಸರಿಸಲು ಅವಕಾಶವಿದೆ.

-ಕೆಂಚವೀರಪ್ಪ



ಈ ವಾರದ ಕಂಡಹಾಗೆ ಸೂಕ್ತ, ಸಕಾಲಿಕ ಮತ್ತು ಹರಿತ

-ಪತ್ರಕರ್ತ ಮಿತ್ರ, ಈ-ಮೇಲ್ ಮೂಲಕ

ತಮ್ಮ ನೆರೆಮನೆ ಸುಡುತ್ತಿದ್ದರೂ ರಾತ್ರಿ ಟಿವಿ ಧಾರಾವಾಹಿ ನೋಡಿ ನೆಮ್ಮದಿಯಿಂದ ನಿದ್ದೆ ಹೋಗುವ ಭಾರತದ ಎಲ್ಲಾ ಮಧ್ಯಮ ವರ್ಗದ ಸಭ್ಯ ಸಂಸಾರಸ್ಥರಿಗೆ ಜಯವಾಗಲಿ

-ಶಶಿಧರ್ ಹೆಮ್ಮಾಡಿ, ಈ-ಮೇಲ್ ಮೂಲಕ

ಒರಿಸ್ಸಾದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ದಬ್ಬಾಳಿಕೆ ಮುಂದುವರೆಯುತ್ತಿದೆ. ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಯುತ್ತಿದೆ. ಛತ್ತೀಸ್‌ಗಡದಲ್ಲಿ ಮದರ್ ತೆರೇಸಾರವರ ಆಶ್ರಮದಲ್ಲಿನ ಸನ್ಯಾಸಿನಿಯರು ಸ್ವಲ್ಪದರಲ್ಲೇ ಅಗ್ನಿಗೆ ಆಹುತಿಯಾಗುವುದರಿಂದ ಬಚಾವಾಗಿದ್ದಾರೆ. ಆದರೆ ನಮ್ಮ ದಿನ ಪತ್ರಿಕೆಗಳಲ್ಲಿ ನ್ಯಾನೋ ಕಾರಿನ ಬಗ್ಗೆ ಮತ್ತು ನ್ಯೂಕ್ಲಿಯರ್ ಡೀಲಿನ ಬಗ್ಗೆಯೇ ಹೆಚ್ಚು ಸುದ್ದಿ ಪ್ರಕಟವಾಗುತ್ತಿದೆ. ನಮ್ಮ ಭಾರತ ನಿಜವಾಗಲೂ ಜಾತ್ಯತೀತ ದೇಶವಾಗಿ ಉಳಿದಿದೆಯೇ?

-ಜಾವೇದ್, ಈ-ಮೇಲ್ ಮೂಲಕ

ಪರಿವರ್ತನೆ



ಜೀನಿಬ ಕತೆ

ಶಿಷ್ಯಂದಿರ ಗುಂಪೊಂದು ತೀರ್ಥಯಾತ್ರೆಗೆ ಹೋಗುವ ಹುಮ್ಮಸ್ಸಿನಲ್ಲಿತ್ತು. ಅವರಿಗೆಲ್ಲ ಗುರುಗಳು "ನೀವು ಭೇಟಿ ನೀಡುವ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಈ ಹಾಗಲಕಾಯಿಯನ್ನು ತೆಗೆದುಕೊಂಡು ಹೋಗಿ. ಹಾಗೆಯೇ ಇದನ್ನು ಎಲ್ಲಾ ಪವಿತ್ರ ನದಿಗಳಲ್ಲೂ ಅದ್ದಿ ವಾಪಸ್ಸು ತೆಗೆದುಕೊಂಡು ಬನ್ನಿ" ಎಂದು ಆದೇಶಿಸಿದರು.

ಹಾಗೆಯೇ ಮಾಡಿದ ಶಿಷ್ಯಂದಿರು ತೀರ್ಥಯಾತ್ರೆಯಿಂದ ವಾಪಸ್ಸಾದರು. ಅವರು ತಂದಿದ್ದ ಹಾಗಲಕಾಯಿಯನ್ನು ಕತ್ತರಿಸಿ, ಪಲ್ಯ ಮಾಡಿ, ಪ್ರಸಾದವೆಂಬಂತೆ ಎಲ್ಲರಿಗೂ ನೀಡಲಾಯಿತು.

ಅದರ ರುಚಿ ನೋಡಿದ ಗುರುಗಳು "ಇದು ನಿಜವಾಗಲೂ ವಿಚಿತ್ರ. ಯಾವ ಪುಣ್ಯಕ್ಷೇತ್ರಗಳಿಗೂ ಮತ್ತು ಪವಿತ್ರ ನದಿಗಳಿಗೂ ಈ ಹಾಗಲಕಾಯಿಯನ್ನು ಸಿಹಿಯಾಗಿ ಪರಿವರ್ತಿಸಲಾಗಿಲ್ಲ" ಎಂದು ಲೇವಡಿ ಮಾಡಿದರು.

ಬೌದ್ಧಿಕ ದಿವಾಳಿ 'ಬುದ್ಧಿವಂತ'! ಪಾಪರ್ 'ಪಟ್ರೆ'!!



ಈ ವಾರ ಬಿಡುಗಡೆಗೊಂಡಿರುವ ಎರಡೂ ಚಿತ್ರಗಳು ವೈರುಧ್ಯ ಅಭಿರುಚಿ ಮತ್ತು ದೃಷ್ಟಿಕೋನ ಹೊಂದಿದ್ದು ವಿವಿಧ ಕಾರಣಗಳಿಗೆ ಗಮನ ಸೆಳೆಯುತ್ತವೆ. ಮೊದಲನೆಯದು ಉಪೇಂದ್ರ ಅಭಿನಯದ 'ಬುದ್ಧಿವಂತ'. ಎರಡನೆಯದು ಹೊಸಬರ ತಂಡದಿಂದ ನಿರ್ಮಾಣಗೊಂಡಿರುವ 'ಪಟ್ರೆ ಲವ್ಸ್ ಪದ್ಮ'.

'ಬುದ್ಧಿವಂತ' ಶ್ರೀಮಂತವಾಗಿದ್ದು ಶೃಂಗಾರದಾಟದಿಂದ ಕೂಡಿದ ಪ್ರೇಮ ಕಥಾವಸ್ತುವಾಗಿದೆ. ಆದರೆ 'ಪಟ್ರೆ ಲವ್ಸ್ ಪದ್ಮ' ವಿರಹ ಮತ್ತು ವಿಷಾದದ ಛಾಯೆ ಹೊಂದಿರುವ ಪ್ರೇಮಕಥಾವಸ್ತುವಾಗಿದೆ.

ಈ ಎರಡು ಚಿತ್ರಗಳ ವೈಶಿಷ್ಟ್ಯವೆಂದರೆ ಹೊಸ ತರಹದ ಜಾಹೀರಾತು ಮತ್ತು ಪೋಸ್ಟರ್ ಡಿಸೈನ್‌ಗಳಿಂದ ಜನ ಚಿತ್ರಮಂದಿರಕ್ಕೆ ಬರುವಂತೆ ಮಾಡಿದ್ದು. ಉದಾಹರಣೆಗೆ 'ಬುದ್ಧಿವಂತ' ಚಿತ್ರದ ಜಾಹೀರಾತಿನಲ್ಲಿ ಉಪೇಂದ್ರ ಎಂಟು ಹೊಸ ಹೊಸ ಅವತಾರಗಳಲ್ಲಿ ರಾರಾಜಿಸುತ್ತಿದ್ದರೆ, 'ಪಟ್ರೆ ಲವ್ಸ್ ಪದ್ಮ' ಚಿತ್ರದ ಪೋಸ್ಟರ್‌ಗಳಲ್ಲಿ ನಾಯಕ ನಟನ ಒಂದು ಭಂಗಿ ಬಿಟ್ರೆ ಬೇರೇನೂ ಇಲ್ಲ. ಅಷ್ಟೇ ಅಲ್ಲ, ಆ ಚಿತ್ರದ ನಾಯಕ, ನಾಯಕಿ ಇನ್ನಿತರ ಕಲಾವಿದರು ಯಾರೆಂದು ಚಿತ್ರ ನೋಡುವ ತನಕ ನಿರ್ಮಾಪಕರು ಹೇಳಲೇ ಇಲ್ಲ. ಅವರ ಪ್ರಕಾರ ಅದೂ ಒಂದು ಪಬ್ಲಿಸಿಟಿ ಸ್ಟಂಟ್ ಅಂತೆ.


'ಬುದ್ಧಿವಂತ' ಚಿತ್ರ ತಂಡದವರೂ ಬೇರೆ ರೀತಿಯ ಪಬ್ಲಿಸಿಟಿ ಸ್ಟಂಟ್ ಮಾಡಿದರು. ಚಿತ್ರ ಬಿಡುಗಡೆಗೊಂಡ ದಿನ ಸುಮಾರು ಐದು ಸಾವಿರ ಜನ ಗಾಂಧಿಬಜಾರ್‌ನಿಂದ ಗಾಂಧಿನಗರಕ್ಕೆ ಮೆರವಣಿಗೆಯಲ್ಲಿ ನಾಯಕ ನಟ ಉಪ್ಪಿಯನ್ನು ಕರೆದುಕೊಂಡು ಹೋದರು. ಅಷ್ಟೇ ಅಲ್ಲ, ಥಿಯೇಟರ್‌ನ ಮುಖ್ಯದ್ವಾರದಲ್ಲಿ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್‌ರೆಲ್ಲರೂ ಭಾಯಿ-ಭಾಯಿ ಎಂದು ಸಾರುವ ಸಂದೇಶದ ದೇವಸ್ಥಾನವನ್ನು ಪ್ರತಿಷ್ಠಾಪಿಸಿದ್ದರು. ಇದೆಲ್ಲದರಿಂದ ಸಿನಿಮಾಕ್ಕೆ ಏನು ಲಾಭವಾಯಿತೋ ಆ ಪರಮಾತ್ಮನಿಗೆ ಗೊತ್ತು. ಇವತ್ತಿನ ಸಂದರ್ಭದಲ್ಲಿ ಮೊದಲ ದಿನ ಪ್ರೇಕ್ಷಕರು ಥಿಯೇಟರ್‌ಗೆ ಬರುವಂತೆ ನಿರ್ಮಾಪಕ ಹಲವಾರು ಗಿಮಿಕ್‌ಗಳಿಗೆ ಅಂಟಿಕೊಂಡಿರುತ್ತಾನೆ ಎಂಬುದು ಸತ್ಯ. ಆದರೆ ಸಿನಿಮಾ ಮಾಡುವುದರಲ್ಲಿ, ಕ್ರಿಯೇಟಿವಿಟಿಯಲ್ಲಿ ಮಾತ್ರ ನಮ್ಮವರು ಪ್ರತಿಬಾರಿಯೂ ಮುಗ್ಗರಿಸುತ್ತಾರೆ. ಇವರೇನಿದ್ದರೂ ಪ್ರಚಾರ ಶೂರರು ಮಾತ್ರ!

ಈಗ ಸಿನಿಮಾಗಳ ವಿಷಯಕ್ಕೆ ಬರೋಣ.

'ಬುದ್ಧಿವಂತ' ಚಿತ್ರ ಅನಾದಿಕಾಲದಲ್ಲಿ ತಮಿಳಿನಲ್ಲಿ ಕೆ. ಬಾಲಚಂದರ್ ನಿರ್ದೇಶಿಸಿ, ಜೆಮಿನಿ ಗಣೇಶನ್ ನಟಿಸಿದ್ದ 'ನಾನ್ ಅವನಲ್ಲೈ' ಚಿತ್ರದ ರಿಮೇಕ್. ಅಂದರೆ, ಸುಮಾರು ಇಪ್ಪತ್ತು ವರ್ಷಗಳಷ್ಟು ಹಳೆಯ ಚಿತ್ರಾನ್ನವನ್ನು ಉಪ್ಪಿ ಕನ್ನಡಿಗರಿಗೆ ಮತ್ತೆ ಉಣಿಸಿದ್ದಾರೆ. ಕನ್ನಡ ಚಿತ್ರರಂಗ ಪ್ರಗತಿಪಥದಲ್ಲಿದೆ ಎಂದು ಈ ಇಪ್ಪತ್ತು ವರ್ಷದಷ್ಟು ಹಳೆಯ ಚಿತ್ರವನ್ನು ನೋಡಿದಾಗ ಅನಿಸಲು ಸಾಧ್ಯವೆ?!!

ಹಾಗೆಯೇ ಹೊಸ ನಿರ್ದೇಶಕ ಚಂದ್ರಶೇಖರ್ ಶ್ರೀವಾಸ್ತವ ಕ್ರಿಯೇಟಿವಿಟಿ ಮತ್ತು ಹೊಸತನದ ಹೆಸರಿನಲ್ಲಿ ಒಂದು ಬಾಲಿಶವಾದ ಚಿತ್ರವನ್ನು ನೀಡಿದ್ದಾರೆ. ಹೀರೋ ಆರೇಳು ವರ್ಷದವನಾಗಿದ್ದಾಗ ಆತನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಪದ್ಮ ಎಂಬ ಐದು ವರ್ಷದ ಬಾಲೆ ಸಾಯುತ್ತಾಳೆ. ಆಕೆಯ ನೆನಪಿನಲ್ಲೇ ಶಾಲೆ, ಕಾಲೇಜು, ತಂದೆ, ತಾಯಿಯನ್ನು ಬಿಟ್ಟು ಪದ್ಮ ಎಂಬ ಹೆಸರಿನ ಹುಡುಗಿಯನ್ನು ಪ್ರೀತಿಸಿ ಮನಶಾಂತಿ ಪಡೆಯಲು ಹೊರಡುತ್ತಾನೆ. ಇಂತಹ ಬಾಲಿಶ, ವಿಕೃತ ಮನೋಭಾವದ ಅರ್ಥಹೀನ ಕಥೆ ಎಲ್ಲಿಂದಲೋ ಆರಂಭವಾಗಿ ಎಲ್ಲೆಲ್ಲೋ ಸಾಗಿ, ಪ್ರೇಕ್ಷಕನ ತಲೆಚಿಟ್ಟು ಹಿಡಿಯುವಂತೆ ಮಾಡುತ್ತದೆ.

ಇನ್ನು ಉಪ್ಪಿಯಂತಹ ಸ್ಟಾರ್‌ಗೆ ಏನಾಗಿದೆ ಎಂಬುದೇ ಅರ್ಥವಾಗುವುದಿಲ್ಲ. ಸರಿಯಾಗಿ ಹತ್ತು ವರ್ಷಗಳ ಹಿಂದೆ 'ಎ' ಎಂಬ ಚಿತ್ರ ತೆಗೆದು 'ಬುದ್ಧಿವಂತರಿಗೆ ಮಾತ್ರ' ಎಂದು ಪ್ರಚಾರ ಮಾಡಿದ್ದರು ಉಪ್ಪಿ. ಆದರೆ ಈಗ 'ನಾನೇ ಬುದ್ಧಿವಂತ' ಎಂದು ಸಾರಲು ಹೊರಟಂತಿದೆ. ಯಾಕೆಂದರೆ ಈ ಚಿತ್ರದಲ್ಲಿ ಆತ ನಾಲ್ಕು ಹುಡುಗಿಯರನ್ನು ತನ್ನ ಬುದ್ಧಿವಂತಿಕೆಯಿಂದ ಪಟಾಯಿಸುತ್ತಾನೆ. ಅನಂತರ ಕೋರ್ಟ್‌ನಲ್ಲಿ ತನ್ನ ಬಗ್ಗೆ ತಾನೇ ವಾದ ಮಾಡುತ್ತಾ ಆ ಹುಡುಗಿಯರನ್ನು ಪಟಾಯಿಸಿದ್ದು ನಾನಲ್ಲ ಎನ್ನುತ್ತಾ ಗೆಲ್ಲುತ್ತಾನೆ. ಇಂತಹ ಕಥಾವಸ್ತುವಿಂದ ಸಮಾಜಕ್ಕೆ ಹತ್ತು ನಯಾಪೈಸೆ ಲಾಭವೂ ಇಲ್ಲ. ಹೋಗಲಿ, ಲಾಜಿಕ್ಕನ್ನು ಮರೆತು ಕನಿಷ್ಠ ಮನರಂಜನೆಯ ದೃಷ್ಟಿಯಿಂದಲಾದರೂ ಇದನ್ನು ಸ್ವಾಗತಿಸೋಣವೆಂದರೆ ಅಲ್ಲಿ ಮನರಂಜನೆಯ ಬದಲಿಗೆ ಮನೋವೈಕಲ್ಯತೆ ಎದ್ದು ಕಾಣಿಸುತ್ತದೆ. ಈ ಚಿತ್ರಕ್ಕೆ ಕೋಟ್ಯಾಂತರ ರೂ. ಬಂಡವಾಳ ಸುರಿದು ಅತ್ಯಂತ ಶ್ರೀಮಂತವಾಗಿ ನಿರ್ಮಿಸಿರುವ ನಿರ್ಮಾಪಕ ಮೋಹನ್ ಬಗ್ಗೆ ಸಿಂಪತಿ ಉಕ್ಕಿ ಉಕ್ಕಿ ಬರುತ್ತದೆ.




'ಬುದ್ಧಿವಂತ' ಚಿತ್ರದಲ್ಲಿ ಉಪ್ಪಿಯ ಬೌದ್ಧಿಕ ದಿವಾಳಿತನ ಎದ್ದು ಕಾಣಿಸುತ್ತದೆ. 'ಎ' ಮತ್ತು 'ಉಪೇಂದ್ರ' ಚಿತ್ರಗಳಲ್ಲಿ ನೀಡಿದ್ದ ಹೊಸತನ ಮತ್ತು ಕ್ರಿಯೇಟಿವಿಟಿಯನ್ನು ಈ ಚಿತ್ರದಲ್ಲೂ ಉಪ್ಪಿ ತೋರಿಸಿದ್ದಾರೆ ಎಂಬಂತೆ ಜಾಹೀರಾತುಗಳು ಬಿಂಬಿಸಿದ್ದವು. ಆದರೆ 'ಎ' ಚಿತ್ರದಲ್ಲಿನ ಮೊನಚಾದ ಡೈಲಾಗ್ ಡೆಲಿವರಿಯಾಗಲಿ, 'ಉಪೇಂದ್ರ' ಚಿತ್ರದ ವಿಶಿಷ್ಟ ಶೈಲಿಯಾಗಲಿ ಈ ಚಿತ್ರದಲ್ಲಿ ಇಲ್ಲವೇ ಇಲ್ಲ, ಶೈಲಿ ದಿಟ್ಟತನವಾಗಲಿ ಇಲ್ಲಿ ಕಾಣಿಸುವುದೇ ಇಲ್ಲ. ಈ ಚಿತ್ರವನ್ನು ರಾಮನಾಥ ಋಗ್ವೇದಿ ಎಂಬುವವರು ನಿರ್ದೇಶಿಸಿದ್ದಾರೆ ಎನ್ನಲಾಗಿದೆಯಾದರೂ ಅದರ ಕೀರ್ತಿ-ಅಪಕೀರ್ತಿ ಉಪ್ಪಿಗೆ ಸಲ್ಲಬೇಕು. ಇದೆಲ್ಲದರ ಅರ್ಥ ಇಷ್ಟೇ: 'ಬುದ್ಧಿವಂತ' ಉಪ್ಪಿಯ ಕಟ್ಟಾ ಅಭಿಮಾನಿಗಳಿಗೆ ಇಷ್ಟವಾದರೂ ಇತರರಿಗೆ ಇದನ್ನು ನೋಡಲು ಬಹಳ ಕಷ್ಟವಾದೀತು. ಈ ಚಿತ್ರದಲ್ಲಿ ಉಪ್ಪಿಯ ಗಿಮಿಕ್ ಹಾಡುಗಳೇ ಎದ್ದು ಕಾಣಿಸುತ್ತವೆ. 'ಚಿತ್ರಾನ್ನ ಚಿತ್ರಾನ್ನ...' ಎಂಬ ಹಾಡು ಈಗಾಗಲೇ ಸಖತ್ ಪಾಪ್ಯುಲರ್ ಆಗಿದೆ. ಆದರೆ ಈ ಹಾಡಿನ ಚಿತ್ರೀಕರಣ ಮಾತ್ರ ಅಸಂಬದ್ಧವಾಗಿದೆ. 'ರಾ ರಾ...' ಹಾಡು ಮತ್ತು 'ರವಿವರ್ಮನ ಕುಂಚದ....' ಎಂಬ ಹಳೆ ಹಾಡಿನ ರೀಮಿಕ್ಸ್ ಸುಂದರವಾಗಿ ಮೂಡಿಬಂದಿದೆ. ಈ ಮೂರು ಹಾಡುಗಳ ದೆಸೆಯಿಂದ ನಿರ್ಮಾಪಕ ಮೋಹನ್ ಅವರಿಗೆ ಅಷ್ಟು ನಷ್ಟವಾಗಲಾರದು.

ಒಂದೆಡೆ 'ಬುದ್ಧಿವಂತ'ದಲ್ಲಿ ಪ್ರೀತಿ ಪ್ರೇಮದ ಹೆಸರಿನಲ್ಲಿ ನಡೆಯುವ ರಾಸಲೀಲೆಗಳು; ಇನ್ನೊಂದೆಡೆ 'ಪಟ್ರೆ..'ಯಲ್ಲಿ ವಿರಹದ ನೆಪದಲ್ಲಿ ನಡೆಯುವ ವಿಕೃತ ಪ್ರೇಮ... ಎರಡನ್ನೂ ಸಹಿಸುವುದೂ ಸ್ವಲ್ಪ ಕಷ್ಟವೇ!!

■ ಶೆಣೈ

ಗುರುವಿನ ಗುಲಾಮನಾದ ಮೂರ್ತಿ



'ಕರುನಾಡು' ಚಿತ್ರದ ಮೂಲಕ ಕಲಾನಿರ್ದೇಶನ ಪಟ್ಟದಿಂದ ಚಿತ್ರನಿರ್ದೇಶಕ ಪಟ್ಟವನ್ನೇರಿದ ಜಿ.ಮೂರ್ತಿ ಈಗ ಇನ್ನೊಂದು ಹೊಸ ಚಿತ್ರಕ್ಕೆ ಕೈ ಹಾಕಿದ್ದಾರೆ. ಚಿತ್ರದ ಹೆಸರು 'ಶಂಕರಾಚಾರ್ಯ'. ಆದರೆ ಇದು ಶಂಕರಾಚಾರ್ಯರಿಗೆ ಸಂಬಂಧಿಸಿದ ಚಿತ್ರವಲ್ಲವಂತೆ. ಬದಲಾಗಿ ಶಂಕರ ಆಚಾರ್ಯರು ಎಂಬ ವ್ಯಕ್ತಿಯೇ ಚಿತ್ರದ ಪ್ರಧಾನ ಪಾತ್ರವಂತೆ. ಆ ಪಾತ್ರವನ್ನು ಶರತ್‌ಬಾಬು ನಿರ್ವಹಿಸುತ್ತಿದ್ದಾರೆ. ಇದು ಗೋ ಹತ್ಯೆಯ ಸುತ್ತ ಹೆಣೆಯಲ್ಪಟ್ಟ ಕಥಾವಸ್ತುವಂತೆ.


ಈ ಹಿಂದೆ ಕನ್ನಡದಲ್ಲಿ 'ಶಂಕರಾಚಾರ್ಯ', 'ಮಧ್ವಾಚಾರ್ಯ' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ಜಿ.ವಿ.ಅಯ್ಯರ್ ಅವರ ಪಟ್ಟದ ಶಿಷ್ಯ ಈ ಜಿ.ಮೂರ್ತಿ. ಅಯ್ಯರ್ ಮಾದರಿಯಲ್ಲೇ ಸಾಗುತ್ತಿರುವ ಮೂರ್ತಿ ಗುರುವಿನ ಗುಲಾಮ ಎನಿಸಿದ್ದಾರೆ.

ಸಿನಿ Bits

■ ಅರುಣ್.ಜಿ

ಬಗೆಹರಿದ ವಿವಾದ








ಎರಡು ವಾರಗಳ ಹಿಂದಷ್ಟೇ 'ಲಂಕೇಶ್' ಬಹಿರಂಗಗೊಳಿಸಿದ್ದ ನಿರ್ಮಾಪಕ ಪ್ರವೀಣ್ ಮತ್ತು ನಾಯಕನಟ ಅಜಯ್ ನಡುವಿನ ಜಟಾಪಟಿ ಈಗ ತಣ್ಣಗೆ ಬಗೆಹರಿಯುವ ಹಂತಕ್ಕೆ ತಲುಪಿದೆ. ಇವರಿಬ್ಬರ ಜಂಜಾಟವನ್ನು ಗಮನಿಸಿದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹಿರಿಯಣ್ಣನ ಸ್ಥಾನದಲ್ಲಿ ನಿಂತು ಪ್ರವೀಣ್ ಮತ್ತು ಅಜಯ್ ಮಧ್ಯೆ ಸಂಧಾನ ಮಾಡಿಸಿದ್ದಾರೆ. ಸದ್ಯಕ್ಕೆ ಎರಡು ಮೂರು ಚಿತ್ರಗಳಲ್ಲಿ ಅಭಿನಯಿಸುತ್ತಿರುವ ಅಜಯ್, ಮುಂದಿನ ವರ್ಷ ಜನವರಿಯ ನಂತರ ಬಿಡುವಾದಾಗ ಪ್ರವೀಣ್ ಚಿತ್ರದಲ್ಲಿ ನಟಿಸಲು ಒಪ್ಪಿದ್ದಾರೆ. ಪ್ರವೀಣ್ ಕೂಡ ತನ್ನ ಲಿಮಿಟೇಷನ್ನುಗಳನ್ನರಿತು ತಲೆಬಾಗಿದ್ದಾರೆ.


ಒಟ್ಟಾರೆ ಹೊಸಬರ ವಿವಾದವೊಂದನ್ನು ಇತ್ಯರ್ಥಗೊಳಿಸುವ ಮೂಲಕ ರಾಕ್‌ಲೈನ್ ವೆಂಕಟೇಶ್ ತಾನ್ನ 'ಧೀರ'ತೆಯೊಂದಿಗೆ ಜವಾಬ್ದಾರಿಯನ್ನೂ ಪ್ರದರ್ಶಿಸಿದ್ದಾರೆ.

ಕದ್ದವರು ಯಾರು?



ಒಬ್ಬ ವ್ಯಕ್ತಿ ಬೇರೊಬ್ಬರ ಬಗ್ಗೆ ಕಾಮೆಂಟ್ ಮಾಡುವಾಗ ತಾನೆಷ್ಟು ಸಾಚಾ ಎಂಬುದನ್ನು ಮೊದಲು ಅರಿಯಬೇಕು.

ಮೊನ್ನೆ ನಡೆದ 'ಬುದ್ಧಿವಂತ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ತಮಿಳಿನ ಹಿರಿಯ ನಿರ್ದೇಶಕ ಕೆ. ಬಾಲಚಂದರ್ ಬಗ್ಗೆ ಮಾತನಾಡುತ್ತಾ 'ಬಾಲಚಂದರ್ ಇಟಾಲಿಯನ್ ಸಿನಿಮಾಗಳನ್ನು ಕದ್ದು ಸಿನಿಮಾ ಮಾಡುತ್ತಾರೆ' ಎಂದು ಕಿಡಿ ಕಾರಿದರು.



ಅಸಲಿಗೆ ರಾಜೇಂದ್ರ ಸಿಂಗ್ ಬಾಬು ಅವರೇ ಬೇರೆ ಬೇರೆ ದೇಶಗಳ ಚಿತ್ರಗಳಿಂದ ಸ್ಫೂರ್ತಿ ಪಡೆದು ಈ ಹಿಂದೆ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಉದಾಹರಣೆಗೆ ಈ ಹಿಂದೆ ಬಾಬು ನಿರ್ದೇಶಿಸಿದ್ದ 'ಮುಂಗಾರಿನ ಮಿಂಚು' ಎಂಬ ಚಿತ್ರ **'Walking in the Cloud'** ಎಂಬ ಹಾಲಿವುಡ್ ಸಿನಿಮಾದಿಂದ ಕದ್ದದ್ದೇ ಆಗಿತ್ತು. ಇದು ಸಿಂಗ್ ಬಾಬು ಅವರ 'ಕ್ರಿಯೇಟಿವಿಟಿ'ಗೆ ಸಾಕ್ಷಿ. ಅದೂಅಲ್ಲದೆ ಕಳೆದ ವರ್ಷವಷ್ಟೇ "ಮೊಗ್ಗಿನ ಮನಸು ಚಿತ್ರದ ಕಥೆ ನನ್ನದೇ" ಎಂದು ಇದೇ ಬಾಬು ಕ್ಯಾತೆ ತೆಗೆದಿದ್ದರು.

ಈಗ ಹೇಳಿ ಬಾಲಚಂದರ್‌ರಂಥ ಹಿರಿಯ ನಿರ್ದೇಶಕನ ಬಗ್ಗೆ ಮಾತನಾಡಲು ಸಿಂಗ್ ಬಾಬುಗೆ ಅರ್ಹತೆ ಇದೆಯೇ?

'ಕಿರಣ' ಸರಿಗಮಗಳ ಮಿಲನ






ಗಾಯಕ ಕಂ ನಟ ರಾಜೇಶ್ ಕೃಷ್ಣನ್ ಆಗೊಮ್ಮೆ ಈಗೊಮ್ಮೆ ಹೀರೋ ಆಗುವ ಪ್ರಯತ್ನವನ್ನು ಮಾಡ್ತಾನೇ ಇರ್ತಾರೆ. ಈ ಹಿಂದೆ 'ಸೈನೇಡ್' ರಮೇಶ್ ನಿರ್ದೇಶನದ 'ಸಂತೋಷ'ದಲ್ಲಿ ಪ್ರಪ್ರಥಮವಾಗಿ ರಾಜೇಶ್ ನಾಯಕನಾಗಿದ್ದರು. ಆನಂತರ ಯೋಗರಾಜ ಭಟ್ಟರ 'ಗಾಳಿಪಟ'ದ ಮೂವರು ನಾಯಕರಲ್ಲಿ ಇವರೂ ಒಬ್ಬರಾಗಿದ್ದರು.

ಈಗ ಇಷ್ಟರಲ್ಲೇ ಸೆಟ್ಟೇರಲಿರುವ 'ಕಿರಣ' ಚಿತ್ರದ ಮೂಲಕ ರಾಜೇಶ್ ಮತ್ತೊಮ್ಮೆ ಹೀರೋ ಆಗುತ್ತಿದ್ದಾರೆ. ಸಂಗೀತ ಪ್ರಧಾನವಾದ ಈ ಚಿತ್ರದಲ್ಲಿ ರಾಜೇಶ್‌ಗೆ ಗಾಯಕನ ಪಾತ್ರ. ಈ ಚಿತ್ರದ ವಿಶೇಷತೆಯೆಂದರೆ 'ಪೂಜಾರಿ', 'ತಾಜ್‌ಮಹಲ್'ನಂಥ ಚಿತ್ರಗಳಿಗೆ ಹಿಟ್ ಹಾಡುಗಳನ್ನು ನೀಡಿದ್ದ ಸಂಗೀತ ನಿರ್ದೇಶಕ ಅಭಿಮನ್ ಅವರೇ ಇದರ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದಾರಲ್ಲದೆ ಅವರೇ ಸಂಗೀತವನ್ನೂ ನೀಡುತ್ತಿದ್ದಾರೆ.

ಬಹುಮುಖಿ ಪ್ರತಿಭೆ ಅಭಿಮನ್ ಮತ್ತು ರಾಜೇಶ್ ಜೊತೆಗೂಡಿರುವುದರಿಂದ ಇವರಿಬ್ಬರಿಂದ ಹೊಸತೊಂದನ್ನು ಅಪೇಕ್ಷಿಸಬಹುದಾಗಿದೆ.

ಕಲ್ಯಾಣೋತ್ಸವ!



'ಚಂದ್ರಮುಖಿ ಪ್ರಾಣಸಖಿ' ಚಿತ್ರದ ಮುಖಾಂತರ ಸಂಗೀತ ನಿರ್ದೇಶನವನ್ನು ಆರಂಭಿಸಿದ ಪ್ರೇಮಕವಿ ಕೆ. ಕಲ್ಯಾಣ್‌ಗೆ ಆ ಚಿತ್ರದ ಆಡಿಯೋ ಸೂಪರ್ ಹಿಟ್ ಆದರೂ ಹೇಳಿಕೊಳ್ಳುವಂಥ ಅವಕಾಶಗಳು ಸಿಕ್ಕಿರಲಿಲ್ಲ. ಆದರೆ ಆನಂತರ ಕವಿತಾ ಲಂಕೇಶ್‌ರ 'ತನನಂ ತನನಂ' ಚಿತ್ರಕ್ಕೆ ಅದ್ಭುತ ಸಂಗೀತ ನೀಡಿದ್ದರಿಂದ ಕಲ್ಯಾಣ್‌ಗೆ ಒಂದೊಳ್ಳೆ ಬ್ರೇಕ್ ಸಿಕ್ಕಿತು.

ಈಗ ನೋಡಿದರೆ ಕಲ್ಯಾಣ್ ಸಂಗೀತ ನೀಡಿರುವ 'ಚಿಕ್ಕಮಗಳೂರ ಚಿಕ್ಕಮಲ್ಲಿಗೆ', ರಮೇಶ್ ಸುರ್ವೆಯವರ 'ಮಂದಾಕಿನಿ' ಹಾಗೂ ವಿಷ್ಣುಕಾಂತ್ ನಿರ್ದೇಶನದ 'ಗಂಗಾಕಾವೇರಿ' ಈ ಮೂರೂ ಚಿತ್ರಗಳು ಈ ತಿಂಗಳು ಒಂದರ ಹಿಂದೆ ಬಿಡುಗಡೆಗೊಳ್ಳುತ್ತಿವೆ. ಈ ಮೂಲಕ ಗುರುಕಿರಣ್, ಹರಿಕೃಷ್ಣ ಮತ್ತು ಮನೋಮೂರ್ತಿ ಮಧ್ಯೆಯಷ್ಟೇ ನಡೆಯುತ್ತಿದ್ದ ಪೈಪೋಟಿಯಲ್ಲಿ ಈಗ ಕಲ್ಯಾಣ್ ಸಹ ಸೇರಿದ್ದಾರೆ. ಯಾಕೆಂದರೆ ಅಷ್ಟೊಂದು ಚಿತ್ರಗಳ ಆಫರ್ ಈಗ ಕಲ್ಯಾಣ್ ಮುಂದಿದೆ. ಇದರಿಂದಾಗಿ ಈ ವರ್ಷವಿಡೀ ಕನ್ನಡ ಚಿತ್ರರಂಗದಲ್ಲಿ 'ಕಲ್ಯಾಣೋತ್ಸವ'ವೇ ನಡೆಯಬಹುದು.

R B P LANKESH, Kannada Weekly Price Rs. 12/- 8-10-2008 RNI No. KARKAN2005/14648 Regd.No.KA/RNI/

ಸ್ಟೈಲ್‌ಕಿಂಗ್ ಜೊತೆ ಐಶ್ Step

ರಜನಿಕಾಂತ್ ಅಭಿನಯದ 'ಯಂದಿರಮ್' (ರೋಬಾಟ್) ಚಿತ್ರದ ಹಾಡೊಂದರಲ್ಲಿ ಅವರೊಂದಿಗೆ ಕುಣಿಯುವ ಅವಕಾಶ ದೀಪಿಕಾ ಪಡುಕೋಣೆಗೆ ಸಿಗುತ್ತೋ ಅಥವಾ ಐಶ್ವರ್ಯ ರೈಳ ಪಾಲಾಗುತ್ತದೋ ಎಂಬ ಕುತೂಹಲ ಎಲ್ಲರಲ್ಲಿತ್ತು. ಪೆರು ದೇಶದ ರಮ್ಯ ಮನೋಹರ ತಾಣಗಳಲ್ಲಿ ಸ್ಟೈಲ್‌ಕಿಂಗ್ ಜೊತೆ ಸ್ಟೆಪ್ ಹಾಕುವ ಛಾನ್ಸ್‌ಅನ್ನು ಕಡೆಗೂ ಐಶ್ವರ್ಯ ತನ್ನದಾಗಿಸಿಕೊಂಡಿದ್ದಾಳೆ. ಇದರಿಂದ ಬಹಳ ವರ್ಷಗಳಿಂದ ಈಡೇರದಿದ್ದ ರಜನೀಕಾಂತರ ಆಸೆಯೂ ನೆರವೇರಿದಂತಾಗಿದೆ.





ಐಶ್ವರ್ಯ ಚಿತ್ರರಂಗಕ್ಕೆ ಬಂದು ಸರಿಸುಮಾರು ಒಂದೂವರೆ ದಶಕಗಳೇ ಕಳೆದಿದೆ. ಈ ಸಮಯದಲ್ಲಿ ಆಕೆ ದಕ್ಷಿಣ ಭಾರತದ ಹಲವಾರು ದಿಗ್ಗಜರೊಂದಿಗೆ ನಾಯಕಿಯಾಗಿ ಕಾಣಿಸಿಕೊಂಡಿದ್ದಾಳೆ. ಆದರೆ ರಜನಿಯೊಂದಿಗೆ ಮಾತ್ರ ಆಕೆ ನಟಿಸಿರಲಿಲ್ಲ. ಸ್ವತಃ ರಜನಿಯೇ 'ಒಂದೇ ಒಂದು ಬಾರಿ ಐಶ್ವರ್ಯಳ ಜೊತೆ ನಟಿಸಬೇಕು' ಎಂದು ತಮ್ಮ ಬಯಕೆಯನ್ನು ತೋರ್ಪಡಿಸಿದ್ದರು. ಆದರೆ ಪ್ರತೀ ಬಾರಿ ಇದರ ಪ್ರಸ್ತಾಪ ಬಂದಾಗ ಕಾಲ್‌ಶೀಟ್ ಪ್ರಾಬ್ಲಂ, ಮತ್ತಿನ್ಯಾವುದೋ ಸಮಸ್ಯೆ ಎದುರಾಗುತ್ತಿತ್ತು.

ಈಗ ನಿರ್ದೇಶಕ ಶಂಕರ್ ಹಠ ತೊಟ್ಟು ಇವರಿಬ್ಬರನ್ನು ಒಂದುಗೂಡಿಸುವಲ್ಲಿ ಸಫಲರಾಗಿದ್ದಾರೆ. ಆದರೆ ರಜನಿಯೊಂದಿಗೆ ಕುಣಿಯುವ ಅವಕಾಶ ತನಗೆ ಸಿಗಲಿಲ್ಲವೆಂದು ಮತ್ತೋರ್ವ ಕನ್ನಡದ ಕುವರಿ ದೀಪಿಕಾ ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ.

ಹಾಸ್ಯ ಚಕ್ರವರ್ತಿ ಮೊಮ್ಮಗನ ಚಾಪ್ಲಿನ್ ಶಿ

ಮೊನ್ನೆ ಮೊನ್ನೆ ಹಾಸ್ಯಚಕ್ರವರ್ತಿ ಚಾರ್ಲಿಚಾಪ್ಲಿನ್ ಅವರ ಅತೀ ಎತ್ತರದ ಮೂರ್ತಿಯನ್ ಹೇಮಂತ್ ಹೆಗಡೆ ನಿರ್ದೇಶನದ 'ಹೌಸ್‌ಫುಲ್' ಚಿತ್ರಕ್ಕಾಗಿ ನಿರ್ಮಿಸುವ ಬಗ್ಗೆ ಕೇಳಿರುವಿ ಅದನ್ನು ನಿರ್ಮಿಸುತ್ತಿರುವವರು ಕನ್ನಡದ ಹುಡುಗ ಚೇತನ್.

ಈಗ ಮತ್ತೊಬ್ಬ ಕನ್ನಡದ ಹುಡುಗ ಜರ್ಮನಿಯಲ್ಲಿ ನಡೆದ ಸ್ಪರ್ಧೆಯಲ್ಲಿ ಅತ್ಯಂತ ಚಿ ಚಾರ್ಲಿಚಾಪ್ಲಿನ್ ಲೋಹದ ಮೂರ್ತಿಯನ್ನು ನಿರ್ಮಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎರಡನೇ ಸ್ಥಾನ ಪಡೆದಿದ್ದಾನೆ. ಆ ಹುಡುಗ ಯಾರು ಗೊತ್ತೆ? ಕನ್ನಡ ಚಿತ್ರರಂಗದ ಹಾಸ್ಯಚಕ್ರವರ್ತಿ ಎನಿಸಿಕೊಂಡಿ ನರಸಿಂಹರಾಜು ಅವರ ಮೊಮ್ಮಗ. ಈತನ ಹೆಸರು ಅವಿನಾಶ್ ಈತ ಈಗ ಸ್ವಾಮಿ ನಿರ್ದೇಶನ ಹೆಸರಿಲ್ಲದ, ಮಾತಿಲ್ಲದ ಚಿತ್ರದಲ್ಲಿ ಒಂದು ಪುಟ್ಟ ಪಾತ್ರದಲ್ಲಿ ನಟಿಸಿದ್ದಾನೆ.

ಕನ್ನಡಕ್ಕೆ ಬಂದ ಕೋಕಿಲ




ಕೋಕಿಲ ಮೋಹನ್ ಎಂಬ ಮೋಹಕ ನಟ ಮತ್ತೆ ಕನ್ನಡ ಚಿತ್ರವೊಂದರಲ್ಲಿ ನಟಿಸುವುದು ಬಹುತೇಕ ಖಚಿತವಾಗಿದೆ. ಕನ್ನಡದವರೇ ಆದ ಬಸವನಗುಡಿಯ ಈ ನಟ ಎರಡು ದಶಕಗಳ ಹಿಂದೆ ತಮಿಳಿಗೆ ಹೋಗಿ ಅಲ್ಲಿ ದೊಡ್ಡ ಸ್ಟಾರ್ ಆಗಿದ್ದರು. ಆದರೆ ಸುಮಾರು ಹತ್ತು ವರ್ಷಗಳ ಹಿಂದೆ ಆರಂಭವಾದ 'ಶುಭ ಕಾಲ ಬರತೈತೆ' ಎಂಬ ಕನ್ನಡ ಚಿತ್ರವೊಂದರಲ್ಲಿ ಅವರು ನಟಿಸಿದ್ದರೂ ಅದ್ಯಾಕೋ ಆ ಚಿತ್ರ ಅರ್ಧಕ್ಕೆ ನಿಂತಿತ್ತು. ಆ ಚಿತ್ರವನ್ನು ನಾಗಾಭರಣ ನಿರ್ದೇಶಿಸಿದ್ದರು ಮತ್ತು ನಾಯಕಿಯಾಗಿ ಶೃತಿ ನಟಿಸಿದ್ದರು. ಆನಂತರ ಕೋಕಿಲ ಮೋಹನ್ ಮತ್ತೆ ಕನ್ನಡದಲ್ಲಿ ಕಾಣಿಸಿಕೊಳ್ಳಲೇ ಇಲ್ಲ.

ಈಗ 'ಗೌತಮ್' ಎಂಬ ಕನ್ನಡ ಚಿತ್ರದಲ್ಲಿ 'ನೆನಪಿರಲಿ' ಖ್ಯಾತಿಯ ಪ್ರೇಮ್‌ನ ಅಣ್ಣನಾ ಮೋಹನ್ ನಟಿಸಲಿದ್ದಾರೆ. 'ಬಡವರ ಕಮಲಹಾಸನ್' ಎಂದೇ ಒಂದು ಕಾಲದಲ್ಲಿ ಖ್ಯಾತಿಗಳಿಸಿ ಕೋಕಿಲಾ ಮೋಹನ್ ಇತ್ತೀಚಿಗೆ ತಮಿಳಿನಲ್ಲಿ ಕೂಡಾ ನಟಿಸಿದ್ದು ಬಹಳ ಕಡಿಮೆ. ಅಂತಹ ಮೋಹನ್‌ನನ್ನು ನಮ್ಮವರು ಈಗ ರತ್ನಗಂಬಳಿ ಹಾಸಿ ಕರೆಸಿದ್ದಾರೆ.

ನಾಣಿ ಮಡಿಲಿಗೆ ವಿಷ್ಣು ದಾಖಲೆ!






ವಿಷ್ಣುವರ್ಧನ್ ಅಭಿನಯದ 200ನೇ ಚಿತ್ರ ಯಾವುದು? ಅದರ ಹೆಸರೇನು? ಆ ಚಿತ್ರವನ್ನು ಯಾರು ನಿರ್ದೇಶಿಸಲಿದ್ದಾರೆ? ನಾಯಕಿ ಯಾರು? ಎಂಬಿತ್ಯಾದಿ ವಿಷಯಗಳ ಬಗ್ಗೆ ವಿಷ್ಣು ಅಭಿಮಾನಿಗಳಲ್ಲಿ ಕುತೂಹಲ ಉದ್ಭವಿಸಿದೆ. ಈ ಬಗ್ಗೆ ಈಗಾಗಲೇ ದಿನ ಕ್ಕೊಂದು ರೀತಿಯ ಚರ್ಚೆ ನಡೆಯುತ್ತಲೇ ಇದೆ. ನಮ್ಮ ಕಚೇರಿಗೂ ಅಭಿಮಾನಿಗಳು ಫೋನ್ ಮಾಡಿ ವಿಷ್ಣು ಅಭಿನಯದ 200ನೇ ಚಿತ್ರದ ಬಗ್ಗೆ ವಿಚಾರಿಸುತ್ತಲೇ ಇದ್ದಾರೆ. ವಿಷ್ಣು ಅಭಿಮಾನಿಗಳಿಗಾಗಿ ನಾವು ಅವರ ಡಬಲ್ ಸೆಂಚುರಿಯ ಬಗ್ಗೆ ಹುಡುಕುತ್ತಾ ಹೋದಾಗ ಕೆಲವು ಮಾಹಿತಿಗಳು ಸಿಕ್ಕವು. ಅದರಂತೆ 'ಆಪ್ತಮಿತ್ರ'ದ ಪಾಲುದಾರರಲ್ಲಿ ಒಬ್ಬರಾದ ಕೃಷ್ಣೇಗೌಡರು ಬಹಳ ಹಿಂದೆಯೇ "200ನೇ ಚಿತ್ರ ನಮಗೆ ಕೊಡಬೇಕು ಎಂದು ವಿಷ್ಣು ಅವರನ್ನು ಬುಕ್ಕು ಮಾಡಿದ್ದ ವಿಷಯ ಗೊತ್ತಾಯಿತು. ಮಾತ್ರವಲ್ಲ, ಅದನ್ನು ಎಸ್. ನಾರಾಯಣ್ ನಿರ್ದೇಶಿಸಲಿರುವುದೂ ಗ್ಯಾರಂಟಿಯಾಗಿದೆ.

ಈ ತನಕ ವಿಷ್ಣು-200 ಚಿತ್ರದ ಬಗ್ಗೆ ಯಾರಿಗೂ ತಿಳಿದಿರದ ಈ ಮಾಹಿತಿಯನ್ನು ವಿಷ್ಣು ಅಭಿಮಾನಿಗಳಿಗಾಗಿ ನಾವು ಇಲ್ಲಿ ನೀಡುತ್ತಿದ್ದೇವೆ.



'ಸಂಗಮ' ಗಣೇಶ್, ವೇದಿಕಾ

'ವಿಮುಕ್ತಿ'ಗಾಗಿ ಬರುತ್ತಾಳೆ ಭಾವನಾ...!



ಮೊನ್ನೆ ಮೊನ್ನೆ 'ಇಂತಿ ನಿನ್ನ ಪ್ರೀತಿಯ...' ಚಿತ್ರದಲ್ಲಿ ರಸವತ್ತಾಗಿ ನಟಿಸಿದ್ದ ನಾಯಕಿ ಭಾವನಾ ಮತ್ತೆ ಕನ್ನಡ ಚಿತ್ರವೊಂದರಲ್ಲಿ ನಟಿಸಲು ಮುಂಬೈನಿಂದ ಬೆಂಗಳೂರಿಗೆ ಹಾರಿ ಬಂದಿದ್ದಾಳೆ. ಆದರೆ ಈ ಬಾರಿ ಆಕೆ ಕಾಣಿಸಿಕೊಳ್ಳುತ್ತಿರುವುದು ಗ್ಲಾಮರ್ ರಹಿತವಾದ ಪಾತ್ರದಲ್ಲಿ. ಚಿತ್ರದ ಹೆಸರು 'ವಿಮುಕ್ತಿ'. ನಿರ್ದೇಶಕ ಪಿ.ಶೇಷಾದ್ರಿ.

ಹೇಳಿಕೇಳಿ ಇದು ಸೆಪ್ಟೆಂಬರ್ ತಿಂಗಳು. ಸಹಜವಾಗಿ ಕಲಾತ್ಮಕ ಚಿತ್ರಗಳ ನಿರ್ದೇಶಕರು ಎಚ್ಚೆತ್ತುಕೊಳ್ಳುವ ಮಾಸವಿದು. ಶೇಷಾದ್ರಿ ತರಹ ಇನ್ನು ನಾಲ್ಕೈದು ಕಲಾತ್ಮಕ ನಿರ್ದೇಶಕರು ಸದ್ಯದಲ್ಲೇ ತಮ್ಮ ತಮ್ಮ ಹೊಸ ಚಿತ್ರ ಆರಂಭಿಸುವ ಯೋಜನೆಯಲ್ಲಿದ್ದಾರೆ.

ಅಂದಹಾಗೆ ಭಾವನಾ ಒಂದು ವಿಷಯದಲ್ಲಿ ತುಂಬಾ ಅದೃಷ್ಟವಂತೆ. ಕಳೆದ ಬಾರಿ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಶಾಂತಿ' ಚಿತ್ರದಲ್ಲಿ ನಟಿಸಿದ್ದಕ್ಕೆ ಆಕೆಗೆ ಅತ್ಯುತ್ತಮ ನಟಿಯೆಂಬ ರಾಜ್ಯಪ್ರಶಸ್ತಿ ದೊರೆತಿತ್ತು, ಇತ್ತೀಚೆಗೆ ಬರಗೂರು ಅವರು 'ಉಗ್ರಗಾಮಿ' ಚಿತ್ರವನ್ನು ಆರಂಭಿಸಿದಾಗ ಅವರು ಮೊದಲು ಆಹ್ವಾನ ನೀಡಿದ್ದು ಭಾವನಾಳಿಗೆ. ಆದರೆ ಆಗ ಆಕೆಯ ಆರೋಗ್ಯ ಕೈಕೊಟ್ಟದ್ದರಿಂದ ಭಾವನಾ ಬದಲಿಗೆ ನೀತೂ ನಾಯಕಿಯಾದಳು. ಹೀಗಾಗಿ ಈ ಬಾರಿ ಮತ್ತೊಂದು ಪ್ರಶಸ್ತಿ ಗಳಿಸುವ ಅವಕಾಶ ತಪ್ಪಿಹೋಯ್ತಲ್ಲ ಎಂದು ಭಾವನಾ ಕೊರಗುತ್ತಿರುವಾಗಲೇ ಆಕೆಗೆ ಶೇಷಾದ್ರಿ ಕಡೆಯಿಂದ ಬುಲಾವ್ ಬಂದಿತು. 'ವಿಮುಕ್ತಿ' ಚಿತ್ರೀಕರಣ ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ.

ಕನ್ನಡಕ್ಕೆ ಬಂದ ಕಬೀರ್‌ಲಾಲ್!



ಈಗ ಹಿಂದಿ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ಛಾಯಾಗ್ರಾಹಕ ಕಬೀರ್‌ಲಾಲ್ ಬಹಳ ಸಮಯದ ನಂತರ ಕನ್ನಡ ಚಿತ್ರವೊಂದರಲ್ಲಿ ಕೆಲಸ ಮಾಡಲು ಬರುತ್ತಿದ್ದಾರೆ. ರಘುರಾಮ್ ಅವರ ಚೊಚ್ಚಲ ನಿರ್ದೇಶನದ 'ಚೆಲುವೆ ನಿನ್ನೆ ನೋಡಲು' ಚಿತ್ರದ ಛಾಯಾಗ್ರಾಹಕರಾಗಿ ಕಬೀರ್‌ಲಾಲ್ ಆಯ್ಕೆಯಾಗಿದ್ದಾರೆ. ವಿಶ್ವದ ಹೊಸ ಏಳು ಅದ್ಭುತಗಳಲ್ಲಿ ಚಿತ್ರೀಕರಣವಾಗಲಿರುವ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ನಾಯಕ.

ಕಬೀರ್‌ಲಾಲ್ ಈ ಹಿಂದೆ ಸುಮಾರು 25 ಕನ್ನಡ ಚಿತ್ರಗಳಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದರು. ಸಾಯಿಪ್ರಕಾಶ್ ಚಿತ್ರಗಳಿಗೆ ಬಹುತೇಕ ಅವರೇ ಛಾಯಾಗ್ರಾಹಕರು. ಆದರೆ ಒಮ್ಮೆ ಹಿಂದಿಗೆ ಕಾಲಿಟ್ಟ ನಂತರ ನಾಯಕ ನಟರಾದ ಸಲ್ಮಾನ್ ಖಾನ್ ಮತ್ತು ಸಂಜಯ್ ದತ್ ಅವರ ಅಚ್ಚುಮೆಚ್ಚಿನ ಛಾಯಾಗ್ರಾಹಕರಾದರು. ಬಾಲಿವುಡ್‌ನಲ್ಲಿ ಚಿತ್ರವೊಂದಕ್ಕೆ ಒಂದು ಕೋಟಿ ಸಂಭಾವನೆ ಸಿಗುವಾಗ ಅವರೇಕೆ ಕನ್ನಡದ ಕಡೆಗೆ ಬರುತ್ತಾರೆ? ವಿಶೇಷವೆಂದರೆ ಕಬೀರ್‌ಲಾಲ್ ಅವರ ತಂದೆ ಎಸ್.ಎಸ್. ಲಾಲ್ ಕೂಡಾ ಛಾಯಾಗ್ರಾಹಕರಾಗಿದ್ದರು. ಕಬೀರ್‌ಲಾಲ್ ಸಹೋದರರಾದ ಜಾನಿಲಾಲ್ ಮತ್ತು ಇನ್ನಿಬ್ಬರು ಸಹೋದರರು ಕೂಡಾ ಛಾಯಾಗ್ರಾಹಕರೇ. ಹೀಗೆ ಛಾಯಾಗ್ರಹಣಕ್ಕೆ ತಮ್ಮ ಕುಟುಂಬವನ್ನೆ ಮೀಸಲಿಟ್ಟಿರುವ ಈ ಪ್ರತಿಭಾವಂತರ ಕನ್ನಡಕ್ಕೆ ರೀ-ಎಂಟ್ರಿ ಸಂತೋಷ ತರುವಂತಹದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore